ಜನಶಕ್ತಿ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 24
ಜೂನ್ 10, 2012

ಪುಟ 16 ರೂ. 5/-





ದೇಶವ್ಯಾಪಿ ಪ್ರತಿಭಟನೆ :
ಪೆಟ್ರೋಲ್ ದರ ಏರಿಕೆ ವಿರುದ್ಧ ಬೀದಿಗೆ ಬಂದ ಜನರ ಆಕ್ರೋಶ

ಜಿಮ್ ! ಜಿಮ್ !! ಯಾಕಿಷ್ಟು ಆತುರ?



ಪೆಟ್ರೋಲ್ ಬೆಲೆ ಏರಿಕೆಯ ತರ್ಕಗಳು ಬೃಹದಾಕಾರದ ಮೋಸಗಳು

ಬಿಜೆಪಿ :
ದುರಾಡಳಿತ, ಜನದ್ರೋಹಗಳೇ ಸಾಧನೆಯ ಮೈಲುಗಲ್ಲು !



ಬಿರುಸಾಗಿ ಸಾಗಿದೆ ಬೀಡಿ ಕಾರ್ಮಿಕರ ಮುಷ್ಕರ

"ಬಿಕ್ಕಟ್ಟು ಎಷ್ಟೇ ತೀವ್ರವಾಗಿದ್ದರೂ ಬಂಡವಾಳಶಾಹಿ ತಾನಾಗಿಯೇ ಬೀಳುವುದಿಲ್ಲ, ಅದನ್ನು ಕಿತ್ತೆಸೆಯಬೇಕಾಗುತ್ತದೆ."

ಸೈದ್ಧಾಂತಿಕ ವಿಷಯಗಳ ಬಗೆಗಿನ ಕರಡು ನಿರ್ಣಯಗಳ ಅಂಗೀಕಾರ

ಏಪ್ರಿಲ್ 4 ರಿಂದ 9, 2012 ರವರೆಗೆ ನಡೆದ ಸಿಪಿಐ(ಎಂ) ಪಕ್ಷದ 20 ನೇ ಮಹಾಧಿವೇಶನದಲ್ಲಿ ಚರ್ಚಿಸಿ ಅಂತಿಮಗೊಳಿಸಲಾದ ಅತ್ಯಂತ ಮಹತ್ವದ ಸೈದ್ದಾಂತಿಕ ನಿರ್ಣಯದ ಕುರಿತ ಚರ್ಚೆಯ ವರದಿಯಿದು. 'ಕೆಲವು ಸೈದ್ದಾಂತಿಕ ವಿಷಯ'ಗಳು ಎಂಬ ಈ ಕರಡನ್ನು ನಿರ್ಣಯಗಳನ್ನು ಪಾಲಿಟ್ ಬ್ಯುರೋ ಸದಸ್ಯ ಸೀತಾರಾಂ ಯೆಚೂರಿ ಸಮ್ಮೇಳನಕ್ಕೆ ಪರಿಚಯಿಸಿದರು. ಮಂಡನೆಯ ಸಾರ, ಮತ್ತು ಮೂಡಿ ಬಂದ ಚರ್ಚೆ, ಅದರ, ಕ್ರೋಢೀಕರಣ ಹೀಗಿದೆ.

ಜಿ. ಮಮತ
ಕನ್ನಡಕ್ಕೆ : ಜಿ.ಎಸ್.ಮಣಿ

ಸೈದ್ಧಾಂತಿಕ ನಿರ್ಣಯವನ್ನು ಅಂಗೀಕರಿಸಬೇಕಾದ ಈ ಸಂದರ್ಭದ ಮಹತ್ವದ ಬಗ್ಗೆ ಮಾತನಾಡುತ್ತಾ ಸೀತಾರಾಮ ಯೆಚೂರಿಯವರು ಈ ನಿರ್ಣಯ ಜಾಗತಿಕ ಬಿಕ್ಕಟ್ಟು ತೀವ್ರವಾಗಿರುವ ಈ ಸಮಯದಲ್ಲಿ ಬಂದಿದೆ ಎಂದರು. ಈ ಬಿಕ್ಕಟ್ಟು ಎಂದಿನ ಆವರ್ತನ ಬಿಕ್ಕಟ್ಟಲ್ಲ. ಬದಲಿಗೆ ಬಂಡವಾಳಶಾಹಿಯ ರಚನಾತ್ಮಕ ಬದಲಾವಣೆಗಳ ಹಿನ್ನೆಲೆಯಲ್ಲಿ ಉದ್ಭವಿಸಿರುವ ಬಿಕ್ಕಟ್ಟು ಎಂದರು. ಸಾಮ್ರಾಜ್ಯಶಾಹಿಯ ಆಕ್ರಮಣಕೋರತನ ಸಾಮಾಜಿಕ, ರಾಜಕೀಯ, ಆರ್ಥಿಕ ಸಾಂಸ್ಕೃತಿಕ ಮತ್ತು 'ಸೈದ್ಧಾಂತಿಕ ಕ್ಷೇತ್ರಗಳಲ್ಲಿ ತೀವ್ರವಾಗಿದೆ. ಈ ರಾಜಕೀಯ ನಿರ್ಣಯ ಈ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳುವ ವಿಶ್ಲೇಷಿಸುವ ತಿರುಳನ್ನು ಹೊಂದಿದ್ದರೂ ಅದರ ಉದ್ದೇಶ ಈ ವ್ಯವಸ್ಥೆಯನ್ನೇ ಬದಲಾಯಿಸುವುದು ಎಂದರು.

ಶೋಷಣೆ-ಬಿಕ್ಕಟ್ಟಿಲ್ಲದೇ ಬಂಡವಾಳಶಾಹಿ ಇಲ್ಲ....

ಬಂಡವಾಳಶಾಹಿಯು ಬಿಕ್ಕಟ್ಟು ಮತ್ತು ಮನುಕುಲದ ಶೋಷಣೆ ಇಲ್ಲದೆ ಬದುಕಲಾರದು. ಇಂತಹ ಶೋಷಣೆಯ ವಿರುದ್ಧ ಪ್ರತಿರೋಧ ಮತ್ತು ಹೋರಾಟ ಜಗತ್ತಿನಾದ್ಯಂತ ಬೆಳೆಯುತ್ತಿದೆ. ಅಮೇರಿಕದ ಅಧಿಪತ್ಯಕ್ಕೆ ಸವಾಲು ಇಲ್ಲದೆ ಇಲ್ಲ ಎಂಬುದನ್ನೂ ಇದು ತೋರಿಸುತ್ತದೆ. ಆದರೆ ಇದು ರಾಜಕೀಯ ಪರ್ಯಾಯದ ಮಟ್ಟವನ್ನು ತಲುಪಿಲ್ಲ. ಬಿಕ್ಕಟ್ಟು ಎಷ್ಟೇ ತೀವ್ರವಾಗಿದ್ದರೂ ಬಂಡವಾಳಶಾಹಿ ತಾನಾಗಿಯೇ ಬೀಳುವುದಿಲ್ಲ. ಅದನ್ನು ಕಿತ್ತೆಸೆಯಬೇಕಾಗುತ್ತದೆ. ನಮ್ಮ ದೇಶದಲ್ಲಿ ಇದನ್ನು ನಾವು ಹೇಗೆ ಸಾಧಿಸ ಬಯಸಿದ್ದೇವೆ ಎಂಬುದೇ ಈ ನಿರ್ಣಯದ ತಿರುಳು. ಈ ವಸ್ತು ಸ್ಥಿತಿಯನ್ನು ಬದಲಾಯಿಸಲು ಹೇಗೆ ಶಕ್ತಿಗಳನ್ನು ಒಗ್ಗೂಡಿಸಿ ಬಲಪಡಿಸಬೇಕೆಂಬುದೇ ಈ ನಿರ್ಣಯದ ಉದ್ದೇಶ ಎಂದು ಯೆಚೂರಿ ವಿವರಿಸಿದರು.

ದಿಕ್ಚ್ಯುತಿಯ ಸೈದ್ಧಾಂತಿಕ ಆಕ್ರಮಣಗಳ ವಿರುದ್ಧ...

ಪಕ್ಷದ ಮತ್ತು ಅದರ ಸಿದ್ಧಾಂತಗಳ ವಿರುದ್ಧ ಸೈದ್ಧಾಂತಿಕ ಆಕ್ರಮಣವನ್ನು ಎದುರಿಸಿ ಹೋರಾಡುವ ಪರಂಪರೆಯನ್ನೇ ನಾವು ಹೊಂದಿದ್ದೇವೆ. ಪರಿಷ್ಕರಣವಾದದ ವಿರುದ್ಧ ಹೋರಾಡುತ್ತ ಭಾರತೀಯ ಕ್ರಾಂತಿಯನ್ನು ಮುನ್ನಡೆಸುವ ಪ್ರಯತ್ನದಲ್ಲಿ ನಾವು ಮಾರ್ಕ್ಸ್‌ವಾದ – ಲೆನಿನ್‌ವಾದವನ್ನು ಭಾರತೀಯ ಪರಿಸ್ಥಿತಿಗಳಿಗೆ ಅನ್ವಯಗೊಳಿಸುವ ಕಾರ್ಯದಲ್ಲಿ ಗಟ್ಟಿಗೊಳ್ಳುತ್ತಿದ್ದೇವೆ. ನಾವು ಅದೇ ಸಮಯದಲ್ಲಿ ಎಡ ದುಸ್ಸಾಹಸವಾದಿ ಪಂಥವಾದಿ ಶಕ್ತಿಗಳ ವಿರುದ್ಧ ಹೋರಾಡಬೇಕಾಯಿತು. ಸೈದ್ಧಾಂತಿಕ ಆಕ್ರಮಣಗಳ ವಿರುದ್ಧ ಹೋರಾಡುವುದು ನಿರಂತರ ಪ್ರಕ್ರಿಯೆ. ಇದು ನಮ್ಮ ಪರಂಪರೆ. ದುಡಿಯುವ ವರ್ಗಗಳ ಹೋರಾಟ ಕಾರ್ಮಿಕ ಹಕ್ಕುಗಳನ್ನು ಸಾಧಿಸುವಲ್ಲಿ ದಾರಿ ತೋರಿಸಿತು ಎಂಬುದನ್ನು ಇತಿಹಾಸ ದೃಢೀಕರಿಸುತ್ತದೆ. ತೆಲಂಗಾಣ ಸಶಸ್ತ್ರ ಹೋರಾಟ, ಪುನ್ನಪ್ರ ವಯಲಾರ್, ತೇಭಾಗ, ವಾರ್ಲಿ ಆದಿವಾಸಿ ಹೋರಾಟಗಳು ಭೂ ಸುಧಾರಣೆಯ ಪ್ರಶ್ನೆಗಳನ್ನು ಮುಂಚೂಣಿಗೆ ತಂದವು. ವಿಶಾಲಾಂಧ್ರ ಮತ್ತು ಐಕ್ಯ-ಕೇರಳ ಚಳುವಳಿಗಳು ರಾಜ್ಯಗಳ ಭಾಷಾವಾರು ಪುನರ್‌ರಚನೆಯ ಪ್ರಶ್ನೆಗಳನ್ನು ಮುಂದೆ ತಂದವು. ಇವು ಆಧುನಿಕ ಭಾರತದ ಪ್ರಭುತ್ವದ ಪ್ರಮುಖ ಸ್ತಂಭಗಳು. ಸೈದ್ಧಾಂತಿಕ ದಿಕ್ಚ್ಯುತಿಯ ವಿರುದ್ಧದ ಹೋರಾಟ ಭಾರತೀಯ ಜನತೆಯ ಸಮರಧೀರ ಹೋರಾಟಗಳು ನಮ್ಮ ಪರಂಪರೆಯಾಗಿ ಸಿಪಿಐ(ಎಂ) ಪ್ರಮುಖ ಕಮ್ಯೂನಿಸ್ಟ್ ಮತ್ತು ಎಡ ಶಕ್ತಿಯಾಗಿ ಹೊರ ಹೊಮ್ಮುವುದರಲ್ಲಿ ಕೊನೆಗೊಂಡಿತು. ಈ ಸೈದ್ಧಾಂತಿಕ ಹೋರಾಟಗಳಲ್ಲಿ ಮಾರ್ಕ್ಸ್‌ವಾದಿ – ಲೆನಿನ್‌ವಾದಿ ನಿಲುವುಗಳನ್ನು ನಾವು ಸರಿಯಾಗಿ ಅಳವಡಿಸಿಕೊಂಡೆವೆಂಬುದನ್ನು ಇದು ನಿಸ್ಸಂಶಯವಾಗಿ ಎತ್ತಿ ತೋರಿಸಿತು.



ಸಾಮ್ರಾಜ್ಯಶಾಹಿಯ ಜಾಗತೀಕರಣದ ಪರಿಣಾಮಗಳು

ಇಂದು ಸಾಮ್ರಾಜ್ಯಶಾಹಿಯ ಜಾಗತೀಕರಣದ ಪ್ರಕ್ರಿಯೆಯಿಂದಾಗಿ ಆರ್ಥಿಕ ಅಸಮಾನತೆ ತೀವ್ರವಾಗಿ ಹೆಚ್ಚುತ್ತಿದೆ. ನಾವು ಕಾಣುತ್ತಿರುವ ಬೆಳವಣಿಗೆ ಉದ್ಯೋಗರಹಿತ ಬೆಳವಣಿಗೆ. ಜಗತ್ತಿನಾದ್ಯಂತ ಜನತೆಯ ಕೊಳ್ಳುವ ಸಾಮರ್ಥ್ಯ ಕುಂಠಿತವಾಗುತ್ತಿರುವುದರಿಂದ ಅದು ಬಂಡವಾಳಶಾಹಿ ಉತ್ಪಾದನೆಗೂ ತಡೆ ಹಾಕಿದೆ. ಆದ್ದರಿಂದ ಈ ಜಾಗತೀಕರಣ ಪ್ರಕ್ರಿಯೆ ತಾಳಿಕೆ ಸಾಮರ್ಥ್ಯವಿಲ್ಲದ್ದಾಗಿದೆ ಮತ್ತು ಅದು ಈಗಿನ ಬಿಕ್ಕಟ್ಟಿನ ಸ್ವರೂಪದಲ್ಲಿ ಸ್ಫೋಟಿಸಿದೆ. ಜನರ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಅಗ್ಗದ ಸಾಲವನ್ನು ಲಭ್ಯ ಮಾಡಿದರೂ ಅದು ಬೇಡಿಕೆಯನ್ನು ಹೆಚ್ಚಿಸಲಿಲ್ಲ. ಮಾರ್ಕ್ಸ್ ಅಂದೇ ಹೇಳಿದಂತೆ "ಬಂಡವಾಳಶಾಹಿಯು ವ್ಯಕ್ತಿಗಳಿಗಾಗಿ ವಸ್ತುಗಳನ್ನು ಸೃಷ್ಟಿಸುವುದಷ್ಟೇ ಅಲ್ಲ; ವಸ್ತುಗಳಿಗಾಗಿ ವ್ಯಕ್ತಿಗಳನ್ನು ಸೃಷ್ಟಿಸುತ್ತದೆ".

ಇರುವುದೊಂದೆ ದಾರಿ

ಬಿಕ್ಕಟ್ಟಿನಿಂದ ಹೊರ ಬರುವ ಪ್ರಯತ್ನಗಳನ್ನು ಮಾಡಲಾಯಿತು. ಬಂಡವಾಳಶಾಹಿಯು ಪ್ರಭುತ್ವದ ಆಶ್ರಯದಲ್ಲಿ ಒಡೆದ ಗುಳ್ಳೆಗಳು ಮತ್ತು ಬೃಹತ್ ಬಂಡವಾಳಶಾಹಿ ಕಂಪನಿಗಳನ್ನು ಪುನರುಜ್ಜೀವನಗೊಳಿಸಿತು. ಏಂಗೆಲ್ಸ್ ಹೇಳಿದಂತೆ ಬಂಡವಾಳಶಾಹಿಯು ಒಂದು ಬಿಕ್ಕಟ್ಟಿನಿಂದ ಹೊರಬರುವ ಸಮಯದಲ್ಲೇ ಇನ್ನೂ ಆಳವಾದ ಬಿಕ್ಕಟ್ಟಿನ ಬೀಜಗಳನ್ನು ಬಿತ್ತಿರುತ್ತದೆ. ಈ ಬಂಡವಾಳಶಾಹಿ ಕಂಪನಿಗಳ ದಿವಾಳಿ ದೇಶಗಳ ದಿವಾಳಿಗೆ ದಾರಿ ಮಾಡಿಕೊಟ್ಟಿತು. ಸರಕಾರ ಬಂಡವಾಳಶಾಹಿ ಕಂಪನಿಗಳ ಋಣಭಾರಕ್ಕೆ ಪರಿಹಾರ ಧನ ನೀಡಿದ್ದರಿಂದ ಸರಕಾರಗಳ ಋಣಭಾರ ಹೆಚ್ಚಿತು. ಯುರೋಪಿನ ಬಿಕ್ಕಟ್ಟು ಇದಕ್ಕೊಂದು ಉದಾಹರಣೆ. ಸರಕಾರಿ ವೆಚ್ಚದ ಕಡಿತದಿಂದ ಜನ ಸಾಮಾನ್ಯರ ಹೊರೆ ಹೆಚ್ಚಿತು. ಗ್ರೀಸ್ ದೇಶವೊಂದರಲ್ಲೇ ಹತ್ತು ತಿಂಗಳುಗಳಲ್ಲಿ ಹದಿಮೂರು ಹರತಾಳಗಳಾದವು. ಇದಕ್ಕೆ ಇರುವುದೊಂದೇ ದಾರಿ ಬಂಡವಾಳಶಾಹಿಯನ್ನು ಕಿತ್ತೆಸೆಯುವುದು.

ಹಣಕಾಸು ಬಂಡವಾಳವು ಅಂತರ್‌ರಾಷ್ಟ್ರೀಕರಣಗೊಳ್ಳುತ್ತಿರುವ ಗುಣ ಲಕ್ಷಣ

ಹಣಕಾಸು ಬಂಡವಾಳವು ಅಂತರ್‌ರಾಷ್ಟ್ರೀಕರಣಗೊಳ್ಳುತ್ತಿರುವ ಗುಣ ಲಕ್ಷಣಗಳನ್ನು ಕಳೆದ ಮೂರು ಮಹಾಧಿವೇಶನದ ಚರ್ಚೆಗಳಲ್ಲೂ ನಾವು ಗುರುತಿಸಿದ್ದೇವೆ. ಅದು ಎಲ್ಲ ಸೀಮೆಗಳಿಗೆ ಅತೀತವಾಗಿ ಭೂಗೋಳದ ಉದ್ದಗಲ ಹರಿದಾಡುತ್ತಿದೆ. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳಲ್ಲಿನ ತ್ವರಿತ ಬೆಳವಣಿಗೆಗಳು ಅದನ್ನು ಅತ್ಯಂತ ಚಲನಶೀಲಗೊಳಿಸಿವೆ. ತನ್ನ ಲಾಭ ಗರಿಷ್ಟಗೊಳಿಸುವಿಕೆಯನ್ನು ಖಾತ್ರಿಗೊಳಿಸಿಕೊಳ್ಳುವುದಕ್ಕಾಗಿ ಅದು ತನಗೆ ಯಾವುದೇ ಅಡೆ ತಡೆಗಳಿಲ್ಲದ – ತನ್ನ ಹರಿದಾಟ ತಡೆರಹಿತವಾಗಿದ್ದು, ವಿವಿಧ ದೇಶಗಳ ಗಡಿಗಳು ತನಗೆ ಮುಕ್ತವಾಗಿರುವಂತಹ ಜಾಗತಿಕ ವ್ಯವಸ್ಥೆಯನ್ನು ಸೃಷ್ಟಿಸಿಕೊಳ್ಳಲು ಹವಣಿಸುತ್ತಿದೆ. **ಇತರೆಲ್ಲ ರೂಪದ ಬಂಡವಾಳವೂ ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಹಿಡಿತಕ್ಕೆ ಸಿಲುಕಲಿವೆ.**

ಸಾಮ್ರಾಜ್ಯಶಾಹಿ ಜಾಗತೀಕರಣವು ಬಂಡವಾಳಶಾಹಿಯ **ಆಂತರಿಕ ದ್ವಂದ್ವಾತ್ಮಕ ವೈರುಧ್ಯ (internal dynamcs)**ಗಳ ಪ್ರತಿಫಲ. ಲಾಭದ ಗರಿಷ್ಟಗೊಳಿಸುವಿಕೆಗಾಗಿ ಹೊಸ ಹೊಸ ಅವಕಾಶಗಳ ಸೃಷ್ಟಿ ಅಗತ್ಯವಾಗುತ್ತದೆ. ಇದಕ್ಕಾಗಿ ಹಣಕಾಸು ಬಂಡವಾಳವು ಮೂರನೇ ಜಗತ್ತಿನ ದೇಶಗಳ ಆರ್ಥಿಕತೆಗಳನ್ನು ಮುಕ್ತಗೊಳಿಸಿ ತೆರೆಯಲು ಹವಣಿಸುತ್ತದೆ. ಸಾರ್ವಜನಿಕ ವಲಯದ ಖಾಸಗೀಕರಣವನ್ನು, ಸೇವೆಗಳು ಮತ್ತು ಸರಕುಗಳ ಖಾಸಗೀಕರಣವನ್ನು ಬಯಸುತ್ತದೆ, ಖನಿಜ ಮತ್ತು ನೈಸರ್ಗಿಕ ಸಂಪನ್ಮೂಲಗಳ ತಡೆರಹಿತ ಲಭ್ಯತೆ ಬಯಸುತ್ತದೆ. ಸಾರ್ವಭೌಮ ದೇಶಗಳು ತಮ್ಮ ಸಾರ್ವಭೌಮತೆಯನ್ನು ಬಳಸಿ ಅಂತರ್‌ರಾಷ್ಟ್ರೀಯ ಹಣಕಾಸು ಬಂಡವಾಳದ ಚಲನೆಗೆ ತಡೆ ಹಾಕುವುದನ್ನು ಅದು ಸಹಿಸುವುದಿಲ್ಲ. ಇಂದು ಅಭಿವೃದ್ಧಿಶೀಲ ದೇಶಗಳಲ್ಲಷ್ಟೆ ಅಲ್ಲ, ಅಭಿವೃದ್ಧಿ ಹೊಂದಿದ ದೇಶಗಳಲ್ಲೂ ಉದ್ದಿಮೆಗಳ ನಾಶವನ್ನು ನಾವು ಕಾಣುತ್ತಿದ್ದೇವೆ.

'ಲೂಟಿಕೋರ ಬಂಡವಾಳ ಶೇಖರಣೆ'ಯು ಸಂಪನ್ಮೂಲಗಳ ಬಲಾತ್ಕಾರದ ಸ್ವಾಧೀನದ ರೂಪದಲ್ಲಿ ಕಂಡು ಬರುತ್ತಿರುವುದು ಸಾಮ್ರಾಜ್ಯಶಾಹಿ ಜಾಗತೀಕರಣದ ಪ್ರಧಾನ ಲಕ್ಷಣವಾಗಿದೆ. ಈ ಬಗೆಯ ಬಂಡವಾಳ ಶೇಖರಣೆಯ ಸ್ವರೂಪವು ಜಗತ್ತಿನ

ಪುಟ 4 ಕ್ಕೆ....

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ದುರಾಡಳಿತ, ಜನದ್ರೋಹಗಳೇ ಸಾಧನೆಯ ಮೈಲುಗಲ್ಲು

ರಾಜ್ಯದಲ್ಲಿ ನಾಲ್ಕು ವರುಷಗಳನ್ನು ಪೂರ್ೈಸಿದ ಬಿಜೆಪಿಯ ಆಡಳಿತ ಜನರ ಪಾಲಿಗೆ ಒಂದು ಮಹಾ ಶಾಪ. ಅಧಿಕಾರ ವಂಚಿತರೆಂಬ ಅನುಕಂಪ ಹಾಗೂ ಕಾಂಗ್ರೆಸ್ , ಜೆಡಿ ಎಸ್ ಗಳ ವೈಫಲ್ಯಗಳಿಂದಾದ ಅತೃಪ್ತಿ, ಅಭಿವೃದ್ಧಿಯ ಹರಿಕಾರರು ತಾವೇ ಎಂಬಾಮಿಷ ಒಡ್ಡಿ ಅಧಿಕಾರ ಗಿಟ್ಟಿಸಿದ ಬಿಜೆಪಿ ಈ ಅವದಿಯುದ್ದಕ್ಕೂ ಜನತೆಗೆ ಎಸಗಿದ್ದು ಮಹಾದ್ರೋಹವೇ. ತಾನೊಂದು 'ಭಿನ್ನ ಸಂಸ್ಕೃತಿಯ ಪಕ್ಷ'ವೆಂದು ಹೇಳಿಕೊಂಡರೂ ಅದರ ಅಧಿಕಾರದಾಹಿತನ, ಕಿತ್ತಾಟ, ಗುಂಪುಗಾರಿಕೆ, ಭ್ರಷ್ಟತೆ, ನಾಡಿನ ಸಂಪನ್ಮೂಲಗಳ ಯಥೇಚ್ಛ ಲೂಟಿ, ಅನಾಗರೀಕ ನಡವಳಿಕೆ,ಕೋಮುವಾದೀ ಧಾಳಿಗಳು ಅದರ ನಿಜ, ವಿಕೃತ ಮುಖವನ್ನು ಅನಾವರಣಗೊಳಿಸಿತು. ಆಂತರಿಕ ಕಿತ್ತಾಟದ ಬೇಗುದಿಯಲ್ಲಿ ಸದಾ ನರಳುತ್ತಿರುವ ಬಿಜೆಪಿಯು ನಾಲ್ಕು ವರುಷಗಳ 'ಸಾಧನೆಯ ಸಂಭ್ರಮಾಚರಣೆ'(?!) ಮಾಡಲಾಗದ ಅದರ ಅನಿವಾರ್ಯ ಸ್ಥಿತಿಯೇ ಅದು ತಲುಪಿರುವ ರಾಜಕೀಯ, ನೈತಿಕ, ಸಂಘಟನಾ ಅಧಃಪತನದ ಸೂಚಕವಾಗಿದೆ. ಅದೇ ಹೊತ್ತಿನಲ್ಲೇ ಇಲ್ಲಿ ಹಾಜರಿದ್ದ ಬಿಜೆಪಿ ಅದ್ಯಕ್ಷರನ್ನೂ ಒಳಗೊಂಡು ಎಲ್ಲಾ ರಾಷ್ಟೀಯ ನಾಯಕರಿದ್ದರೂ ಆ ಬಗ್ಗೆ ಏನೂ ಹೇಳದೇ ಹೋದುದು ಹೈಕಮಾಂಡ್‌ನ ಹತಾಶೆಯ ಪ್ರತಿಬಿಂಬವಾಗಿದೆ.

ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಬೀಜ,ಗೊಬ್ಬರ ಕೇಳಿದ ಹಾವೇರಿ ರೈತರ ಮೇಲೆ ಗೋಲೀಬಾರ್ ನಡೆಸಿ ಇಬ್ಬರನ್ನು ಕೊಂದದ್ದು , ಹಲವೆಡೆ ಲಾಠಿ ಚಾರ್ಜ್ ನಡೆಸಿದ್ದು ಕಾಳಸಂತೆಖೋರರ ಹಿತ ಕಾಪಾಡುವುದೇ ತನ್ನ ಪರಮ ಕರ್ತವ್ಯವೆಂದು ಸಾರಿತು. ಇದು ಇತ್ತೀಚೆಗೆ ಪುನಃ ಹಾವೇರಿ,ಮತ್ತಿತರೆಡೆ ಪುನರಾವರ್ತನೆ ಆದದ್ದು ಮುಖ್ಯಮಂತ್ರಿ ಬದಲಾದರೂ ಅದರ ವರ್ಗ ಸ್ವರೂಪ ಬದಲಾಗದು ಎಂಬುದನ್ನು ಸಾಬೀತು ಮಾಡಿತು. ಹತ್ತಾರು ಬಾರಿ ಕಾರ್ಮಿಕರು, ಅಸಂಘಟಿತರು ಹಲವು ಹಂತಗಳ ಹೋರಾಟಗಳನ್ನು ನಡೆಸಿ, ರಾಜಧಾನಿಯಲ್ಲಿ ಧರಣಿ ಮುಷ್ಕರ ನಡೆಸಿದರೂ ನಿರ್ಲಕ್ಷ್ಯ ತೋರಿದೆ. ಶಾಂತ ರೀತಿ ಚಳುವಳಿ ನಿರತರ ಮೇಲೆ ಪೋಲೀಸರ ಮೂಲಕ ದಾಲಿ ನಡೆಸಿದೆ. ಆದರೆ ಅದೇ ಹೊತ್ತಿನಲ್ಲಿ ಬಂಡವಾಳಗಾರರ, ಕಾರ್ಪೋರೇಟ್ ಕಂಪನಿಗಳ ಎಲ್ಲಾ ಕೇಳಿಕೆಗಳಿಗಾಗಿ ಸಮಾವೇಶ ನಡೆಸಿ ಭೂಮಿ, ಇತ್ಯಾದಿಗಳನ್ನು ಧಾರೆಯೆರೆಯುತ್ತಿದೆ. ಕಾರ್ಷಿಕ ಬಿಕ್ಕಟ್ಟಿನಿಂದ ರೈತರು ಆತ್ಮಹತ್ಯೆಗಳನ್ನು ತಡೆಯುವ, ಅವರನ್ನು ರಕ್ಷಿಸುವ ಯಾವ ಕಾಳಜಿಯನ್ನು ತೋರಿಲ್ಲ. ಫಸಲಿಗೆ ಸೂಕ್ತ ಬೆಂಬಲಿತ ಬೆಲೆಯನ್ನೂ ನೀಡಲಿಲ್ಲ. 2009 ರಲ್ಲಿ ತೀವ್ರ ನೆರೆ ಹಾವಳಿಗೆ 12 ಜಿಲ್ಲೆಯ ಜನತೆ ಸಿಕ್ಕು ಜೀವನ್ಮರಣದ ಹೋರಾಟದಲ್ಲಿರುವಾಗಲೂ ನೆರವಿಗೆ ಧಾವಿಸದೇ ಆರೆಸ್ಸೆಸ್ ನ ಬೈಠಕ್ನಲ್ಲಿ ಇಡೀ ಸಂಪುಟ ಕುಳಿತಿದ್ದು, ನಂತರವೂ ಸಮರ್ಪಕ ಪರಿಹಾರ ಒದಗಿಸದೇ ಹೋದುದು ಅಮಾನವೀಯ. ಈಗಲೂ ಭೀಕರ ಬರ ಪೀಡಿತ ಪ್ರದೇಶಗಳಲ್ಲಿ ಜನ, ಲಕ್ಷಾಂತರ ಜಾನುವಾರುಗಳ ರಕ್ಷಣೆಗೆ ಕಿಂಚಿತ್ತೂ ಗಮನ ನೀಡಿಲ್ಲ. ಕೃಷಿಕೂಲಿಕಾರರು;ಬಡ ರೈತರನ್ನುಳಿಸಲು ರೇಗಾ ಯೋಜನೆ ಜಾರಿಮಾಡದೇ ವ್ಯಾಪಕ ಭ್ರಷ್ಟಾಚಾರವನ್ನು ನಡೆಸಿದೆ. ಕಲಸಕ್ಕಾಗಿ ವಲಸೆ ತಡೆಯದಾಗಿದೆ.

ಇದಕ್ಕೆ ಬದಲಾಗಿ ಸರಕಾರ ತನ್ನ ಅಧಿಕಾರವನ್ನು ಸಾರ್ವಜನಿಕ ಸಂಪತ್ತಿನ ಲೂಟಿಗೆ, ಗಣಿ, ಭೂ ಮಾಫಿಯಾಗಳ ಸೇವೆಗೆ ಪೂರ್ಣ ಬಳಸಿದೆ. ನೂರಾರು ಅಕ್ರಮ, ಹಗರಣಗಳನ್ನು ಎಸಗಿದೆ. ಲಕ್ಷಾಂತರ ಕೋಟಿ ರೂ.ಗಳ ಅಕ್ರಮ ಗಣಿ ಹಗರಣದ ಬಗ್ಗೆ ಸವಿವರವಾದ ವರದಿಯನ್ನು ಲೋಕಾಯುಕ್ತ ನೀಡಿದ್ದರೂ ಏನೊಂದೂ ಕ್ರಮ ವಹಿಸದೇ ಅವರನ್ನು ಖುಲಾಸೆಗೊಳಿಸುವ, ಲೋಕಾಯುಕ್ತ ಸಂಸ್ಥೆಯನ್ನೆ ಮುಚ್ಚಿ ಬಿಡುವ ಹುನ್ನಾರದಲ್ಲಿ ತೊಡಗಿದೆ. ಇಂತಹ ಗಣಿ ಹಾಗೂ ಭೂ ಡೀನೋಟಿಫಿಕೇಷನ್ ಹಗರಣದಿಂದಾಗಿ ಮುಖ್ಯಮಂತ್ರಿ ರಾಜೀನಾಮೆ ಸಲ್ಲಿಸಬೇಕಾಗಿ ಬಂದರೂ, ಸಿಬಿಐ ತನಿಖೆಗೆ ನ್ಯಾಯಾಲಯ ಆದೇಶಿಸಿದರೂ ಸರಕಾರ ರಾಜೀನಾಮೆ ನೀಡಿ ಹೊಸ ಜನಾದೇಶಕ್ಕೆ ಅನುವು ಮಾಡದೇ, ಅಧಿಕಾರದಲ್ಲಿ ಅನೈತಿಕವಾಗಿ ಉಳಿದು , ಅಪರಾಧಿಗಳನ್ನು ರಕ್ಷಿಸುತ್ತಿದೆ. ಹೀಗೆ ಈ ನಾಲ್ಕು ವರುಷಗಳಲ್ಲಿಯೂ ಭೂ,ಗಣಿ ಮಾಫಿಯಾಗಳ ಸರಕಾರವೆಂಬುದನ್ನು ಹೆಜ್ಜೆ,ಹೆಜ್ಜೆಗೂ ಸಾಬೀತು ಮಾಡಿದೆ. ಇವೆಲ್ಲವುಗಳ ಪರಿಣಾಮವಾಗಿ ಸರಕಾರದಲ್ಲೂ, ಆಡಳಿತ ಪಕ್ಷದಲ್ಲೂ ನಿರಂತರ ಕಿತ್ತಾಟ, ಗುಂಪುಗಾರಿಕೆ, ಬಂಡಾಯಗಳಿಂದ ರಾಜ್ಯದಲ್ಲಿ ಆಡಳಿತ ಶಿಥಿಲವಾಗಿ, ಜನರ ಪಾಲಿಗೆ ಆಡಳಿತವೇ ಇಲ್ಲವಾಗಿದೆ.

ಈ ನಾಲ್ಕು ವರುಷಗಳಲ್ಲಿ ಅದು ನೀಡಿದ ಬಜೆಟ್ಗಳು ಜನತೆಗೆ ಪರಿಹಾರ ಒದಗಿಸುವಲ್ಲಿ ಪೂರ್ಣ ವಿಫಲವಾಗಿದೆ. ಒಳ,ಹೊರ ಸಾಲವನ್ನು ಜನತೆಯ ಮೇಲೆ ಹೇರಿದೆ.ಬಜೆಟ್ನ ಮೂಲಕ, ಜಾತೀವಾದಿ ಮಠಗಳು, ಸಂಘ ಪರಿವಾರದ ಸಂಸ್ಥೆಗಳಿಗೆ ಹಣ ನೀಡಿ ಬಲಗೊಳಿಸುತ್ತಿದೆ. ಸರಕಾರವು ಉದಾರೀಕರಣದ ದಿವಾಳಿಖೋರ ಆರ್ಥಿಕ ನೀತಿಗಳನ್ನು ಜಾರಿ ಮಾಡುತ್ತಿದೆ.

ಪುಟ 4 ಕ್ಕೆ

'ಸತ್ವಯುತ ಧ್ವನಿ ವಿಧಾನ ಪರಿಷತ್‌ನಲ್ಲಿ ಮೊಳಗಲಿ'

ಮತದಾರರ ಸಮಾವೇಶದಲ್ಲಿ ಬೃಂದಾ

ಅಲ್ಲಿ ಕಿಕ್ಕಿರಿದು ನೆರೆದ ನಾಗರೀಕರು. ಅವರು ಮತದಾರರು. ಅಲ್ಲೊಂದು ಆತ್ಮೀಯ ಸನ್ನಿವೇಶ.

ಸೇರಿದ್ದು ಜೂನ್ ಹತ್ತರಂದು ನಡೆಯಲಿರುವ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಮತ ಯಾರಿಗೆ ನೀಡಬೇಕೆಂದು ಚಿಂತಿಸಲು. ಈ ಚಿಂತನೆಗೆ ಚಾಲನೆ ಮತ್ತು ಖಚಿತ ತಿರುವು ಕೊಟ್ಟವರು ಮಾಜಿ ಸಂಸದೆ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯೆ ಬೃಂದಾ ಕಾರಟ್‌ರವರು.

ಚುನಾವಣೆಗಳೆಂದರೆ ಹಣದ ಹೊಳೆ ಹರಿಸಿ ಗೆಲ್ಲಲು ನಡೆಯುವ ಹತ್ತಾರು ಚಿತ್ರಣಗಳು ಎಲ್ಲರ ಕಣ್ಣ ಮುಂದೆ ಇರುತ್ತವೆ. ಗೆದ್ದವರು ಮತದಾರರ, ರಾಜ್ಯದ ಹಿತವನ್ನು ಎಂದೋ ಮರೆತು ತಮ್ಮ ಸ್ವಾರ್ಥದ ಸಲುವಾಗಿ ಅಧಿಕಾರ ದುರ್ಬಳಕೆ ಮಾಡುವರೇ ಅಧಿಕ ಇಂತಹ ಸನ್ನಿವೇಶದಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಅಲ್ಲದೆ ಪ್ರಗತಿ ಪರ ಸಂಘಟನೆಗಳು ಕಾಂ। ಕೆ.ಎಸ್. ಲಕ್ಷ್ಮೀಯವರನ್ನು ತಮ್ಮ ಅಭರ್ಥಿಯನ್ನ ಕಣಕ್ಕೆ ಇಳಿಸಿ ಚುನಾವಣೆ ಎಂಬುದು ಜನತೆಯ ಪ್ರಜಾಸತ್ತಾತ್ಮಕ ಚಳುವಳಿಯ ಒಂದು ಭಾಗ ಎಂದಿದೆ.

ಬೆಂಗಳೂರಿನ ಮತದಾರರರು ತಮ್ಮ ಸತ್ವಯುತ ಧ್ವನಿಯನ್ನ ವಿಧಾನ ಪರಿಷತ್‌ನಲ್ಲಿ ಪ್ರತಿಧ್ವನಿಸುವಂತಾಗಬೇಕು. ನಗರದ ಸಂಪನ್ಮೂಲವನ್ನು ಲೂಟಿ ಹೊಡೆಯುವಲ್ಲಿ ರಾಜಕಾರಣೀಗಳು ಮತ್ತು ಅಧಿಕಾರಶಾಹಿಗಳೂ ಒಂದಾಗಿವೆ: ಉದಾರಿಕರಣದ ಲಾಭದಿಂದ ಬೆಳೆದಿರುವ ಇಂತಹ ಶಕ್ತಿಗಳನ್ನ ಸೋಲಿಸುವಲ್ಲಿ ಮತವನ್ನು ಪ್ರಬಲ ಅಸ್ತ್ರವನ್ನಾಗಿ ಬಳಸಿ ಎಂದು ಸಮಾವೇಶ ಉದ್ಘಾಟಿಸಿಮಾತನಾಡಿದ ಕಾಂ. ಬೃಂದ ಕಾರಟ್ ಪದವಿಧರ ಮತದಾರರಿಗೆ ಕರೆ ನೀಡಿದರು. "ಬೆಂಗಳೂರು ಅಭಿವೃಧಿ ಎಂಬುದು ಒಂದು ಯೋಜಿತ ಅಭಿವೃಧಿಯಾಗಿರದೆ ಅದು ರೀಯಲ್ ಎಸ್ಟೆಟ್ ವ್ಯಾಪಾರಿಗಳ ದಂಧೆಯಾದೆ: ಗಣಿ ಲೂಟಿಯ ಬಳ್ಳಾರಿಯಾಗಿ ಬೆಂಗಳೂರು ಬದಲಾಗಿದೆ. ಅಧಿಕಾರಶಾಹಿಗಳು ರಾಜಕಾರಣಿಗಳು ಮತ್ತು ಇಂತಹ ಮಾಫಿಯ ಉದ್ಯಮಿಗಳ ನಂಟು ಬಲವಾಗಿದೆ.. ಇಲ್ಲಿಂದ ಆಯ್ಕೆಯಾಗಿ ಹೋಗಿರುವವರು ಬೆಂಗಳೂರಿನ ದುಡಿಯುವ ಜನತೆಯ ಯಾವ ಪ್ರಶ್ನೆಗಳನ್ನು ಮೇಲ್ಮನೆಯಲ್ಲಿ ಎತ್ತುತ್ತಿಲ್ಲ ವಸತಿ, ಬೆಲೆಏರಿಕೆ, ಆಹಾರ ಭದ್ರತೆ ಪ್ರಶ್ನೆಗಳು ಪ್ರಸ್ತಾಪವಾಗುವುದಿಲ್ಲ. ಬಹುತೇಕ ಆಳುವ ಪಕ್ಷಗಳು ಉದಾರಿಕರಣ ನೀತಿಗಳಿಗೆ ಅಂಟಿಕೊಂಡಿವೆ. ಹೀಗಾಗಿ ಭಾರತದ ಅರ್ಥವನ್ನೆ ಅಪಭ್ರಂಶಗೊಳಿಸಿವೆ ಎಂದರು. ವಿಧಾನ ಪರಿಷತ್ತಿನಲ್ಲಿ ರಾಜ್ಯದ ಜನತೆಯ ಹಿತವನ್ನು ಕಾಯುವುದು ಕೆ.ಎಸ್. ಲಕ್ಷ್ಮೀ ಯಂತಹ ಅಭ್ಯರ್ಥಿಯಿಂದ ಮಾತ್ರ ಸಾಧ್ಯವೆಂದರು" ಜನಚಳುವಳಿ ಯಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿ ಕೊಂಡ ಇವರನ್ನು ಆರಿಸಿ ಕಳಿಸಬೇಕೆಂದು ಮನವಿ ಮಾಡಿದರು.

ನಂತರ ಮಾತನಾಡಿದ ಚಿಂತಕ ಪ್ರೊ ಜಿ.ಕೆ.



ಗೋವಿಂದರಾವ್ " ಪದವೀಧರರಲ್ಲಿ ಇಂದು ಜಾತೀಯತೆಯ ಮನೋಭಾವ ಹೆಚ್ಚುತ್ತಿರುವುದು ವಿಷಾದನೀಯ. ಬಿಜೆಪಿ ಸರ್ಕಾರ ರಾಜ್ಯದಲ್ಲಿ ಒಟ್ಟು ಪರಿಸ್ಥಿಯನ್ನೇ ಹಾಳುಗೆಡಿಸಿದ್ದು ತುರ್ತು ಪರಿಸ್ಥಿತಿಯಂತಹ ಸನ್ನಿವೇಶ ಸೃಷ್ಟಿಸಿದೆ. ಈ ಕ್ಷೇತ್ರದಿಂದ ಗೆದಿದ್ದ ಮಾಜಿ ಸಚಿವ ರಾಮಚಂದ್ರೇಗೌಡ ಭ್ರಷ್ಟ ಹಗರಣಗಳಿಂದಾಗಿ ರಾಜೀನಾಮೆ ಕೊಡಬೇಕಾಗಿ ಬಂತು.ಅಂತಹವರು ಯಾವ ಮುಖ ಹೊತ್ತು ಮತ ಕೇಳುವರು ? ಇಂತಹವರನ್ನ ಸೋಲಿಸಬೇಕು" ಎಂದರು.

ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಪಿ.ವಿ.ಲೋಕೇಶ್ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿ ಇಂತಹ ಸನ್ನಿವೇಶದಲ್ಲಿ ಎಡ ಅಭ್ಯರ್ಥಿ ಗೆಲ್ಲಬೇಕಾದದ್ದು ಅಗತ್ಯ. ಈ ನಿಟ್ಟಿನಲ್ಲಿ ಎಲ್ಲರ ಬೆಂಬಲ ಅಗತ್ಯ ಎಂದರು. ಬ್ಯಾಂಕ್ ನೌಕರರ ಸಂಘಟನೆಯ ಮುಖಂಡರಾದ ವಸಂತ ರೈ ಅವರು ಮಾತನಾಡಿ ಬೆಂಬಲ ಘೋಷಿಸಿದರು. ಮತದಾರರ ಜಾಗೃತಿ ಸಮಾವೇಶದಲ್ಲಿ ಸಿಪಿಐ(ಎಂ)ನ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪ್ರಸನ್ನ ಕುಮಾರ ಮಾತನಾಡಿದರು. ಅಧ್ಯಕ್ಷತೆಯನ್ನು ಟಿ. ಸುರೇಂದ್ರರಾವ್ ವಹಿಸಿದ್ದರು.

ಬಂಡವಾಳಶಾಹಿ ತಾನಾಗಿಯೇ ಬೀಳುವುದಿಲ್ಲ......

-ಪುಟ 2 ರಿಂದ

ಸಂಪನ್ಮೂಲಗಳನ್ನು ಕಬ್ಜಾ ಮಾಡಿಕೊಳ್ಳುವ ಸಾಮ್ರಾಜ್ಯಶಾಹಿಯ ಆಕ್ರಮಣಕೋರತನವನ್ನು ವಿವರಿಸುತ್ತದೆ. ಕರಡು ನಿರ್ಣಯದಲ್ಲಿ ವಿವರಿಸಿರುವಂತೆ ಸಾಮ್ರಾಜ್ಯಶಾಹಿಗೆ ಮೂರು ಉದ್ದೇಶಗಳಿವೆ: ಮೊದಲನೇಯದು ಸಮಾಜವಾದಿ ದೇಶಗಳ ವಿಸರ್ಜನೆ, ಎರಡನೆಯದ್ದು ಮೂರನೇ ಜಗತ್ತಿನ ರಾಷ್ಟ್ರೀಯತೆಯನ್ನು ಯಾವುದಾದರೂ ವಿಧದಿಂದ ಶಕ್ತಿಹೀನಗೊಳಿಸುವುದು (ಯಾಕೆಂದರೆ ಇದು ವಸಾಹತು ಬಿಡುಗಡೆಯ ಪ್ರಕ್ರಿಯೆಯ ಜೊತೆಗೆ ಅಲಿಪ್ತ ಚಳುವಳಿಯನ್ನು ಹುಟ್ಟುಹಾಕಿತು) ಮತ್ತು ಮೂರನೇಯದಾಗಿ ತನಗೆ ಸರಿಸಾಟಿಯಿಲ್ಲದ ನಿಸ್ಸಂಧಿಗ್ದ ಮಿಲಿಟರಿ ಮತ್ತು ಆರ್ಥಿಕ ಔನ್ನತ್ಯವನ್ನು ಜಗತ್ತಿನಾದ್ಯಂತ ತನ್ನ ಗ್ರಹಿತ ಸ್ಪರ್ಧಿಗಳ ಮೇಲೆ ಸ್ಥಾಪಿಸುವುದು.

ಸಾಮ್ರಾಜ್ಯಶಾಹಿಯ ಈ ಏಕಧೃವೀ ಆಶಯವನ್ನು ಎದುರಿಸುವಲ್ಲಿ ಅತ್ಯಂತ ಶಕ್ತಿಯುತ ಸೈದ್ಧಾಂತಿಕ 'ಪ್ರತಿರೋಧ'ವನ್ನು ತೋರಿಸಲಾಗುತ್ತಿದೆ. ಸಾಮ್ರಾಜ್ಯಶಾಹಿಯು ಪ್ರಜಾಪ್ರಭುತ್ವವನ್ನು ಮುಕ್ತ ಮಾರುಕಟ್ಟೆಯೊಡನೆ ಸಮೀಕರಿಸುತ್ತದೆ. ಪ್ರಜಾಪ್ರಭುತ್ವವನ್ನು ರಕ್ಷಿಸುವ ನೆಪದಲ್ಲಿ ತನ್ನ ಮಾತು ಕೇಳದ ದೇಶಗಳೊಳಗೆ ಮಧ್ಯ ಪ್ರವೇಶಿಸುತ್ತದೆ. ಮಾನವ ಹಕ್ಕುಗಳ ಜಾಗತಿಕ ಮೌಲ್ಯಗಳ ಇತ್ಯಾದಿಗಳ ಹೆಸರಿನಲ್ಲಿ ಸಾಮ್ರಾಜ್ಯಶಾಹಿ ಸಾರ್ವಭೌಮ ದೇಶಗಳ ಆಂತರಿಕ ವಿಷಯಗಳಲ್ಲಿ ತಲೆಹಾಕುತ್ತದೆ. ಮುಂದುವರಿದ ಬಂಡವಾಳಶಾಹಿ ದೇಶಗಳ ಬೂರ್ಜ್ವಾಸಿ ಹಿಂದೆ ರಾಷ್ಟ್ರೀಯ ಸಾರ್ವಭೌಮತೆಯನ್ನು ಬಹಳ ಪವಿತ್ರ ಎಂದು ಹೇಳುತ್ತಿದ್ದವು. ಇಂದು ಮಿಲಿಟರಿ ಮಧ್ಯಪ್ರವೇಶ ಮಾಡಿ ದೇಶಗಳ ಸಾರ್ವಭೌಮತೆಯನ್ನು ಮಾನವ ಹಕ್ಕುಗಳ ಹೆಸರಿನಲ್ಲಿ ನಗಣ್ಯಗೊಳಿಸುತ್ತದೆ.

9/11 ರ ನ್ಯೂಯಾರ್ಕ್‌ನ ವಿಶ್ವ ವ್ಯಾಪಾರ ಕೇಂದ್ರದ ಮೇಲಿನ ಆಕ್ರಮಣದ ನಂತರ ಅಮೇರಿಕನ್ ಸಾಮ್ರಾಜ್ಯಶಾಹಿಯ ನೇತೃತ್ವದ ಅಡಿಯಲ್ಲಿ ಭಯೋತ್ಪಾದನೆಯ ವಿರುದ್ಧದ ಜಾಗತಿಕ ಯುದ್ಧದ ನೆಪದಲ್ಲಿ ಇರಾನ್ ಮತ್ತು ಅಫ್ಘಾನಿಸ್ತಾನದಲ್ಲಿ ಸೈನಿಕ ಮಧ್ಯಪ್ರವೇಶ ಮಾಡಿ ಬೆದರಿಕೆ ಒಡ್ಡಲಾಗುತ್ತಿದೆ. ಈ ದೇಶಗಳಲ್ಲಿ ಆಡಳಿತ ಬದಲಾಯಿಸುವ ಮಾತನ್ನು ತನ್ನ ಆಸಕ್ತಿಗೆ ತಕ್ಕಂತೆ ಮಾಡಲಾಗುತ್ತದೆ. ಇದನ್ನು ದೇಶಗಳ ಸಾರ್ವಭೌಮತ್ವವನ್ನು ಭೇದಿಸಲು ಮತ್ತು ಅಲ್ಲಿನ ಜನತೆಯ ಮಾನವ ಹಕ್ಕುಗಳನ್ನು ತುಳಿಯಲು ಬಳಸಲಾಗುತ್ತಿದೆ.

ಸಾಮ್ರಾಜ್ಯಶಾಹಿ ಅತ್ಯಂತ ತೀವ್ರ ಕಮ್ಯೂನಿಸ್ಟ್ ವಿರೋಧಿ ಪ್ರಚಾರವನ್ನು ಮಾಡುತ್ತಿದೆ. ಕಮ್ಯೂನಿಸಮನ್ನು ಸರ್ವಾಧಿಕಾರ ಮತ್ತು ಫ್ಯಾಸಿಸಂಗೆ ಹೋಲಿಸಲಾಗುತ್ತಿದೆ.

ಈ ಸವಾಲನ್ನು ಸಮಾಜವಾದಿ ದೇಶಗಳು ಹೇಗೆ ಎದುರಿಸುತ್ತಿವೆ ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ. ಸಮಾಜವಾದಿ ದೇಶಗಳೆಲ್ಲ ಸುಧಾರಣೆಗಳನ್ನು ಕೈಗೆತ್ತಿಕೊಂಡಿವೆ.

ಹಿಂದುಳಿದ ದೇಶಗಳಲ್ಲಿ ಸಮಾಜವಾದ ಬಂದಾಗ ಲೆನಿನ್ ಹೇಳಿದ್ದರು. "ಉತ್ಪಾದಕ ಶಕ್ತಿಗಳನ್ನು ಬಂಡವಾಳಶಾಹಿ ವ್ಯವಸ್ಥೆಗಿಂತ ಹೆಚ್ಚಿನ ಮಟ್ಟಕ್ಕೆ ಕೊಂಡೊಯ್ಯಿರಿ" ಎಂದು: ಲೆನಿನ್ ಸೂಚಿಸಿದ ಒಂದು ವಿಧಾನ 'ಪ್ರಭುತ್ವ ಬಂಡವಾಳಶಾಹಿ'ಯನ್ನು ಕಟ್ಟುವುದು. **ಸಮಾಜವಾದದ ಅಡಿಯಲ್ಲಿ ದೃಢವಾದ ಬಂಡವಾಳಶಾಹಿ ನಡು ಹಾದಿಗಳನ್ನು ನಿರ್ಮಿಸುವುದು.**(build solid gangways of capitalism under socialism)

CPIM PARTY CONGRESS 20
KOZHIKODE 2012 APRIL 4-9

1970 ರ ಉತ್ತರಾರ್ಧದದ ಸುದೀರ್ಘ ತಳಮಳದ ನಂತರ ಚೀನಾ ಸುಧಾರಣೆಗಳನ್ನು ತಂದಿತು. ಇದಕ್ಕೂ ಮೊದಲು ಅಲ್ಲಿ ಕ್ಷೋಬೆ ಇತ್ತು. ಚೀನಾದ ಒಂದು ಪ್ರಧಾನ ವೈರುಧ್ಯವೆಂದರೆ ಚೀನಾ ಜನತೆಯ ನೀರಿಕ್ಷೆಗಳು ಮತ್ತು ನೀರೀಕ್ಷೆಗಳನ್ನು ಈಡೇರಿಸುವ ಸಾಮರ್ಥ್ಯದ ನಡುವಿನ ಕಂದರ. ಈ ವೈರುಧ್ಯವನ್ನು ನಿವಾರಿಸಲು, ಅಂತಿಮವಾಗಿ ಪ್ರಸ್ತುತ ಸುಧಾರಣಾ ನೀತಿಗಳಿಗೆ ಕಾರಣವಾದ ಹಲವು ಹಂತಗಳ ಸುಧಾರಣ ಕ್ರಮಗಳನ್ನು ಚೀನಾ ಜಾರಿಗೊಳಿಸಿತು. ಈ ಮೂಲಕ ಚೀನಾ ಅಪಾರವಾದದ್ದನ್ನು ಗಳಿಸಿಕೊಂಡಿದೆ. ಆದರೆ ಅಲ್ಲಿ ಹಲವು ಸಮಸ್ಯೆಗಳಿವೆ. ಉದಾಹರಣೆಗೆ ಅಸಮಾನತೆಯ ಇರುವಿಕೆ, ಅಸಮಾನ ಬೆಳವಣಿಗೆ, ಭ್ರಷ್ಟಾಚಾರ, ಬಂಡವಾಳಿಗರನ್ನು ಪಕ್ಷದ ಸದಸ್ಯರಾಗಲು ಬಿಟ್ಟಿರುವುದು, ಇತ್ಯಾದಿ... ಇವು ಆತಂಕಕ್ಕೆ ಕಾರಣಗಳು. ಯಾಕೆಂದರೆ ಇವುಗಳಲ್ಲಿ ಪ್ರತಿಕ್ರಾಂತಿಯ ಬೀಜಗಳಿರಬಹುದು. ಚೀನಾದಲ್ಲಿ ಸಮಾಜವಾದದ ಭವಿಷ್ಯ ಅದು ಈ ವೈರುಧ್ಯಗಳನ್ನು ಹೇಗೆ ಪರಿಹರಿಸುತ್ತದೆ ಎಂಬುದರ ಮೇಲೆ ಅವಲಂಬಿಸಿದೆ. ನಾವು ಚೀನಾಕ್ಕೆ ಈ ವಿಷಯದಲ್ಲಿ ಕಮ್ಯೂನಿಸ್ಟ್ ಸೌಹಾರ್ದ ಬೆಂಬಲವನ್ನು ನೀಡುತ್ತೇವೆ.

ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಬಂಡವಾಳದ ಆಳುವಿಕೆಗೆ ರಾಜಕೀಯ ಪರ್ಯಾಯ ಇನ್ನೂ ಮೂಡಿಬರಬೇಕಿದೆ. ಅದು ಬಂಡವಾಳಶಾಹಿ ವ್ಯವಸ್ಥೆಯೊಳಗಡೆಯೆ ಪರ್ಯಾಯಗಳನ್ನು ಕಟ್ಟಿ ಸಾಮ್ರಾಜ್ಯಶಾಹಿ ಜಾಗತೀಕರಣ ನೀತಿಗಳನ್ನು ಎದುರಿಸುತ್ತಿದೆ. ಇದು ನಿಧಾನವಾಗಿ ಸಮಾಜದ ಪರಿವರ್ತನೆಯಲ್ಲಿ ಕೊನೆಗೊಳ್ಳಬಹುದು.

'ಭಾರತದ ಪರಿಸ್ಥಿತಿಯಲ್ಲಿ ಸಮಾಜವಾದ'ದ ಬಗೆಗೆ ಮಾತನಾಡುತ್ತಾ ಯೆಚೂರಿ " ಜನತಾ ಪ್ರಜಾಸತ್ತಾತ್ಮಕ ಕ್ರಾಂತಿ ಯಶಸ್ವಿಯಾಗಿ ಪೂರ್ಣಗೊಳ್ಳುವ ಮುಂಚೆಯೇ ಈ ಕುರಿತ 'ನೀಲ ನಕ್ಷೆ'ಯನ್ನು ವಿವರಿಸುವುದು ಸಾಧ್ಯವಿಲ್ಲ. ಆದರೆ ನಮ್ಮ ಸೈದ್ಧಾಂತಿಕ ದಸ್ತಾವೇಜುಗಳ ತಿರುಳನ್ನು ಆಧರಿಸಿ ಈ ವಿಷಯವಾಗಿ ಸ್ಥೂಲವಾಗಿ ವಿವರಿಸಬಹುದು ಮತ್ತು ನಮ್ಮ ಅರಿವನ್ನು ಇನ್ನೂ ಬೆಳೆಸಿಕೊಳ್ಳಬಹುದೆಂದರು. ನಾವು ಮಾರ್ಕ್ಸ್‌ವಾದ ವಿರೋಧಿ ಸೈದ್ಧಾಂತಿಕ ಸವಾಲುಗಳನ್ನು ಎದುರಿಸಬೇಕು. ನಮ್ಮ ಜನ ಬೆಂಬಲವನ್ನು ನಮ್ಮ ಸಾಮೂಹಿಕ ತಳಹದಿಯನ್ನು ಸಂಸದೀಯ ಮತ್ತು ಸಂಸದಿಯೇತರ ಹೋರಾಟ-ಸಾಧನಗಳ ಮೂಲಕ ಹಾಗೂ ಕಾರ್ಮಿಕ-ರೈತರ ಮೈತ್ರಿ ಬಲಪಡಿಸಿಕೊಳ್ಳುವ ಮೂಲಕ ವೃದ್ಧಿಗೊಳಿಸಿಕೊಳ್ಳಬೇಕು. ಇದು ಬಂಡವಾಳಶಾಹಿಯಿಂದ ಸಮಾಜವಾದಡೆದೆಗೆ ಸ್ಥಿತ್ಯಂತರಗೊಳ್ಳುವ ಕಾಲಘಟ್ಟ. ಬಂಡವಾಳಶಾಹಿಗೆ ಏಕಮುಖ ಪ್ರಗತಿಯಿಲ್ಲ. ನಾವು ಗತಿಶೀಲ ವರ್ಗ ಹೋರಾಟಗಳ ಸಂದರ್ಭದಲ್ಲಿ ಇದ್ದೇವೆ, ವರ್ಗ ಶಕ್ತಿಗಳ ಅಂತರ್ ಸಂಬಂಧದಲ್ಲಿ ವ್ಯತ್ಯಾಸಗಳಾಗಿ ವರ್ಗ ಶಕ್ತಿಗಳಿಂದಾಗಿ ಬದಲಾವಣೆ ಆಗಬಹುದು.

ತಂತ್ರಗಾರಿಕೆಯನ್ನು ಕಾಲದಿಂದ ಕಾಲಕ್ಕೆ ಬದಲಾಯಿಸಿ ಬದಲಾಗುವ ಶಕ್ತಿಗಳ ಸಮನ್ವಯದಿಂದ ವರ್ಗ ಹೋರಾಟವನ್ನು ಜನತೆಯ ಪ್ರಜಾಸತ್ತಾತ್ಮಕ ಕ್ರಾಂತಿಯತ್ತ ಕೊಂಡೊಯ್ಯಬೇಕಾಗುತ್ತದೆ ಎಂದರು.

ಯೆಚೂರಿಯವರು ನಂತರ ಅಧಿವೇಶನ ಪೂರ್ವದ ತಿದ್ದುಪಡಿಗಳ ವರದಿಯನ್ನು ಮಂಡಿಸಿದರು. 1,014 ತಿದ್ದುಪಡಿ ಪ್ರಸ್ತಾಪಗಳು ಬಂದವು. ಅವುಗಳಲ್ಲಿ 38 ಅನ್ನು ಒಪ್ಪಿಕೊಳ್ಳಲಾಯಿತು. ಅಧಿವೇಶನದ ಪ್ರತಿನಿಧಿಗಳು 235 ತಿದ್ದುಪಡಿಗಳನ್ನು ಸೂಚಿಸಿದರು.

ಈ ಕರಡು ನಿರ್ಣಯಗಳ ಚರ್ಚೆಯಲ್ಲಿ 42 ಪ್ರತಿನಿಧಿಗಳು ಭಾಗವಹಿಸಿದರು. ದಸ್ತಾವೇಜನ್ನು ಅವರ ಅನುಭವದಿಂದ ಶ್ರೀಮಂತಗೊಳಿಸಿದರು. ಇತ್ತೀಚಿನ ದಿನಗಳಲ್ಲಿ ಜಗತ್ತಿನ ವಿವಿಡೆಡೆ ನಡೆದ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಅದರಲ್ಲೂ ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಆದ ಬೆಳವಣಿಗೆಗಳನ್ನು ನೆನಪಿಸಿಕೊಳ್ಳುತ್ತ ತಮ್ಮ ಕಾಳಜಿಯನ್ನು ಹಂಚಿಕೊಂಡರು. ಪ್ರತಿನಿಧಿಗಳು ಇಂದು ತೀವ್ರವಾಗುತ್ತಿರುವ ನಾಲ್ಕು ವೈರುಧ್ಯಗಳನ್ನು ಪ್ರಸ್ತಾಪಿಸಿದರು. ಸ್ವಪ್ರತಿಷ್ಠೆಯ ರಾಜಕೀಯ ಈಗ ಬಹಳವಾಗಿರುವುದನ್ನು ಗಮನಿಸುತ್ತಾ ನಮ್ಮ ದೇಶದಲ್ಲಿ ವಿಚ್ಛಿದ್ರಕಾರಕ ಶಕ್ತಿಗಳನ್ನು ಎದುರಿಸಿ ದುಡಿವ ಜನರ ಒಕ್ಕಟ್ಟನ್ನು ಸಾಧಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಪಾರ್ಲಿಮೆಂಟಿನ ಹೊರಗೂ ಹೋರಾಟಗಳನ್ನು ನಡೆಸುತ್ತಾ ಪಾರ್ಲಿಮೆಂಟಿನ ಒಳಗೆ ಪರಿಣಾಮಕಾರಿ ಪಾತ್ರ ವಹಿಸುತ್ತಾ ಜನರ ನೈಜ ತೊಂದರೆಗಳ ನಿವಾರಣೆಗೆ ದುಡಿಯಬೇಕಾದ ಅವಶ್ಯಕತೆಯನ್ನು ಚರ್ಚಿಸಿದರು.

ಏಪ್ರಿಲ್, 8, 2012 ರಂದು ಯೆಚೂರಿಯವರು ಅಧಿವೇಶನದಲ್ಲಿ ಬಂದ ತಿದ್ದುಪಡಿಗಳ ಬಗ್ಗೆ ಮಾತನಾಡುತ್ತಾ ಚರ್ಚೆಗೆ ಉತ್ತರಿಸಿದರು. ನಂತರ ಕರಡನ್ನು ಮತಕ್ಕೆ ಹಾಕಲಾಯಿತು. 727 ಪ್ರತಿನಿಧಿಗಳಲ್ಲಿ ಒಬ್ಬರು ಕರಡಿನ ವಿರುದ್ಧ ಮತ ಹಾಕಿದರೆ, ಮೂವರು ತಟಸ್ಥರಾಗಿದ್ದರು. ಅಧಿವೇಶನ ಅಪಾರ ಬಹುಮತದಿಂದ ನಿರ್ಣಯಗಳನ್ನು ಅಂಗೀಕರಿಸಿತು. ●

ದುರಾಡಳಿತ, ಜನದ್ರೋಹ......

ಪುಟ 3 ರಿಂದ

ಜಿಮ್ ಸಮಾವೇಶಗಳು ರಾಜ್ಯದ ಕೃಷಿ ನಾಶಕ್ಕೆ ರೂಪಿಸಿದ ಕಾರ್ಯಯೋಜನೆಯಾಗಿದೆ.

ಬಿಜೆಪಿ ಸರಕಾರಕ್ಕೆ ಬಹುಮತವನ್ನು ಜನತೆ ನೀಡಿರಲಿಲ್ಲ. ಆದಾಗ್ಯೂ ಅಧಿಕಾರದ ಆಮಿಷವೊಡ್ಡಿ ಆರು ಜನ ಶಾಸಕರನ್ನು ಸೆಳೆದು ಸರಕಾರ ರಚಿಸಿದ್ದು, ನಂತರದಲ್ಲೂ ಇತರೆ ಪಕ್ಷಗಳಲ್ಲಿದ್ದವರನ್ನು ಸೆಳೆಯಲು ನಡೆಸಿದ ಅನೈತಿಕ ಆಪರೇಷನ್ ಕಮಲ, ವಿಧಾನ ಸಭೆಯ ಕಲಾಪಗಳನ್ನೇ ಅರ್ಥ ಹೀನಗೊಳಿಸಿತಲ್ಲದೇ ಪ್ರಜಾಪ್ರಭುತ್ವದ ಮೌಲ್ಯಗಳ ಮೇಲೆ ಮಾರಣಾಂತಿಕ ದಾಳಿಗಳನ್ನು ನಡೆಸಿತು. ಉನ್ನತ ನ್ಯಾಯಾಲಯಗಳಿಂದ ಛೀ ಮಾರಿ ಹಾಕಿಸಿಕೊಂಡರೂ ಪರಿಗಣಿಸದ ಭಂಡ ಸರಕಾರವಿದು. ಬರದ ಚರ್ಚೆ ನಡೆಯುವಾಗ ಸಚಿವರು ಲೈಂಗಿಕ ವೀಡಿಯೋ ನೋಡಿದ್ದು, ಮತ್ತು ಅವರನ್ನು ಖುಲಾಸೆಗೊಳಿಸಿದ್ದು ಖಂಡನೀಯ. ಜನತೆಯನ್ನು ಹಾದಿ ತಪ್ಪಿಸಲು, ಕೋಮುವಾದೀ ನೆಲೆಯಲ್ಲಿ ವಿಭಜಿಲು ಅಲ್ಪಸಂಖ್ಯಾತರ ಮೇಲೆ ಹಲವು ದಾಳಿಗಳನ್ನು ಸಂಘಪರಿವಾರ ನಡೆಸಿತು, ಸರಕಾರ ಅದನ್ನು ಬೆಂಬಲಿಸಿ ಸಮರ್ಥಿಸಿತು. ಶಿಕ್ಷಣ ರಂಗದೊಳಗೂ ಕೋಮುವಾದೀಕರಣವನ್ನು ಆರಂಭಿಸಿತು. ಜೊತೆಗೆ ಜಾತೀವಾದವನ್ನು ರಾಜಕೀಯಾಗಿ ವಿಪರೀತವಾಗಿ ಬೆಳೆಸಿದ್ದು ಬಿಜೆಪಿಯ ಇನ್ನೊಂದು ಸಾಧನೆ.

ಇಂತಹ ಜನದ್ರೋಹಿ ,ಭ್ರಷ್ಟ, ಕೋಮುವಾದೀ. ಜಾತಿವಾದೀ ಸರಕಾರ ಅಧಿಕಾರದಲ್ಲಿರುವುದೇ ಅನೈತಿಕವಾಗಿದೆ. ಇಂತಹ ವಿಕೃತ ಸಾಧನೆಗಳನ್ನು ಹೊಂದಿರುವ ಸರಕಾರ ತೊಲಗುವುದೊಂದನ್ನು ಬಿಟ್ಟರೆ ಬೇರೇನಿದೆ ಹಾದಿ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೇರಳದ ಕಣ್ಣೂರು ಜಿಲ್ಲೆಯ ಕಳಿಸ್ಸೇರಿಯಲ್ಲಿ ಮೇ 19, 2012 ರಂದು ಕಾಮ್ರೇಡ್ ಇ.ಕೆ. ನಯನಾರ್ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡುತ್ತಾ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ಅವರು ಕೇರಳ ರಾಜ್ಯದಲ್ಲಿ ಸದ್ಯ ಸಿಪಿಐ(ಎಂ) ಪಕ್ಷದ ವಿರುದ್ಧ ನಡೆಯುತ್ತಿರುವ ದುರುದ್ದೇಶಪೂರಿತ ಅಪಪ್ರಚಾರಕ್ಕೆ ಉತ್ತರ ನೀಡಿದರು. ಅವರ ಮಾತಿನ ಮುಖ್ಯಾಂಶ ಈ ರೀತಿ ಇದೆ.

"ರಾಜಕೀಯ ವಿರೋಧಿಗಳನ್ನು ಕೊಲ್ಲುವ ಕೃತ್ಯಗಳಲ್ಲಿ ನಮಗೆ ನಂಬಿಕೆ ಇಲ್ಲ"

ಕೊಲೆ ಆರೋಪ ಮತ್ತು ಸಿಪಿಐ(ಎಂ) ವಿರೋಧಿ ಅಪಪ್ರಚಾರಕ್ಕೆ ಪ್ರಕಾಶ್ ಕಾರಟ್ ಪ್ರತಿಕ್ರಿಯೆ

ಕೇರಳದ ಕಣ್ಣೂರು ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಕ್ಷವು ಸಾಮ್ರಾಜ್ಯಶಾಹಿ ವಿರುದ್ಧ ಮತ್ತು ಭೂಮಾಲಕತ್ವದ ವಿರುದ್ಧ ಹೋರಾಡುವ ಮೂಲಕ ಹಾಗೂ ಜನತೆಯ ಹಿತಾಸಕ್ತಿಗಳಿಗಾಗಿ ನಿರಂತರವಾಗಿ ಸೆಣೆಸುತ್ತಾ ಬೆಳೆಯಿತು. ಅದು ಕಾರ್ಮಿಕ ವರ್ಗದ ಮತ್ತು ರೈತಾಪಿ ಜನರ ಆಂದೋಲನದ ಮೂಲಕ ಬೆಳೆಯಿತು. ಕಮ್ಯುನಿಸ್ಟ್ ಪಕ್ಷದ ಶ್ರೇಷ್ಠ ಸಿದ್ಧಾಂತ ಮತ್ತು ಸರಿಯಾದ ರಾಜಕೀಯದಿಂದ ಇದು ಸಾಧ್ಯವಾಯಿತು. ನಮ್ಮ ಚಳುವಳಿಯು ಪ್ರತಿಗಾಮಿ ಶಕ್ತಿಗಳಿಂದ ಹೇಗೆ ದೈಹಿಕ ದಾಳಿಗೆ ಮತ್ತು ಹಿಂಸೆಗೆ ಗುರಿಯಾಯಿತು ಎಂಬುದನ್ನು ನೀವು ನೋಡಿದ್ದೀರಿ. ಕಣ್ಣೂರು ಜಿಲ್ಲೆಯಲ್ಲಿ 1970 ರ ದಶಕದಲ್ಲಿ ಬಂಡವಾಳಗಾರರು ಮತ್ತು ಮಾಲಿಕರು ಇಲ್ಲಿನ ಬೀಡಿ ಕಾರ್ಮಿಕರು ಮತ್ತು ಅವರ ಸಂಘಟನೆಯ ಮೇಲೆ ದಾಳಿ ಮಾಡಲು ಹೊರಗಿನಿಂದ ಗೂಂಡಾಗಳನ್ನು ಆಮದು ಮಾಡಿಕೊಂಡರು. ಇದು ಕಮ್ಯುನಿಸ್ಟರ ವಿರುದ್ಧದ ಆರೆಸ್ಸೆಸ್‌ನ ಹಿಂಸೆಯ ಮೂಲ. ಸಿಪಿಐ(ಎಂ) ಪಕ್ಷವನ್ನು ದಮನ ಮಾಡಲು ಆರೆಸ್ಸೆಸ್ ಮತ್ತು ಕಾಂಗ್ರೆಸ್ ಪಕ್ಷಗಳು ಪದೇ ಪದೇ ಇಂತಹ ವಿಧಾನಕ್ಕೆ ಮೊರೆಹೋಗಿವೆ.. ಆದರೆ ಜನತೆಯ ಬೆಂಬಲದೊಂದಿಗೆ ನಾವು ಈ ದಾಳಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಿದೆ. ನಮ್ಮ ಸಿದ್ಧಾಂತ ಮತ್ತು ರಾಜಕೀಯಕ್ಕೆ ಜನತೆಯ ಬೆಂಬಲ ಇದ್ದುದರಿಂದ ಇದು ಸಾಧ್ಯವಾಯಿತು. ನಮ್ಮ ಪಕ್ಷವು ಆಳುವ ವರ್ಗದ ಪಕ್ಷಗಳ ವಿರುದ್ಧ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟದಲ್ಲಿ ನಂಬಿಕೆಯನ್ನಿಟ್ಟಿದೆ. ಎ.ಕೆ. ಗೋಪಾಲನ್, ಇಎಂಎಸ್ ನಂಬೂದರಿಪಾಡ್, ಇ.ಕೆ. ನಯನಾರ್ ಮತ್ತು ಇತರ ಮುಖಂಡರೆಲ್ಲ ಈ ಧೋರಣೆಯ ಪರವಾಗಿದ್ದರು. ರಾಜಕೀಯ ವಿರೋಧಿಗಳನ್ನು ಮತ್ತು ನಮ್ಮ ವಿಚಾರ ಒಪ್ಪದವರನ್ನು ಆಯುಧ ಬಳಸಿ ಕೊಲ್ಲುವುದರಲ್ಲಿ ನಮಗೆ ನಂಬಿಕೆ ಇಲ್ಲ. ನಮ್ಮ ಮಹಾನ್ ಆಯುಧ ಅಂದರೆ ಅದು ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ದುಡಿಯುವ ವರ್ಗದ ಸಿದ್ಧಾಂತ. ಕೆಲವು ದಿನಗಳ ಹಿಂದೆ ಸಿಪಿಐ(ಎಂ)ಪಕ್ಷದ ಮಾಜಿ ಸದಸ್ಯರು ಮತ್ತು ಕೋಜಿಕ್ಕೋಡ್‌ನ ರಾಜಕೀಯ ಗುಂಪೊಂದರ ಮುಖಂಡರಾದ ಟಿ.ಪಿ. ಚಂದ್ರಶೇಖರನ್ ಭೀಕರವಾಗಿ ಕೊಲೆಯಾದರು. ಈ ಹೀನಾಯ ಕಗ್ಗೊಲೆಯನ್ನು ನಾವು ಮನಃಪೂರ್ವಕವಾಗಿ ಖಂಡಿಸುತ್ತೇವೆ. ಈ ಕೊಲೆಯನ್ನು ಬಳಸಿ ಕಾಂಗ್ರೆಸ್, ಯುಡಿಎಫ್ ಮತ್ತು ಮಾಧ್ಯಮದ ಒಂದು ವಿಭಾಗ ಕೈ ಜೋಡಿಸಿ ಸಿಪಿಐ(ಎಂ)ನ ಹೆಸರು ಕೆಡಿಸುವ ಮತ್ತು ಸಿಪಿಐ(ಎಂ) ಪಕ್ಷವು ರಾಜಕೀಯ ಕೊಲೆಗಳಲ್ಲಿ ನಿರತವಾಗಿರುವ ಕೊಲೆಗಾರರ ಪಕ್ಷ ಎಂದು ಬಿಂಬಿಸುವ ವಿಷಪೂರಿತ ಪ್ರಚಾರಗಳು ನಡೆದವು. ಕೊಲೆಗೆ ಹೊಣೆಗಾರರಾದವರನ್ನು ಗುರುತಿಸಲು, ಮತ್ತು ನ್ಯಾಯದ ಕಟಕಟೆಗೆ ತರಲು ಈ ಅಪರಾಧದ ವಿಷಯದಲ್ಲಿ ಸಮಗ್ರವಾದ ತನಿಖೆಯಾಗಬೇಕು.

ಆದರೆ ಯುಡಿಎಫ್ ಸರ್ಕಾರವು ಈ ವಿಷಯದಲ್ಲಿ ಪೋಲಿಸ್ ತನಿಖೆಯ ಮೇಲೆ ಪ್ರಭಾವ ಬೀರುತ್ತಿರುವ ರೀತಿ, ಮಧ್ಯ ಪ್ರವೇಶಿಸುತ್ತಿರುವ ರೀತಿ ರಾಜಕೀಯ ದ್ವೇಷದ ಒಂದು ಉದಾರಹರಣೆಯಾಗಿದೆ. ಕಾಂಗ್ರೆಸ್‌ನ ಮಂತ್ರಿಗಳು ಸೇರಿದಂತೆ ಅದರ ನಾಯಕತ್ವವು ಈ ದುರಂತಮಯ ಕೊಲೆಯಿಂದ ರಾಜಕೀಯ ಲಾಭ ಮಾಡಿಕೊಳ್ಳುವ ಹವಣಿಕೆಯಲ್ಲಿ ತೊಡಗಿದೆ. ಸಿಪಿಐ(ಎಂ) ಪಕ್ಷವು ಈ ಘಾತುಕ ಪ್ರಚಾರವನ್ನು ತಿರಸ್ಕರಿಸುತ್ತದೆ.. ತನ್ನ ಹೆಸರಿಗೆ ಮಸಿ ಬಳಿಯುವಂತಹ ಈ ಪ್ರಯತ್ನವನ್ನು ಹಿಮ್ಮೆಟ್ಟಿಸಲು ಸಿಪಿಐ(ಎಂ) ಪಕ್ಷವು ಜನ ಸಮೂಹಗಳನ್ನು ಅಣಿ ಸೇರಿಸುತ್ತದೆ.

ಈ ಅಪರಾಧದ ವಿಷಯದಲ್ಲಿ ಪೋಲಿಸರಿಂದ ನಿಷ್ಪಕ್ಷಪಾತವಾದ ಮತ್ತು ನ್ಯಾಯ ರೀತಿಯ ವಿಚಾರಣೆ ನಡೆಯಬೇಕು. ಒಂದೊಮ್ಮೆ ಈ ಅಪರಾಧದಲ್ಲಿ ನಮ್ಮ ಪಕ್ಷದ ಯಾವುದೇ ಸದಸ್ಯರು ಭಾಗಿಯಾಗಿದ್ದಾರೆಂಬ ಆರೋಪದಲ್ಲಿ ಸತ್ಯ ಕಂಡು ಬಂದಲ್ಲಿ ನಾವು ಅದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತೇವೆ. ನಮ್ಮ ಪಕ್ಷಕ್ಕೆ ಸೇರಿದ ಯಾವುದೇ ವ್ಯಕ್ತಿ ಈ ಕೊಲೆಯಲ್ಲಿ ಭಾಗಿಯಾಗಿದ್ದಲ್ಲಿ ಆ ಅದು ನಮ್ಮ ಪಕ್ಷ ಮತ್ತು ಚಳುವಳಿಯ ಹಿತಾಸಕ್ತಿಗೆ ವಿರುದ್ಧವಾದ ಕೆಲಸವಾಗುತ್ತದೆ. ಅಂತಹ ಕೃತ್ಯವನ್ನು ಪಕ್ಷ ಸಹಿಸಿಕೊಳ್ಳುವುದಿಲ್ಲ. ಕಠಿಣವಾದ ಕ್ರಮವನ್ನು ಕೈಗೊಳ್ಳುತ್ತದೆ. ಏನಾದರೂ ತಪ್ಪು ಪ್ರವೃತ್ತಿಗಳಿದ್ದಲ್ಲಿ ಅದಕ್ಕೆ ತಡೆ ಹಾಕಲಾಗುತ್ತದೆ ಮತ್ತು ತಪ್ಪನ್ನು ತಿದ್ದಿಕೊಳ್ಳಲಾಗುತ್ತದೆ.

ಕಣ್ಣೂರು ಜಿಲ್ಲೆಯಲ್ಲಿ ನಮ್ಮ ಪಕ್ಷದ ವಿರುದ್ಧ ಪಕ್ಷದ ಹೆಸರು ಕೆಡಿಸುವಂತಹ ಸತತವಾದ ಮತ್ತು ದುರುದ್ದೇಶಪೂರಿತವಾದ ಪ್ರಚಾರ ನಡೆಯುತ್ತಿದೆ. ಈ ಜಿಲ್ಲೆಯಲ್ಲಿ ಅಸಂಖ್ಯಾತ ಸಂಗಾತಿಗಳು ಕಾರ್ಮಿಕ ವರ್ಗದ ಮತ್ತು ರೈತಾಪಿ ಚಳುವಳಿಯ ಸಂರಕ್ಷಣೆಯಲ್ಲಿ ತಮ್ಮ ಪ್ರಾಣಾರ್ಪಣೆ ಮಾಡಿದ್ದಾರೆ. ಹಲವಾರು ಜನ ಸಂಗಾತಿಗಳು ಪ್ರತಿಗಾಮಿ ಶಕ್ತಿಗಳ ಹಲ್ಲೆ ಮತ್ತು ರಾಜಕೀಯ ಹಿಂಸೆಗೆ ಬಲಿಯಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಮಾರ್ಕ್ಸ್‌ವಾದಿಗಳಿಂದಾದ ಕಗ್ಗೊಲೆಗಳೆಂದು ಏಕಮುಖವಾಗಿ ಬಿಂಬಿಸುವ ಸಲುವಾಗಿ ಈ ಎಲ್ಲವನ್ನು ಮರೆಗೆ ಸರಿಸಲಾಗುತ್ತಿದೆ. ನಮ್ಮನ್ನು ರಾಜಕೀಯವಾಗಿ ಸೈದ್ಧಾಂತಿಕವಾಗಿ ಪ್ರತ್ಯೇಕಗೊಳಿಸಲು ಸಾಧ್ಯವಾಗದವರು, ಸೋಲಿಸಲು ಸಾಧ್ಯವಾಗದವರು ಕಮ್ಯುನಿಸ್ಟ್ ಚಳುವಳಿಯ ಕುರಿತು ವಿಕೃತವಾಗಿ ಚಿತ್ರಿಸುವ ಮೂಲಕ ಜನರಲ್ಲಿ ಗೊಂದಲ ಮೂಡಿಸಲು ಮತ್ತು ಜನರನ್ನು ಹಾದಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ.

ಕಾಂ.ಇ.ಕೆ. ನಯನಾರ್ ಅವರ ಜನ್ಮದಿನಾಚರಣೆಯ ಸಂದರ್ಭದಲ್ಲಿ ನಾವು ಒಂದು ಸ್ಪಷ್ಟ ಸಂದೇಶವನ್ನು ನೀಡಲು ಬಯಸುತ್ತೇವೆ. ಸಿಪಿಐ(ಎಂ) ಪಕ್ಷ ಮತ್ತು ಎಡ ಚಳುವಳಿಯು ಕಾರ್ಮಿಕ ಚಳುವಳಿಗೆ ಮುಂಚೂಣಿ ನೇತೃತ್ವ ನೀಡುವುದನ್ನು ಮುಂದುವರಿಸುತ್ತದೆ. ರೈತರು ಮತ್ತು ಇತರ ಶೋಷಿತ ಜನ ಸಮುದಾಯಗಳ ಮತ್ತು ಜನ ಸಮೂಹಗಳ ಬದುಕಿನ ಪ್ರಶ್ನೆಗಳಿಗಾಗಿ ತನ್ನ ಧೀಮಂತ ಹೋರಾಟವನ್ನು ಮುಂದುವರಿಸುತ್ತದೆ. ನಾವು ಕಾಂಗ್ರೆಸ್ ಮತ್ತು ಯುಡಿಎಫ್‌ಗಳ ಜಾತಿವಾದಿ ಮತ್ತು ಕೋಮುವಾದಿ ರಾಜಕಾರಣವನ್ನು ಎದುರಿಸಿ ಹೋರಾಡುತ್ತೇವೆ. ನಾವು ಎಡ ಮತ್ತು ಪ್ರಜಾಸತ್ತಾತ್ಮಕ ಒಗ್ಗಟ್ಟನ್ನು ಬೆಸೆಯುತ್ತೇವೆ ಮತ್ತು ಮುನ್ನಡೆಯುತ್ತೇವೆ. ●



ಮಣಿ ಹೇಳಿಕೆ: ಸಿಪಿಐ(ಎಂ) ಪೊಲಿಟ್ ಬ್ಯೂರೋ ಖಂಡನೆ ಮತ್ತು ನಿರಾಕರಣೆ

ರಾಜಕೀಯ ವಿರೋಧಿಗಳ ಪ್ರತಿಕಾರದ ಹತ್ಯೆಗಳನ್ನು ಸಮರ್ಥಿಸುವ ಪಕ್ಷದ ಇಡುಕ್ಕಿ ಜಿಲ್ಲಾ ಕಾರ್ಯದರ್ಶಿ ಎಂ.ಎಂ. ಮಣಿಯುವರ ಹೇಳಿಕೆಯನ್ನು ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯೂರೋ ಖಂಡಿಸುತ್ತದೆ ಮತ್ತು ಆ ಹೇಳಿಕೆಯನ್ನು ತಿರಸ್ಕರಿಸುತ್ತದೆ. ಈ ಹೇಳಿಕೆಗೂ ಸಿಪಿಐ(ಎಂ) ಪಕ್ಷದ ರಾಜಕೀಯ ಮತ್ತು ಧೋರಣೆಗೂ ಯಾವ ರೀತಿಯ ಸಂಬಂಧವೂ ಇಲ್ಲ. ಈ ಸಂಬಂಧ ಪಕ್ಷ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ಮೇ 29 ರಂದು ನೀಡಿದ ತನ್ನ ಹೇಳಿಕೆಯಲ್ಲಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ತಿಳಿಸಿದೆ.

ಗಂಭೀರ ರಾಜಕೀಯ ಪಿತೂರಿ

ಕೇರಳದ ಆಳುವ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರವು ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಜನತೆ ಸರ್ಕಾರದ ಬಗೆಗೆ ತೀವ್ರ ಅತೃಪ್ತಿ ಹೊಂದಿದ್ದಾರೆ. ಅಗತ್ಯ ವಸ್ತುಗಳ ಬೆಲೆಗಳು ತೀವ್ರವಾಗಿ ಏರಿವೆ. ಪಡಿತರ ವ್ಯವಸ್ಥೆ ಕುಸಿದಿದೆ. ಮೀನುಗಾರರಿಗೆ ಪೂರೈಸಲಾಗುವ ಸೀಮೆಎಣ್ಣೆ ಕಡಿತ ಮಾಡಿರುವುದರಿಂದ ಅವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸೀಮೆಎಣ್ಣೆ ಕಾಳಸಂತೆಯಲ್ಲಿ ಲಿ. 100 ರೂಪಾಯಿಗೆ ಮಾರಾಟವಾಗುತ್ತಿದೆ. ವಿದ್ಯುತ್ ಕಡಿತ ತೀವ್ರವಾಗಿದೆ. ಜೊತೆಗೆ ವಿದ್ಯುತ್ ಬೆಲೆ ಏರಿಕೆಯನ್ನು ಘೋಷಿಸಲಾಗಿದೆ. ಒಂದು ವರ್ಷ ಕಳೆದರೂ ಮುಖ್ಯಮಂತ್ರಿ ಒಮ್ಮನ್ ಚಾಂಡಿ ಭರವಸೆ ನೀಡಿದ ಯಾವ ಒಂದೇ ಒಂದು ಯೋಜನೆಯೂ ಇನ್ನೂ ಆರಂಭವಾಗಿಲ್ಲ. ಸರ್ಕಾರ ತಾನು ಒಂದು ವರ್ಷ ಪೂರೈಸಿದ ಸಂಬಂಧ ಯಾವ ಆಚರಣೆಯನ್ನು ಕೈ ಸ್ಥಿತಿಯಲ್ಲಿ ಇರಲಿಲ್ಲ. ಮುಸ್ಲಿಂ ಲೀಗ್‌ಗೆ 5ನೇ ಖಾತೆಯನ್ನು ನೀಡಿದ ಸಂಬಂಧ ಆಳುವ ಪಕ್ಷದೊಳಗೇ ಭಿನ್ನಮತ ಉಲ್ಬಣಗೊಂಡು ಬಿಕ್ಕಟ್ಟು ಉಂಟಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ತನ್ನ ವೈಫಲ್ಯಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಮತ್ತು ಯುಡಿಎಫ್ ಪಿತೂರಿ ನಡೆಸುತ್ತಿದ್ದು, 'ಟಿ.ಪಿ. ಚಂದ್ರಶೇಖರನ್ ಕೊಲೆಯು ಈ ಪಿತೂರಿಯ ಭಾಗವಾಗಿ ನಡೆದಿದೆ ಎಂದರೆ ಅದರಲ್ಲಿ ತಪ್ಪೇನು ಇಲ್ಲ ಸಿಪಿಐ(ಎಂ) ರಾಜ್ಯ ಸಮಿತಿಯು ತನ್ನ ಹೇಳಿಕೆಯಲ್ಲಿ ತಿಳಿಸಿದೆ. ರಾಜ್ಯದ ಡಿಜಿಪಿಯವರು

ಪುಟ 12 ಕ್ಕೆ

ಪ್ರಾರಂಭವಾಗಿದೆ ಬೀಡಿ ಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ



ವರದಿ : ವಾ.ಉ.

ಸರಕಾರ ನೇಮಕ ಮಾಡಿದ ಉಪ ಸಮಿತಿಯ ತೀರ್ಮಾನದ ಪ್ರಕಾರ ಬೀಡಿ ಕಾರ್ಮಿಕರಿಗೆ ಕಳೆದ ಎಪ್ರಿಲ್ 1 ರಿಂದ ಸಾವಿರ ಬೀಡಿಗೆ 116.20 ರೂ.ನಂತೆ ಕನಿಷ್ಠ ಕೂಲಿ ಜಾರಿ ಮಾಡಲು ಮಾಲಕರು ಮತ್ತು ಸರಕಾರ ವಿಫಲವಾಗಿರುವುದನ್ನು ಪ್ರತಿಭಟಿಸಿ ಮೇ 17 ರಂದು ರಾಜ್ಯವ್ಯಾಪಿ ಪ್ರತಿಭಟಿಸಲು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ ಮೇ 8 ರಂದು ನಡೆದ ಬೀಡಿ ಕಾರ್ಮಿಕರ 8ನೇ ರಾಜ್ಯ ಸಮ್ಮೇಳನದಲ್ಲಿ ನಿರ್ಣಯಿಸಿತು. ಅದರಂತೆ ಮೇ 17 ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆದಿದ್ದರೂ ಸರಕಾರವು ಗಜೆಟ್ ಪ್ರಕಟಣೆಯನ್ನು ಮಾಡುವುದಾಗಲೀ, ಮಾಲಕರು 'ಒಪ್ಪಂದಕ್ಕೆ ಗೌರವವಿತ್ತು ಸ್ವಯಂಪ್ರೇರಿತವಾಗಿ ಸರಕಾರ ನೇಮಕ ಮಾಡಿದ ಉಪ ಸಮಿತಿಯ ತೀರ್ಮಾನವನ್ನು ಅನುಷ್ಠಾನಗೊಳಿಸುವುದಾಗಲೀ ಮಾಡಿರುವುದಿಲ್ಲ. ಇದನ್ನು ಪ್ರತಿಭಟಿಸಿ ಮೇ 25 ರಿಂದ ಬೀಡಿ ಕಾರ್ಮಿಕರ ಅನಿರ್ದಿಷ್ಟಾವಧಿ ಪ್ರತಿಭಟನೆ ಕರಾವಳಿ ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆ.

ಬೀಡಿ ಮಾಲಕರ ಸಂಘಟನೆಯ ಅಖಿಲ ಭಾರತ ಅಧ್ಯಕ್ಷ, ರಾಜ್ಯಮಟ್ಟದ ಪದಾಧಿಕಾರಿಯಾಗಿ ಭಾಗವಹಿಸಿದ ಉಪ ಸಮಿತಿಯ ಸಭೆಯ ತೀರ್ಮಾನವನ್ನು ನಿಗದಿತ ದಿನಾಂಕದಿಂದ ಜಾರಿ ಮಾಡುವುದು ಬೀಡಿ ಮಾಲಕರ ಕರ್ತವ್ಯ. ಸಭೆಯ ನಿರ್ಣಯದ ಪ್ರಕಾರ ಎಪ್ರಿಲ್ 1ರಿಂದ ಕನಿಷ್ಠ ಕೂಲಿ ಜಾರಿಯಾಗಬೇಕಿತ್ತು. ಆದರೆ ಕೆಲವು ಬೀಡಿ ಮಾಲಕರು ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗೆ ಅಸಮರ್ಥನೀಯ ಹಾಗೂ ನ್ಯಾಯಸಮ್ಮತವಲ್ಲದ ಮನವಿಗಳನ್ನು ಸಲ್ಲಿಸಿದ ನೆಪದಲ್ಲಿ ಕನಿಷ್ಠ ಕೂಲಿ ಅಧಿಸೂಚನೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸುವುದನ್ನು ಸರ್ಕಾರ ವಿಳಂಬಮಾಡುತ್ತಿದೆ. ಅದೇ ಸಮಯದಲ್ಲಿ ಬೀಡಿ ಮಾಲಕರು ತಾವೇ ಒಪ್ಪಿದ ಕನಿಷ್ಠ ಕೂಲಿಯನ್ನು ಪಾವತಿ ಮಾಡಲು ರಾಜ್ಯಪತ್ರದ ನೆಪವನ್ನು ಮುಂದಿಡುತ್ತಾ, ಬೀಡಿ ಕಾರ್ಮಿಕರಿಗೆ ವಂಚನೆ ಮಾಡುತ್ತಿದ್ದಾರೆ. ಬೀಡಿ ಕಾರ್ಮಿಕರು ಅನಿರ್ದಿಷ್ಟಾವಧಿ ಮುಷ್ಕರ ಹೂಡುವಂಥ ಅನಿವಾರ್ಯತೆಯನ್ನು ರಾಜ್ಯ ಸರಕಾರ ಹಾಗೂ ಮಾಲಕರು ಸೃಷ್ಟಿಸಿದ್ದಾರೆ.



ಮಂಗಳೂರು: ಕನಿಷ್ಠ ಕೂಲಿ ಜಾರಿ ಮಾಡಲು ರಾಜ್ಯ ಸರ್ಕಾರ ವಿಫಲವಾಗಿರುವುದನ್ನು ಪ್ರತಿಭಟಿಸಿ ಮೇ 25 ರಿಂದ ಬೀಡಿ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ದ.ಕ.ಜಿಲ್ಲೆಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ.

ಮಂಗಳೂರಿನ ಲಾಲ್‌ಬಾಗ್‌ನ ಗಣೇಶ್ ಬೀಡಿ ಕಂಪೆನಿ ಕಚೇರಿಯ ಎದುರು ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್‌ನ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಮೊದಲ ದಿನ ಬೆಳಗ್ಗಿನಿಂದ ಸಂಜೆಯವರೆಗೆ ಧರಣಿ ನಡೆಸಿದರು. ಧರಣಿಯನ್ನು ಬೀಡಿ ಕಾರ್ಮಿಕ ಸಂಘಟನೆಯ ರಾಷ್ಟ್ರಾಧ್ಯಕ್ಷರಾದ ಬಿ.ಮಾಧವ ಉದ್ಘಾಟಿಸಿದರು. ಬೀಡಿ ಕಾರ್ಮಿಕರು ಇಂದಿನಿಂದ ಬೀಡಿ ಕಟ್ಟುವುದನ್ನು ಸ್ಥಗಿತಗೊಳಿಸಿದ್ದಾರೆ. ಇದರ ಜೊತೆಯಲ್ಲಿ ಡಿಪೋಗಳು ಕೂಡಾ ಬಂದ್ ಆಗಿರುವುದರಿಂದ ಬೀಡಿ ಉದ್ದಿಮೆ ಇಂದಿನಿಂದ ಸ್ಥಗಿತಗೊಳ್ಳಲಿದೆ. ಬೇಡಿಕೆ ಈಡೇರುವವರೆಗೆ ಮುಷ್ಕರ ಮುಂದುವರೆಯಲಿದೆ ಎಂಬುದಾಗಿ ಬೀಡಿ ಕಾರ್ಮಿಕ ಸಂಘಟನೆಯ ಮುಖಂಡರು ಪ್ರತಿಭಟನಾಕಾರರಿಗೆ ತಿಳಿಸಿದರು.

ಪ್ರತಿಭಟನೆಯಲ್ಲಿ ಬೀಡಿ ವರ್ಕರ್ಸ್ ಫೆಡರೇಶನ್‌ನ ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಮುಖಂಡರಾದ ಭಾರತಿ ಬೋಳಾರ್, ಜಯಂತಿ ಶೆಟ್ಟಿ, ಸುನಿಲ್ ಕುಮಾರ್ ಭಜಾಲ್ ಮತ್ತಿತರರು ಉಪಸ್ಥಿತರಿದ್ದರು.

ಇದೇ ವೇಳೆ ಮಂಗಳೂರಿನ ನವಭಾರತ್ ಸರ್ಕಲ್ ಬಳಿಯ ಪ್ರಕಾಶ್ ಬೀಡಿ ಕಚೇರಿ ಎದುರು, ಕುದ್ರೋಳಿಯ ಭಾರತ್ ಬೀಡಿ ಕಚೇರಿ ಎದುರು ಮತ್ತು ಕೈಕಂಭದ ಟೆಲಿಫೋನ್ ಬೀಡಿ ಕಚೇರಿ ಎದುರು ಬೀಡಿ ಕಾರ್ಮಿಕರಿಂದ ಪ್ರತಿಭಟನೆ ನಡೆಯಿತು.

ಪುತ್ತೂರು: ಪುತ್ತೂರು ತಾಲೂಕು ಸಿಐಟಿಯು ಬೀಡಿ ಕೆಲಸಗಾರರ ಸಂಘದ ವತಿಯಿಂದ ಪುತ್ತೂರಿನ ಗಣೇಶ್ ಬೀಡಿ ಕಂಪೆನಿ ಮುಂಭಾಗದಲ್ಲಿ ಮುಷ್ಕರ ಮೇ 25 ರಂದು ಆರಂಭಗೊಂಡಿತು. ಬೀಡಿ ಕಾರ್ಮಿಕರು ಪುತ್ತೂರು ರೈಲ್ವೇ ನಿಲ್ದಾಣದ ಬಳಿಯಲ್ಲಿರುವ ಸಿಪಿಐ(ಎಂ) ಕಚೇರಿಯಿಂದ ಮೆರವಣಿಗೆಯಲ್ಲಿ ನಗರದ ಗಣೇಶ್ ಬೀಡಿ ಕಂಪೆನಿಯ ಬಳಿ ಆಗಮಿಸಿ ಪ್ರತಿಭಟನೆ ನಡೆಸಿದರು.

ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಪುತ್ತೂರಿನ ಕಾರ್ಮಿಕ ಮುಖಂಡ ಪಿ.ಕೆ.ಸತೀಶನ್ ಮತ್ತಿತರರು ಹಾಜರಿದ್ದರು.

ಬಂಟ್ವಾಳ: ವಿಟ್ಲ ಫಿರ್ಕಾ ಬೀಡಿ ಕೆಲಸಗಾರರ ಸಂಘದ ವತಿಯಿಂದ ವಿಟ್ಲದ ದೀಪಕ್ ಬೀಡಿ ಕಂಪೆನಿ ಎದುರು ಮೇ 25 ರಂದು ಮುಷ್ಕರ ನಡೆಸಿದರು. ವಿಟ್ಲ ಪೇಟೆಯಿಂದ ಬೀಡಿ ಕಾರ್ಮಿಕರು ಮೆರವಣಿಗೆಯಲ್ಲಿ ಸಾಗಿ ಬಂದು ದೀಪಕ್ ಬೀಡಿ ಕಂಪೆನಿಯ ವಠಾರದಲ್ಲಿ ಮುಷ್ಕರ ನಡೆಸಿದರು. ಸಂಘದ ಅಧ್ಯಕ್ಷ ರಾಮಣ್ಣ ವಿಟ್ಲ, ಉಪಾಧ್ಯಕ್ಷ ವೈ.ಕೆ.ನಾರಾಯಣ, ಕಾರ್ಯದರ್ಶಿ ಜಿನ್ನಪ್ಪ ಸಾಲ್ಯಾನ್ ಮತ್ತಿತರರು ಮುಷ್ಕರದ ನೇತೃತ್ವ ವಹಿಸಿದ್ದರು.

ಮೂಡಬಿದ್ರೆ: ಮೂಡಬಿದ್ರೆ ಪ್ರದೇಶ ಬೀಡಿ ಕೆಲಸಗಾರರ ಸಂಘದ ನೇತೃತ್ವದಲ್ಲಿ ಗಣೇಶ್ ಬೀಡಿ ಕಂಪೆನಿಯ ಎದುರು ಬೀಡಿ ಕಾರ್ಮಿಕರು ಮೇ 25 ರಂದು ಅನಿರ್ದಿಷ್ಟಾವಧಿ ಮುಷ್ಕರ ಪ್ರಾರಂಭಿಸಿದರು.

ಸಿಪಿಐ(ಎಂ) ಮುಖಂಡರಾದ ಯಾದವ ಶೆಟ್ಟಿ, ಸಿಐಟಿಯು ಮುಖಂಡ ವಸಂತ ಆಚಾರಿ, ಪುರಸಭಾ ಉಪಾಧ್ಯಕ್ಷೆ ಹಾಗೂ ಮೂಡಬಿದ್ರಿ ವಲಯ ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷೆ ರಮಣಿ, ಮುಖಂಡರಾದ ರಾಧ, ಗಿರಿಜ ಉಪಸ್ಥಿತರಿದ್ದರು.

ಶಾಸಕರ ಮನೆಗೆ ಮುತ್ತಿಗೆ:

4 ದಿನಗಳಿಂದ ಮುಷ್ಕರ ನಡೆಸುತ್ತಿರುವ ಬೀಡಿ ಕಾರ್ಮಿಕರಿಗೆ ಬೆಂಬಲ ಸೂಚಿಸಿ ಮಂಗಳೂರಿನಲ್ಲಿ ವಿವಿಧ ಸಂಘಟನೆಗಳ ಸದಸ್ಯರು ಮೇ 28 ರಂದು ವಿಧಾನಸಭಾ ಉಪಾಧ್ಯಕ್ಷ ಎನ್.ಯೋಗೀಶ್ ಭಟ್ ಅವರ ಮನೆಗೆ ಮುತ್ತಿಗೆ ಚಳುವಳಿ ನಡೆಸಿದರು.

ಸಿಐಟಿಯು, ಡಿವೈಎಫ್‌ಐ, ಎಸ್‌ಎಫ್‌ಐ, ದಲಿತ ಹಕ್ಕುಗಳ ಸಮಿತಿ ಈ ಸಂಘಟನೆಗಳಿಗೆ ಸೇರಿದ ಸದಸ್ಯರು ಬೆಳಿಗ್ಗೆ 11 ಗಂಟೆಯ ಸುಮಾರಿಗೆ ಮಂಗಳೂರಿನ ಸಿಐಟಿಯು ಮೈದಾನು ಕಚೇರಿಯಿಂದ ಹೊರಟು, ರಾಜ್ಯ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಶಾಸಕರ ಮನೆಯತ್ತ ಹೆಜ್ಜೆ ಹಾಕಿದ್ದರು. ಪಿವಿಎಸ್ ಸರ್ಕಲ್ ಬಳಿ ಪೋಲೀಸರು ಪ್ರತಿಭಟನಾಕಾರರನ್ನು ತಡೆದಾಗ, ನಡುರಸ್ತೆಯಲ್ಲೇ ಪ್ರತಿಭಟನೆ ನಡೆಯಿತು. ಬಳಿಕ ಶಾಸಕ ಯೋಗೀಶ್ ಭಟ್ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದಲ್ಲದೆ, ಬೀಡಿ ಕಾರ್ಮಿಕರ ಬೇಡಿಕೆಗಳಿಗೆ ಸ್ಪಂದಿಸುವ ಭರವಸೆ ನೀಡಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ಮಂಗಳೂರು ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ, ನಗರಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಬೀದಿ ಬದಿ ವ್ಯಾಪಾರಸ್ಥರ ಸಂಘದ ಕಾರ್ಯದರ್ಶಿ ಸಂತೋಷ್ ಕುಮಾರ್ ಮಾತನಾಡಿದರು.

ಹೋರಾಟದ ನೇತೃತ್ವವನ್ನು ಬೀಡಿ ಕಾರ್ಮಿಕರ ಸಂಘಟನೆಯ ಮುಖಂಡರಾದ ಬಾಬು ದೇವಾಡಿಗ, ಜಯಂತಿ ಬಿ.ಶೆಟ್ಟಿ, ಭಾರತಿ ಬೋಳಾರ್, ಇತರ ಕಾರ್ಮಿಕ ಸಂಘಟನೆಗಳ ಯೋಗೀಶ್ ಜಪ್ಪಿನಮೊಗರು, ಎಲ್.ಟಿ.ಸುವರ್ಣ, ಮಹಮ್ಮದ್ ಮುಸ್ತಾಫ, ಅಹ್ಮದ್ ಬಾವಾ, ಡಿವೈಎಫ್‌ಐನ ಸಂತೋಷ್ ಬಜಾಲ್, ಎಸ್‌ಎಫ್‌ಐನ ನಿತಿನ್ ಕುತ್ತಾರ್, ಚರಣ್ ಪಂಜಿಮೊಗರು, ದಲಿತ ಹಕ್ಕುಗಳ ಸಮಿತಿಯ ಲಿಂಗಪ್ಪ ನಂತೂರು ಮುಂತಾದವರು ವಹಿಸಿದ್ದರು.

ಹಗಲು ರಾತ್ರಿ ಧರಣಿಗೆ ಪುತ್ತೂರು ಬೀಡಿ ಕಾರ್ಮಿಕರ ನಿರ್ಧಾರ:

ಪುತ್ತೂರಿನ ಗಣೇಶ್ ಬೀಡಿ ಕಂಪೆನಿಯ ಎದುರು ಮೇ 25 ರಿಂದ ಆರಂಭಗೊಂಡಿದ್ದ ಮುಷ್ಕರವು ಮೇ 28 ರಿಂದ ಅಹರ್ನಿಶಿ ಮುಷ್ಕರವಾಗಿ ಪರಿವರ್ತಿತಗೊಂಡಿದೆ.

ರಾತ್ರಿಗೂ ಮುಂದುವರಿದ ಮುಷ್ಕರಕ್ಕೆ ಜಿಲ್ಲಾ ಬೀಡಿ ಫೆಡರೇಶನ್ನಿನ ನೀಲೇಶ್ ಪೆರಿಂಜೆ, ಸಿಪಿಐ(ಎಂ) ಪುತ್ತೂರು ತಾಲೂಕು ಕಾರ್ಮಿಕ ಮುಂಖಂಡ ಪಿ.ಕೆ.ಸತೀಶನ್ ಚಾಲನೆ ನೀಡಿದರು.

ಮೂಡಬಿದ್ರೆಯಲ್ಲಿ ಉಗ್ರಹೋರಾಟದ ಎಚ್ಚರಿಕೆ:

ಬೀಡಿ ಕಾರ್ಮಿಕರು ಒಂದೆಡೆ ಮುಷ್ಕರ ನಡೆಸುತ್ತಿದ್ದರೆ, ಕೆಲವು ಮಾಲಕರು ರಾತ್ರಿ ಹೊತ್ತಿನಲ್ಲಿ ಗುಟ್ಟಾಗಿ ಬೀಡಿಯನ್ನು ಕಾರ್ಮಿಕರಿಂದ ಸಂಗ್ರಹಿಸುತ್ತಿದ್ದಾರೆ ಎಂಬ ಗುಮಾನಿ ಇದೆ. ಇದು ನಿಜವಾದರೆ ಬೀಡಿ ಕಾರ್ಮಿಕರು ಇನ್ನಷ್ಟು ಉಗ್ರವಾದ ಹೋರಾಟ ನಡೆಸಲಿರುವರು ಎಂದು ದ.ಕ.ಜಿಲ್ಲಾ ಬೀಡಿ ಫೆಡರೇಶನ್ ಉಪಾಧ್ಯಕ್ಷೆ ರಮಣಿ ಎಚ್ಚರಿಕೆ ನೀಡಿದ್ದಾರೆ. ಅವರು ಮೂಡಬಿದ್ರೆಯ ಗಣೇಶ್ ಬೀಡಿ ಕಂಪೆನಿಯ ಆವರಣದಲ್ಲಿ ಐದು ದಿನಗಳಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿರುವ ಪ್ರತಿಭಟನಾಕಾರರನ್ನುದ್ದೇಶಿಸಿ ಮೇ 29 ರಂದು ಮಾತನಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ ಪ್ರತಿಭಟನಾಕಾರರನ್ನು ಬೆಂಬಲಿಸಿ ಮಾತನಾಡಿದರು.

ಉಡುಪಿ ಜಿಲ್ಲೆಯಲ್ಲಿ ಆರಂಭಗೊಂಡ ಬೀಡಿ ಕಾರ್ಮಿಕರ ಅನಿರ್ದಿಷ್ಟಾವಧಿ ಸತ್ಯಾಗ್ರಹ:

ಉಡುಪಿ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ ನೇತೃತ್ವದಲ್ಲಿ ಬೀಡಿ ಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರವು ಮೇ 29 ರಂದು

–ಪುಟ 14 ಕ್ಕೆ

ತೈಲ ಕಂಪನಿಗಳು ಅಪಾರ ಪ್ರಮಾಣದಲ್ಲಿ 'ಅಂಡರ್ ರಿಕವರಿ'ಯಿಂದ ನರಳುತ್ತಿವೆಯೆನ್ನುವುದು ಒಂದು ದೈತ್ಯ ಗಾತ್ರದ ಮೋಸ. ಅದೇ ರೀತಿ ಪೆಟ್ರೋಲಿಯಂ ಬೆಲೆಗಳಲ್ಲಿ ಸರಕಾರದ ಅಪಾರ ಸಬ್ಸಿಡಿಯ ಅಂಶ ಇದೆಯೆಂಬ ಮಾತು ಕೂಡ. ಈ ಬಾರಿ ದರ ಏರಿಕೆಗಳನ್ನು ಸಮರ್ಥಿಸಲು 'ಮಿತವ್ಯಯ'ದ ಅಗತ್ಯದ ಮಾತೂ ಸೇರಿದೆ–ಹಣಕಾಸು ಕೊರತೆಯಿಂದ ವಿದೇಶಿ ಹೂಡಿಕೆದಾರರು ಭೀತರಾಗಿ ಓಡಿಹೋಗುವುದನ್ನು ತಡೆಯಲಿಕ್ಕಾಗಿ ಈ ಭಾರೀ ಬೆಲೆಯೇರಿಕೆಯಂತೆ. ಇದುವರೆಗೆ ಯುರೋಪಿನಲ್ಲಿ ಒಂಭತ್ತು ಆಳುವ ಸರಕಾರಗಳನ್ನು ಚುನಾವಣೆಗಳಲ್ಲಿ ಬಲಿ ತೆಗೆದುಕೊಂಡ ಈ 'ಮಿತವ್ಯಯ'ದ ವಿಚಾರ ಹೀಗೆ ಭಾರತವನ್ನೂ ಪ್ರವೇಶಿಸಿದೆ, ಬಹುಶಃ ಯುಪಿಎ–2 ಸರಕಾರಕ್ಕೂ ಅದೇ ಗತಿಯನ್ನು ತರಲು.

ಪೆಟ್ರೋಲ್ ಬೆಲೆಯೇರಿಕೆಯ ತರ್ಕಗಳು ಜನತೆಗೆ ಮಾಡಿರುವ ಬೃಹದಾಕಾರದ ಮೋಸಗಳು

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಮೇ 31,2012 ರಂದು ಸಿದ್ದಗೊಂಡ ಸಂಪಾದಕೀಯ

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಪೆಟ್ರೋಲ್ ಬೆಲೆಯೇರಿಕೆಯ ವಿರುದ್ಧ ದೇಶವ್ಯಾಪಿ ಪ್ರತಿಭಟನೆಯ ಸುದ್ದಿ ಬರುತ್ತಿದೆ. ನಾಲ್ಕು ಎಡಪಕ್ಷಗಳು ಈ ಪ್ರತಿಭಟನೆಗೆ ಕರೆ ನೀಡಿದ್ದವು. ಆದರೆ ಯುಪಿಎ–2 ಸರಕಾರ ಈ ಬೃಹತ್ ಪ್ರತಿಭಟನೆಗಳು, ಹರತಾಳ, ರಾಸ್ತಾರೋಕೋಗಳಿಗೆ ಕಿವುಡಾಗಿ ಕೂತಿದೆ. ಅದರ ಕೆಲವು ಮಿತ್ರಪಕ್ಷಗಳೂ ಪ್ರತಿಭಟನೆಯ ದುರ್ಬಲ ದನಿಯೆತ್ತಿದರೂ ಬೆಲೆಯೇರಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ ಎಂದಿದೆ. ಸರಕಾರ ಈ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಲೇ ಇದೆ. ತೈಲ ಕಂಪನಿಗಳಿಗೆ ಆಗುತ್ತಿದೆ ಎನ್ನಲಾದ ಬೃಹತ್ ಪ್ರಮಾಣದ ನಷ್ಟಗಳನ್ನು ತುಂಬಲು ಮತ್ತು ಪ್ರಧಾನ ಮಂತ್ರಿಗಳು ಹೇಳಿರುವಂತೆ ನಮ್ಮ ಸೊಂಟ ಪಟ್ಟಿಗಳನ್ನು ಬಿಗಿದು ಆರ್ಥಿಕದ ಹಣಕಾಸು ಸ್ಥಿತಿಯನ್ನು ಉತ್ತಮ ಪಡಿಸಲು ಇದು ಅಗತ್ಯ ಎಂದು ಹೇಳುತ್ತಿದೆ. ಈ ಬಗ್ಗೆ ಮುಂದೆ ನೋಡೋಣ.

ತೈಲಕಂಪನಿಗಳು ಅಪಾರ ಪ್ರಮಾಣದಲ್ಲಿ 'ಅಂಡರ್ ರಿಕವರಿ' ಅಂದರೆ 'ನಷ್ಟ ಪರಿಹಾರದ ಕೊರತೆ'ಯಿಂದ ನರಳುತ್ತಿವೆಯೆಂದು ನಮಗೆ ಹೇಳಲಾಗುತ್ತಿದೆ. ಇದು 2011–12ರಲ್ಲಿ 1,71,140 ಕೋಟಿ ರೂ.ಗಳಷ್ಟಾಗಿದೆಯಂತೆ. ದೇಶ ಇಷ್ಟೊಂದು 'ಅಗಾಧ' ನಷ್ಟವನ್ನು ಎದುರಿಸಬಲ್ಲುದೇ, ಅದಕ್ಕೇ ಈ ಬೆಲೆ ಹೆಚ್ಚಳ ಎನ್ನಲಾಗುತ್ತಿದೆ.

ಏನೀ 'ಅಂಡರ್ ರಿಕವರಿ'?

ಪೆಟ್ರೋಲಿಯಂ ಉತ್ಪನ್ನಗಳ ಚಿಲ್ಲರೆ ಬೆಲೆಗಳು ಮತ್ತು ಅವುಗಳ ಆಮದು ಬೆಲೆಗಳ ನಡುವಿನ ವ್ಯತ್ಯಾಸವೇ ಸರಕಾರ ಹೇಳುವ ಈ 'ನಷ್ಟ ಪರಿಹಾರ ಕೊರತೆ. ಅಂದರೆ ಇದೊಂದು ಕಲ್ಪಿತ ಸ್ವರೂಪದ ನಷ್ಟ. ಏಕೆಂದರೆ ಆಮದು ಬೆಲೆಯಲ್ಲಿ ಸುಂಕಗಳು, ವಿಮೆ, ಸಾಗಾಣಿಕೆ ಮತ್ತು ಇತರ ಸುಂಕಗಳು ಸೇರಿರುತ್ತವೆ. ಇವನ್ನೆಲ್ಲ ಭಾರತೀಯ ಕಂಪನಿಗಳು ತೆರುತ್ತಿಲ್ಲ. ಏಕೆಂದರೆ ನಾವು ಆಮದು ಮಾಡುವುದು ಕಚ್ಚಾತೈಲವನ್ನು ಮಾತ್ರ, ಅದನ್ನು ಭಾರತದಲ್ಲೇ ಸಂಸ್ಕರಿಸಿ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಇತ್ಯಾದಿಗಳನ್ನು ಉತ್ಪಾದಿಸಲಾಗುತ್ತದೆ. ಅಲ್ಲದೆ ಈ ತೈಲ ಕಂಪನಿಗಳು 'ಅಂಡರ್ ರಿಕವರಿ' ಎಂದು ಎದೆ ಬಡಿದುಕೊಳ್ಳುತ್ತಿರುವ ಈ ಅಂಕೆ–ಸಂಖ್ಯೆಗಳನ್ನು ಅವುಗಳ ಲೆಕ್ಕಪತ್ರಗಳನ್ನು ಕಾನೂನು ಪ್ರಕಾರ ಪರಿಶೋಧಿಸುವ ಆಡಿಟರುಗಳು ಪರಿಗಣಿಸುವುದೇ ಇಲ್ಲ. ಪೆಟ್ರೋಲಿಯಂ ಉತ್ಪನ್ನದ ಬೆಲೆಯನ್ನು ಆಮದು ಮಾಡಿದ ಕಚ್ಚಾತೈಲದ ಖರ್ಚು ಮತ್ತು ಅದರ ದೇಶೀ ಸಂಸ್ಕರಣ ಖರ್ಚನ್ನು ಕೂಡಿಸಿದ ಮೊತ್ತದೊಂದಿಗೆ ಹೋಲಿಸುವ ಬದಲು ಅಂತರ್ರಾಷ್ಟ್ರೀಯ ಬೆಲೆಯನ್ನು ಒಂದು ಮಾನದಂಡವಾಗಿ ತೆಗೆದುಕೊಳ್ಳಲಾಗುತ್ತದೆ.

ವಿದೇಶಿ ತೈಲ ಕಂಪನಿಗಳ ರಾಷ್ಟ್ರೀಕರಣದ ಮೊದಲು ಭಾರತದಲ್ಲಿ ಪೆಟ್ರೋಲಿಯಂ ಉತ್ಪನ್ನಗಳನ್ನು ಎಸ್ಸೊ, ಕಾಲ್ಟೆಕ್ಸ್, ಬರ್ಮಾಶೆಲ್ ಮುಂತಾದ ಕಂಪೆನಿಗಳು ಮಾರುತ್ತಿದ್ದವು. ಇವು ಬಹುರಾಷ್ಟ್ರೀಯ ಕಂಪನಿಗಳಾದ್ದರಿಂದ ಅವು ತಮ್ಮ ಲೆಕ್ಕಾಚಾರಗಳನ್ನು ಅಂತರ್ರಾಷ್ಟ್ರೀಯ ಬೆಲೆಗಳ ಆಧಾರದಲ್ಲಿ ಮಾಡುತ್ತಿದ್ದವು. ಆದರೆ ರಾಷ್ಟ್ರೀಕರಣದ ನಂತರ ದೇಶೀ ಉತ್ಪನ್ನಗಳ ಮಾರಾಟ ಬೆಲೆ ಕಚ್ಚಾತೈಲದ ಆಮದು ಬೆಲೆ ಮತ್ತು ದೇಶೀ ಸಂಸ್ಕರಣ ಖರ್ಚು ಸೇರಿಸಿದ ಮೊತ್ತ ಎಂಬುದು ತರ್ಕಸಮ್ಮತ. ಆದರೆ ಈಗಲೂ ಅಂತರ್ರಾಷ್ಟ್ರೀಯ ಬೆಲೆಗಳನ್ನು



ಮಾನದಂಡವಾಗಿ ಬಳಸುತ್ತಿರುವುದೇ ಈ ಅತಿರಂಜಿತ ಕಾಲ್ಪನಿಕ ನಷ್ಟಗಳನ್ನು ಉಂಟು ಮಾಡಿದೆ. ಇದೊಂದು ದೈತ್ಯ ಗಾತ್ರದ ಮೋಸ.

ಲೋಕಸಭೆಯಲ್ಲಿ ಒಂದು ಪ್ರಶ್ನೆಗೆ ಸರಕಾರದ ವತಿಯಿಂದ ನೀಡಿದ ಉತ್ತರ ಈ ಮೋಸವನ್ನು ಬಿಂಬಿಸುತ್ತದೆ. ಈ ಉತ್ತರದಲ್ಲಿ ಪೆಟ್ರೋಲಿಯಂ ಮಂತ್ರಿಗಳು ಸಾರ್ವಜನಿಕ ವಲಯದ ಕಂಪನಿಗಳು ತೆರಿಗೆ ಪಾವತಿ ಮಾಡಿದ ನಂತರ ಗಳಿಸಿದ ಲಾಭಗಳ ವಿವರಗಳನ್ನು ಕೊಟ್ಟಿದ್ದಾರೆ. 2010–11ರಲ್ಲಿ ಒಎನ್‌ಜಿಸಿ 18,924 ಕೋಟಿ ರೂ.ಗಳ ಲಾಭ ಗಳಿಸಿತು, ಇಂಡಿಯನ್ ಆಯಿಲ್ ಗಳಿಸಿದ ಲಾಭ 7,745 ಕೋಟಿ ರೂ.ಗಳು, ಭಾರತ್ ಪೆಟ್ರೋಲಿಯಂ 15,547 ಕೋಟಿ ರೂ.ಗಳು ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ 1,539 ಕೋಟಿ ರೂ.ಗಳು. ಎಲ್ಲಿದೆ ನಷ್ಟ ? 'ಅಂಡರ್ ರಿಕವರಿ'ಯ ರಾಗ ಹಾಡುತ್ತಾ ಯುಪಿಎ–2 ಸರಕಾರ ಯಾರನ್ನು ಮರುಳು ಮಾಡುತ್ತಿದೆ?

ಸಬ್ಸಿಡಿಗಳು–ಯಾರಿಂದ, ಯಾರಿಗೆ?

ಈಗ ಸಬ್ಸಿಡಿಗಳ ಪ್ರಶ್ನೆಯನ್ನು ಎತ್ತಿಕೊಳ್ಳೋಣ. ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆಗಳು ಮತ್ತು ಸುಂಕಗಳು ಕೇಂದ್ರ ಸರಕಾರಕ್ಕೆ 2010–11ರಲ್ಲಿ ರೂ.11,36,497 ಕೋಟಿ ರೂ.ಗಳ ಆದಾಯವನ್ನು ತಂದಿವೆ ಎಂದು ಸಂಸದೀಯ ಸ್ಥಾಯೀ ಸಮಿತಿಯ ವರದಿ ತೋರಿಸುತ್ತಿದೆ. ಇದಲ್ಲದೆ ರಾಜ್ಯ ಸರಕಾರಗಳು ಗಳಿಸಿರುವುದು ರೂ.88.797 ಕೋಟಿ. ಹೀಗೆ ಪೆಟ್ರೋಲಿಯಂ ಉತ್ಪನ್ನಗಳಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳ ಒಟ್ಟು ಆದಾಯ ಗಳಿಕೆ ರೂ.2,25,494 ಕೋಟಿ ರೂ.ಗಳ ಒಂದು ಬೃಹತ್ ಮೊತ್ತ. ಆದರೆ ಕೇಂದ್ರ ಸರಕಾರ ತೈಲ ಕಂಪನಿಗಳಿಗೆ ನೀಡಿದ ಸಬ್ಸಿಡಿಗಳ ಮೊತ್ತ ಆಯಿಲ್ ಬಾಂಡ್(ಸಾಲಪತ್ರ)ಗಳೂ ಸೇರಿದಂತೆ ರೂ.43,926 ಕೋಟಿ. ಅಂದರೆ ಎಲ್ಲ ಸಬ್ಸಿಡಿಗಳನ್ನು ಕೊಟ್ಟ ನಂತರವೂ ಕೇಂದ್ರದ ಬಳಿ ರೂ.92,571 ಕೋಟಿ ರೂ.ಗಳ ಅಗಾಧ ಮೊತ್ತ ಉಳಿಯುತ್ತದೆ. ಯಾರು ಯಾರಿಗೆ ಸಬ್ಸಿಡಿ ಕೊಡುತ್ತಿದ್ದಾರೆ, ಮಾನ್ಯ ಪ್ರಧಾನ ಮಂತ್ರಿಗಳೇ? ಯಾರು ಸೊಂಟಪಟ್ಟಿ ಬಿಗಿದುಕೊಳ್ಳಬೇಕಾಗಿದೆ, ಹೇಳುತ್ತೀರಾ ?

ಪೆಟ್ರೋಲಿನ ಅಂತರ್ರಾಷ್ಟ್ರೀಯ ಬೆಲೆ ಲೀಟರಿಗೆ 2009–0ರಲ್ಲಿ 23.17ರೂ. ಇದ್ದಾಗ ಭಾರತದಲ್ಲಿ ನಾವು 47.93 ರೂ. ತೆತ್ತಿದ್ದೇವೆ(ನಾಲ್ಕು ಮಹಾನಗರಗಳ ಸರಾಸರಿ ಬೆಲೆ). ಅದೇ ರೀತಿ ಡೀಸೆಲಿನ ಅಂತರ್ರಾಷ್ಟ್ರೀಯ ಬೆಲೆ ರೂ. 22.70 ಆಗಿದ್ದರೆ, ನಾವು ತೆತ್ತಿರುವುದು ರೂ.38.10. ಅನಿಲ ಸಿಲಿಂಡರಿನ ಅಂತರ್ರಾಷ್ಟ್ರೀಯ ಬೆಲೆ ರೂ. 177.14, ನಾವು ತೆತ್ತಿರುವುದು ರೂ. 310.35(ಮೂಲ ಅಂಕಿ–ಅಂಶಗಳು: ಪೆಟ್ರೋಲಿಯಂ ಮಂತ್ರಾಲಯ, 2009–10). ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಗಾಧ ತೆರಿಗೆ, ಸುಂಕಗಳಿಂದಾಗಿಯೇ ಜನ ಇಷ್ಟೊಂದು ನಂಬಲಾಗದಷ್ಟು ವಿಪರೀತ ಬೆಲೆ ತೆರುವ ಮೂಲಕ ಸರಕಾರಕ್ಕೇ ಸಬ್ಸಿಡಿ ಕೊಡುತ್ತಿದ್ದಾರೆ. ಆದ್ದರಿಂದಲೇ, 2008ರಲ್ಲಿ ಅಮೆರಿಕಾದಲ್ಲಿ ಪೆಟ್ರೋಲ್ ಬೆಲೆ ರೂ.17.57 ಆಗಿದ್ದಾಗ, ದಿಲ್ಲಿಯಲ್ಲಿ ರೂ.50.65 ಇತ್ತು!

ಕೊರತೆ ತಗ್ಗಿಸಬೇಕಾದರೆ

ಜನಗಳ ಮೇಲೆ ಈ ಹೆಚ್ಚಿನ ಹೊರೆಗಳನ್ನು ಹಾಕುತ್ತಿರುವುದು ನಮ್ಮ ಆರ್ಥಿಕದ ಹಣಕಾಸು ಆರೋಗ್ಯವನ್ನು ಉತ್ತಮಪಡಿಸುವುದಕ್ಕಾಗಿಯಂತೆ. ನಮ್ಮ ವಿಪರೀತ ಹಣಕಾಸು ಕೊರತೆಯಿಂದ ಭೀತರಾಗಿ ವಿದೇಶಿ ಹೂಡಿಕೆದಾರರು ಓಡಿ ಹೋಗುತ್ತಿದ್ದಾರಂತೆ, ಅದಕ್ಕಾಗಿ ಅದನ್ನು ತುರ್ತಾಗಿ ಇಳಿಸಬೇಕಾಗಿದೆಯಂತೆ– ಹೀಗೆಂದು ದೇಶಕ್ಕೆ ಹೇಳಲಾಗುತ್ತಿದೆ. ಈ ಅಂಕಿ–ಅಂಶಗಳನ್ನು ನೋಡಿ: ಹಣಕಾಸು ಕೊರತೆ ಈಗ ರೂ.5,21,980 ಕೋಟಿ ರೂ. ಇದು ನಮ್ಮ ಒಟ್ಟು ರಾಷ್ಟ್ರೀಯ ಉತ್ಪನ್ನದ 5.9ಶೇ. ಇದೇ ವರ್ಷದ ಬಜೆಟ್ ದಸ್ತಾವೇಜಿನ ಪ್ರಕಾರ ಸರಕಾರ ಬಿಟ್ಟುಕೊಟ್ಟ (ಅಂದರೆ ಸ್ವಯಮಿಚ್ಛೆಯಿಂದಲೇ ಅದು ಸಂಗ್ರಹಿಸದಿರುವ) ತೆರಿಗೆ ಆದಾಯದ ಮೊತ್ತ ರೂ. 5,29,432 ಕೋಟಿ. ಅರ್ಥಾತ್, ಸುಮಾರು ಎಂಟು ಸಾವಿರ ಕೋಟಿ ರೂ.ಗಳಷ್ಟು ಹೆಚ್ಚು !

ಪಾಶ್ಚಿಮಾತ್ಯ ದೇಶಗಳಲ್ಲಿ ಆರ್ಥಿಕ ಬಿಕ್ಕಟ್ಟು ತಂದ ಹಣಕಾಸು ಕಂಪನಿಗಳನ್ನು ಪಾರು ಮಾಡಲು ಸರಕಾರಗಳು ಮಾಡಿದ ಖರ್ಚುಗಳಂತೆ ಈ ತೆರಿಗೆ ರಿಯಾಯ್ತಿಗಳನ್ನು ಕೂಡ ನಮ್ಮ ಸರಕಾರ 'ಉತ್ತೇಜನೆ'ಗಳು ಎಂದು ಸಮರ್ಥಿಸಿಕೊಳ್ಳುತ್ತದೆ. ಹೀಗೆ ಹಣಕಾಸು ಕೊರತೆಯನ್ನು ಇಳಿಸುವ ಹೊರೆ ಬಡಜನರ ಮೇಲಿದೆ, ಅದಕ್ಕಾಗಿ 'ಮಿತವ್ಯಯ'ದ ಕ್ರಮಗಳು! 'ಸೊಂಟಪಟ್ಟಿ ಬಿಗಿದುಕೊಳ್ಳಿ' ಎಂದಿದ್ದಾರೆ ಪ್ರಧಾನ ಮಂತ್ರಿಗಳು. ಪೆಟ್ರೋಲಿನ ಬೆಲೆಯನ್ನು ಭಾರಿ

ಪುಟ 15 ಕ್ಕೆ

ಜಿಮ್! ಜಿಮ್ !! ಯಾಕಿಷ್ಟು ಆತುರ ?

ಮುರುಗೇಶ್ ನಿರಾಣಿ ಅಂತಹ ಕೆಲವು ಹಾಲಿ ಮತ್ತು ಮಾಜಿ ಮಂತ್ರಿಗಳು ಕರ್ನಾಟಕಕ್ಕೆ ಹೂಡಿಕೆದಾರರನ್ನು ಆಕರ್ಷಿಸಲು ಇಷ್ಟೊಂದು ಯಾಕೆ ಆತುರರಾಗಿದ್ದಾರೆ ಎಂಬುದು ಗುಟ್ಟಿನ ವಿಷಯವೇನಲ್ಲ. ಸ್ವತಃ ಉದ್ದಿಮೆದಾರರಾಗಿರುವ ಇವರುಗಳು ವಿಶ್ವ ಬಂಡವಾಳದ ಕಿರಿಯ ಪಾಲುದಾರರಾಗಲು ಹವಣಿಸುತ್ತಿದ್ದಾರೆ ಮಾತ್ರವಲ್ಲ ಹೂಡಿಕೆದಾರರಿಗೆ ಸರ್ಕಾರದಿಂದ ಭಾರೀ ಪ್ರಮಾಣದ ರಿಯಾಯ್ತಿಗಳನ್ನು ನೀಡುವ ಮೂಲಕ ಹೂಡಿಕೆದಾರರಿಂದ ವೈಯಕ್ತಿಕವಾಗಿ ದೊಡ್ಡ ಮೊತ್ತದ "ಕಿಕ್‌ಬ್ಯಾಕ್ಸ್" ಪಡೆಯುವ ಕನಸು ಕಾಣುತ್ತಿದ್ದಾರೆ.

ನಿತ್ಯಾನಂದಸ್ವಾಮಿ

2010ರಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶ ಮತ್ತು 2011ರಲ್ಲಿ ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ(ಜಿಮ್) ನಡೆಸಿದ ಹುಮ್ಮಸ್ಸಿನಲ್ಲಿರುವ ಕರ್ನಾಟಕ ಸರ್ಕಾರ ಇದೀಗ ಜೂನ್ 7 ಮತ್ತು 8ರಂದು ಬೆಂಗಳೂರಿನಲ್ಲಿ ಮತ್ತೊಂದು ವಿಶ್ವ ಹೂಡಿಕೆದಾರರ ಸಮಾವೇಶ ನಡೆಸಲು ಸಕಲ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ. ಆಳುವ ಪಕ್ಷ ಬಿಜೆಪಿಯೊಳಗಿನ ಆಂತರಿಕ ಕಿತ್ತಾಟದಿಂದಾಗಿ ರಾಜ್ಯದಲ್ಲಿ ಒಂದು ಸರ್ಕಾರವೇ ಇಲ್ಲವಾಗಿರುವ ಪರಿಸ್ಥಿತಿ ಉಂಟಾಗಿದ್ದರೂ ವಿಶ್ವ ಹೂಡಿಕೆದಾರರ ಸಮಾವೇಶ ನಡೆಸುವುದರ ಬಗ್ಗೆ ಮಾತ್ರ ಸರ್ಕಾರ ಎಲ್ಲಿಲ್ಲದ ಆಸಕ್ತಿ ತೋರುತ್ತಿದೆ. ಕಳೆದ ಹಲವಾರು ದಿನಗಳಿಂದ ವಿವಿಧ ಉದ್ಯಮ ವಲಯಗಳೊಂದಿಗೆ ಸಮಾಲೋಚನಾ ಸಭೆಗಳನ್ನು, ರೋಡ್ ಶೋಗಳನ್ನು ನಡೆಸಲಾಗಿದೆ. ಪತ್ರಿಕಾ ಮಾಧ್ಯಮಗಳಲ್ಲಿ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ವಿವಿಧ ಜಾಹಿರಾತುಗಳನ್ನು ನೀಡಿ ಕಾರ್ಪೊರೇಟ್ ಉದ್ದಿಮೆದಾರರನ್ನು ಸ್ವಾಗತಿಸಲಾಗುತ್ತಿದೆ. ಹಿಂದಿನ ಎರಡು ಸಮಾವೇಶಗಳ ಸಂದರ್ಭದಲ್ಲಿ ಮಾಡಿದಂತೆ ಜಾಹಿರಾತುಗಳಿಗಾಗಿ, ರೋಡ್ ಶೋಗಳಿಗಾಗಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಹೊಸ ಸೂಟ್ ಮತ್ತಿತರ ವಿಶೇಷ ವಸ್ತುಗಳ ಖರೀದಿಗೆ, ಸಮಾವೇಶಕ್ಕೆ ಆಗಮಿಸುತ್ತಿರುವವರ ಊಟೋಪಚಾರಕ್ಕಾಗಿ, ಅತಿಥಿಗಳ ವಸತಿಗಾಗಿ, ಪ್ರಯಾಣದ ವಿಶೇಷ ಕಾರುಗಳಿಗಾಗಿ, ಮುಖ್ಯ ವೇದಿಕೆ ಮತ್ತು ಇನ್ನಿತರ ಅಲಂಕಾರಕ್ಕಾಗಿ, ಭದ್ರತಾ ವ್ಯವಸ್ಥೆಗಾಗಿ ತೆರಿಗೆದಾರರ ಕೋಟ್ಯಾಂತರ ರೂಪಾಯಿ ಹಣವನ್ನು ಸರ್ಕಾರ ನೀರಿನಂತೆ ಹರಿಸುತ್ತಿದೆ. ಈ ರೀತಿಯ ದುಂದುವೆಚ್ಚಕ್ಕೆ ಸರ್ಕಾರ ತೋರುತ್ತಿರುವ ಆತುರ, ಆಸಕ್ತಿ ಹತ್ತು ಹಲವು ಪ್ರಶ್ನೆಗಳಿಗೆ ಎಡೆಮಾಡಿದೆ.

ಜನರ ಪ್ರಶ್ನೆಗಳಿಗೆ ಇಲ್ಲದ ಆಸಕ್ತಿ :

ಮೂರು ವರ್ಷಗಳ ಹಿಂದೆ ಸಂಭವಿಸಿದ ಭೀಕರ ಅತಿವೃಷ್ಟಿ ಮತ್ತು ನೆರೆಹಾವಳಿಯಿಂದ ರಾಜ್ಯದಲ್ಲಿ ಲಕ್ಷಾಂತರ ಜನ ಮನೆ -ಮಠ ಕಳೆದುಕೊಂಡು ಬೀದಿ ಪಾಲಾಗಿದ್ದರು. ಸಂತ್ರಸ್ತರ ಪುನರ್ವಸತಿಗಾಗಿ ಸಾರ್ವಜನಿಕರಿಂದ ಕೋಟ್ಯಾಂತರ ರೂಪಾಯಿ ಧನಸಹಾಯ ಹರಿದು ಬಂದಿತ್ತು. ಆದರೆ ರಾಜ್ಯ ಬಿಜೆಪಿ ಸರ್ಕಾರಕ್ಕೆ, ಎಲ್ಲವನ್ನು ಕಳೆದುಕೊಂಡು ನಿರಾಶ್ರಿತರಾದವರಿಗೆ ಕನಿಷ್ಠ ವಸತಿ ಸೌಕರ್ಯವನ್ನು ಒದಗಿಸಲು ಸಾಧ್ಯವಾಗಿಲ್ಲ. ಸಾವಿರಾರು ಕುಟುಂಬಗಳು ಈಗಲೂ ತಾತ್ಕಾಲಿಕ ಶೆಡ್ಡುಗಳಲ್ಲಿ ಕನಿಷ್ಠ ನಾಗರಿಕ ಸೌಲಭ್ಯಗಳಿಲ್ಲದೆ ದಿನದೂಡುತ್ತಿವೆ. ಕೆಲವೆಡೆ ಮನೆಗಳನ್ನು ಕಟ್ಟಲಾಗಿದ್ದರೂ ಅವುಗಳು ಯಾವುದೇ ಕ್ಷಣದಲ್ಲಿ ಬಿದ್ದು ಹೋಗುವ ಅಪಾಯ ಇರುವುದರಿಂದ ಸಂತ್ರಸ್ತರು ಆ ಮನೆಗಳೊಳಗೆ ಪ್ರವೇಶಿಸಲು ಒಪ್ಪದೆ ತಗಡಿನ ಶೆಡ್ಡುಗಳಿಗೆ ಶರಣಾಗಿದ್ದಾರೆ. ನೆರೆ ಸಂತ್ರಸ್ತರಿಗೆ ಕನಿಷ್ಠ ಸೌಕರ್ಯಗಳನ್ನು ಒದಗಿಸಲು ಆಸಕ್ತಿ ತೋರದ ಈ ಸರ್ಕಾರ ಹೂಡಿಕೆದಾರರಿಗೆ ಅಗತ್ಯವಾದ ಭೂಮಿ, ವಿದ್ಯುತ್ ಮತ್ತು ನೀರನ್ನು ಕೊರತೆಯಾಗದಂತೆ ಒದಗಿಸುವ ಭರವಸೆಯನ್ನು ನೀಡಿ ಆಹ್ವಾನಿಸುತ್ತಿದೆ.

ರಾಜ್ಯದಲ್ಲಿ 150 ತಾಲ್ಲೂಕುಗಳನ್ನು ಆವರಿಸಿದ ಭೀಕರ ಬರದಿಂದಾಗಿ ಸಾವಿರಾರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ ಗಂಭೀರವಾಗಿದೆ.



ಮನುಷ್ಯರಿಗೂ ಕುಡಿಯುವ ನೀರು ಸಿಗುತ್ತಿಲ್ಲ. ಜಾನುವಾರುಗಳಿಗೂ ನೀರು ಇಲ್ಲ, ಕೆರೆಗಳು ನದಿಗಳೂ ಬತ್ತಿಹೋಗಿವೆ. ಆದರೆ ನೀರನ್ನು ಬಾಟಲಿಗಳಲ್ಲಿ ತುಂಬಿ ಮಾರಾಟ ಮಾಡುವ ಕಂಪನಿಗಳಿಗೆ ಮಾತ್ರ ಕೊರತೆ ಇಲ್ಲ. ಹೀಗೆ ಜನರನ್ನು ಲೂಟಿ ಮಾಡುವ ಕಂಪನಿಗಳನ್ನು ಸ್ವಾಗತಿಸಲು ಸರ್ಕಾರ ತುದಿಗಾಲ ಮೇಲೆ ನಿಂತಿದೆ. ಜನರಲ್ಲಿ ಕುಡಿಯುವ ನೀರನ್ನು ಒದಗಿಸಲು ವಿಫಲವಾಗಿರುವ ಕಂಪನಿಗಳಿಗೆ ಸರ್ಕಾರ ಕೊರತೆಯಾಗದಂತೆ ನೀರನ್ನು ಪೂರೈಸುವ ಭರವಸೆ ನೀಡುತ್ತಿದೆ! ರಾಜ್ಯದ ಲಕ್ಷಾಂತರ ನಿವೇಶನ ರಹಿತ ಕುಟುಂಬಗಳಿಗೆ ನಿವೇನಕ್ಕಾಗಿ ಭೂಮಿ ಒದಗಿಸಲು ವಿಫಲವಾದ ಸರ್ಕಾರ ಉದ್ದಿಮೆಗಳಿಗೆ ಲಕ್ಷಾಂತರ ಎಕರೆ ಭೂಮಿ ನೀಡಲು ಮುಂದಾಗಿದೆ.

ಕಳೆದ ಎರಡು ದಶಕಗಳಲ್ಲಿ ರಾಜ್ಯದಲ್ಲಿ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರಗಳ ಧೋರಣೆಯಲ್ಲಾದ ಬದಲಾವಣೆಯಿಂದಾಗಿ ರೈತರು ಸಾಲು ಸಾಲಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಅನೇಕ ವಸ್ತುನಿಷ್ಠ ಅಧ್ಯಯನಗಳಿಂದ ಸಾಭೀತಾಗಿದೆ. ಕೃಷಿ ಕ್ಷೇತ್ರವನ್ನು ಆವರಿಸಿಕೊಂಡಿರುವ ಬಿಕ್ಕಟ್ಟನ್ನು ನಿವಾರಿಸಲು ಮತ್ತು ಆ ಮೂಲಕ ಕೃಷಿ ರಂಗವನ್ನು ಉಳಿಸಲು ತೋರದ ಆಸಕ್ತಿಯನ್ನು ಸರ್ಕಾರ ಕೈಗಾರಿಕಾ ರಂಗಕ್ಕೆ ಬಂಡವಾಳವನ್ನು ಆಕರ್ಷಿಸಲು ತೋರುತ್ತಿದೆ. ರೈತರು ಕೃಷಿಯನ್ನು ಮಾಡುವುದೇ ಬೇಡ ಎಂದು ಸರ್ಕಾರ ರಾಜ್ಯದ ಕೃಷಿಯನ್ನು ಕಂಪನಿಗಳಿಗೆ ವಹಿಸಿಕೊಡಲು ಹೊರಟಿದೆ.

ರೈತರನ್ನು ದಾರಿತಪ್ಪಸಲಾಗಿತ್ತಿದೆ ಎಂಬ ಆರೋಪ :

ಕೈಗಾರಿಕೆಗಳ ಸ್ಥಾಪನೆಗಾಗಿ ರೈತರು ಭೂಮಿ ನೀಡಲು ಸಿದ್ಧರಿದ್ದಾರೆ. ಕೆಲವರು ದುರುದ್ದೇಶದಿಂದ ರೈತರ ದಾರಿ ತಪ್ಪಿಸುತ್ತಿದ್ದಾರೆ ಮತ್ತು ರೈತರ ಪ್ರತಿಭಟನೆಗೆ ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಇತ್ತೀಚೆಗೆ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಹೇಳಿದ್ದಾರೆ.

ಹೌದು, ರೈತರು ತಮ್ಮ ಭೂಮಿಯನ್ನು ಯಾರಿಗೆ ಬೇಕಾದರೂ ನೀಡಲು ಸಿದ್ಧರಿದ್ದಾರೆ. ಕಳೆದ ಎರಡು ದಶಕಗಳಿಂದ ಮುಖ್ಯವಾಗಿ ರೈತರಿಗೆ ಭೂಮಿಯ ಮೇಲಿನ ಆಸಕ್ತಿ ಕಮ್ಮಿಯಾಗುತ್ತಾ ಬಂದಿದೆ. ಎಷ್ಟೇ ಕಷ್ಟ ಪಟ್ಟು ಬೆಳೆದರೂ ಅದರ ಪ್ರತಿಫಲ ತಮಗೆ ದೊರೆಯುದಿಲ್ಲ ಎಂಬ ಅನುಭವದಿಂದ ರೈತರಲ್ಲಿ ಕೃಷಿಯ ಬಗ್ಗೆ ಆಸಕ್ತಿ ಕುಸಿಯುತ್ತಾ ಬಂದಿದೆ. ಇದು ಅತ್ಯಂತ ಆತಂಕದ ಬೆಳವಣಿಗೆ. ಕಳೆದ ಎರಡು ದಶಕಗಳಿಂದ ಉದಾರೀಕರಣದ ನೀತಿಗಳನ್ನು ವ್ಯವಸ್ಥಿತವಾಗಿ ಜಾರಿಗೆ ತರುವ ಮೂಲಕ ಕೃಷಿಯನ್ನು ರೈತರ ಪಾಲಿಗೆ ಲಾಭದಾಯಕವಲ್ಲದ ಉದ್ಯೋಗವನ್ನಾಗಿ ಪರಿವರ್ತಿಸಲಾಗಿದೆ. ಹಿಂದೆ ದೊರೆಯುತ್ತಿದ್ದ ಸಬ್ಸಿಡಿಗಳು, ಪ್ರೋತ್ಸಾಹಗಳು ಇಲ್ಲದಾಗಿವೆ. ವಿದೇಶಗಳಿಂದ ಅಗ್ಗದ ದರಗಳಲ್ಲಿ ಕೃಷಿ ಉತ್ಪನ್ನಗಳು ಹರಿದು ಬರಲು ಅವಕಾಶ ಕಲ್ಪಿಸಲಾದ ಪರಿಣಾಮವಾಗಿ ನಮ್ಮ ರೈತರು ಬೆಳೆದ ಉತ್ಪನ್ನಗಳಿಗೆ ನ್ಯಾಯವಾದ ಬೆಲೆ ಸಿಗದಂತಾಗಿದೆ. ನಿರಂತರ ಬೆಲೆ ಕುಸಿತದ ಹಿನ್ನೆಲೆಯಲ್ಲಿ ಕೃಷಿಯಲ್ಲಿ ತೊಡಗುವುದೇ ಹಾನಿಕಾರಕ ಎಂಬುದು ಅವರ ಅನುಭವವಾಗಿದೆ. ಅಂದರೆ ಉದಾರೀಕರಣದ ನೀತಿಗಳನ್ನು ಕಳೆದ ಎರಡು ದಶಕಗಳಿಂದ ವ್ಯವಸ್ಥಿತವಾಗಿ ಜಾರಿಗೆ ತರುವ ಮೂಲಕ ರೈತರನ್ನು ಕೃಷಿ ರಂಗದಿಂದ ಓಡಿಸುವ ವ್ಯವಸ್ಥಿತ ಕೆಲಸವನ್ನು ಮಾಡಿದ ಬಳಿಕ ಈಗ ರೈತರು ಭೂಮಿಯನ್ನು ಬಿಟ್ಟುಕೊಡಲು ಸಿದ್ಧರಿದ್ದಾರೆ; ಕೆಲವರು ಅವರ ದಾರಿ ತಪ್ಪಿಸುತ್ತಿದ್ದಾರೆ ಎಂದು ಆರೋಪಿಸಲಾಗುತ್ತಿದೆ.

'ರೈತರ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುವುದಿಲ್ಲ' ಎಂದು ಸರ್ಕಾರ ಮತ್ತೆ ಮತ್ತೆ ಹೇಳಿಕೆ ನೀಡುವ ಪರಿಸ್ಥಿತಿ ಉಂಟಾಗಿರುವುದು ಹೂಡಿಕೆದಾರರ ಸಮಾವೇಶಗಳ ಹಿಂದಿರುವ ಕುತಂತ್ರವನ್ನು ಬಯಲಿಗೆಳೆದಿದೆ. ಸಕಾರವೇ ರೈತರ ದಾರಿತಪ್ಪಿಸುತ್ತಿದೆ. ರೈತರ ಅಸಹಾಯಕತೆಯ ದುರುಪಯೋಗ ತೆಗೆದುಕೊಳ್ಳುತ್ತಿದೆ. ರೈತರ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಭೂ ಬ್ಯಾಂಕ್ ಸ್ಥಾಪನೆ ಮಾಡಿರುವ ಸರ್ಕಾರದ ಕ್ರಮವೇ ಪ್ರಶ್ನಾರ್ಹವಾಗಿದೆ. ಒಟ್ಟು ಪ್ರಕ್ರಿಯೆ ಪಾರದರ್ಶಕವಾಗಿಲ್ಲ. ಸ್ಥಾಪನೆಯಾಗಲಿರುವ ಕೈಗಾರಿಕೆಗಳಿಗೆ ನಿಜವಾಗಿ ಬೇಕಾಗುವ ಭೂಮಿ ಎಷ್ಟು ಎಂಬುದನ್ನು ಸರ್ಕಾರ ಸಾರ್ವಜನಿಕವಾಗಿ ಘೋಷಿಸಬೇಕು. ಅಷ್ಟನ್ನು ಮಾತ್ರ ಸ್ವಾಧೀನ ಪಡಿಸಬೇಕು. ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ರೈತರಿಂದ ಸ್ವಾಧೀನ ಪಡಿಸಿ, ಅದನ್ನು ರಿಯಲ್ ಎಸ್ಟೇಟ್ ದಂಧೆಕೋರರಿಗೆ, ಭೂ ಮಾಫಿಯಾಗಳಿಗೆ ನೀಡುವುದನ್ನು ಸರ್ಕಾರ ನಿಲ್ಲಿಸಬೇಕು.

ರೈತರ ಭೂಮಿಯನ್ನು ಸ್ವಾಧೀನಪಡಿಸುವಾಗ ಬಲವಂತದ ಕ್ರಮಗಳನ್ನು ಸರ್ಕಾರ ಅನುಸರಿಸಬಾರದು.

ರೈತರ ಒಪ್ಪಿಗೆ ಇಲ್ಲದೆ ಅವರ ಭೂಮಿಯನ್ನು ಸ್ವಾಧೀನ ಮಾಡಬಾರದು. ಭೂಮಿಯನ್ನು ನೀಡಲು ಮುಂದೆ ಬರುವ ರೈತರಿಗೆ ಕೇವಲ ಮಾರುಕಟ್ಟೆ ದರದಲ್ಲಿ ಪರಿಹಾರ ನೀಡಿದರೆ ಸಾಲದು. ಆ ಭೂಮಿಯನ್ನು ಅವಲಂಭಿಸಿದ್ದ ರೈತನ ಕುಟುಂಬದ ಭವಿಷ್ಯವನ್ನು ಗಣನೆಗೆ ತೆಗೆದುಕೊಳ್ಳಬೇಕು. ರೈತರಿಗೆ ಗರಿಷ್ಟ ಪ್ರಮಾಣದ ಪರಿಹಾರ ಮಾತ್ರವಲ್ಲ ಶಾಶ್ವತ ಆದಾಯ ದೊರೆಯುವುದನ್ನು ಖಚಿತಪಡಿಸಿಕೊಳ್ಳಬೇಕು. ಅಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳಲ್ಲಿ ಭೂಮಿ ನೀಡಿದ ರೈತರನ್ನೂ ಷೇರುದಾರರನ್ನಾಗಿ ಮಾಡಿ ಅವರಿಗೆ ನಿರಂತರ ಆದಾಯ ದೊರೆಯುವಂತೆ ಮಾಡಬೇಕು. ಸ್ವಾಧೀನ ಪಡಿಸಲಾಗುವ ಭೂಮಿಯಲ್ಲಿ ಕೃಷಿ ಕೂಲಿಕಾರರಾಗಿ ದುಡಿದು ಜೀವನ ಸಾಗಿಸುತ್ತಿದ್ದ ಕುಟುಂಬಗಳಿಗೂ ಪರಿಹಾರ ನೀಡಬೇಕು. ಸ್ವಾಧೀನ ಪಡಿಸಿಕೊಳ್ಳಲಾದ ಭೂಮಿಯಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಬದುಕುತ್ತಿದ್ದ ಅನಧಿಕೃತ ಸಾಗುವಳಿದಾರರಿಗೂ ಪರಿಹಾರ ದೊರೆಯಬೇಕು. ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮುಂಚೆ ಸರ್ಕಾರದ ವಶದಲ್ಲಿರುವ ಲಕ್ಷಾಂತರ ಎಕರೆ ಕೃಷಿಗೆ ಯೋಗ್ಯವಲ್ಲದ ಬಂಜರು ಭೂಮಿಯನ್ನು ಕೈಗಾರಿಕೆಗಳಿಗೆ ನೀಡುವಂತಾಗಬೇಕು.

ಹೂಡಿಕೆದಾರರಲ್ಲಿ ಕಾಣದ ಆಸಕ್ತಿ : ಇದೇ ಜೂನ್ 7 ಮತ್ತು 8ರಂದು ನಡೆಯಲಿರುವ ಹೂಡಿಕೆದಾರರ ಸಮಾವೇಶದಲ್ಲಿ 18 ಪ್ರಮುಖ ಬ್ಯಾಂಕುಗಳು ಸಹ ಭಾಗವಹಿಸುತ್ತವೆ ಎನ್ನಲಾಗಿದ್ದು 2ಲಕ್ಷ ಕೋಟಿ ರೂ. ಸಾಲ ನೀಡಲು ಮುಂದಾಗಿವೆ ಎಂದು ಬೃಹತ್ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿ ಹೇಳಿದ್ದಾರೆ. ಅಂದರೆ ರಾಜ್ಯ ಸರಕಾರ ಹೂಡಿಕೆದಾರರಿಗೆ ಭೂಮಿ, ನೀರು, ವಿದ್ಯುತ್ ನೀಡುವುದರ ಜತೆಗೆ ಹಣಕಾಸಿನ ವ್ಯವಸ್ಥೆಯನ್ನೂ ಕಲ್ಪಿಸಲು ಮುಂದಾಗಿದೆ. ಮುರುಗೇಶ್ ನಿರಾಣಿ ಅಂತಹ ಕೆಲವು ಹಾಲಿ ಮತ್ತು ಮಾಜಿ ಮಂತ್ರಿಗಳು ಕರ್ನಾಟಕಕ್ಕೆ ಹೂಡಿಕೆದಾರರನ್ನು ಆಕರ್ಷಿಸಲು ಇಷ್ಟೊಂದು ಯಾಕೆ ಆತುರರಾಗಿದ್ದಾರೆ ಎಂಬುದು ಗುಟ್ಟಿನ ವಿಷಯವೇನಲ್ಲ. ಸ್ವತಃ ಉದ್ದಿಮೆದಾರರಾಗಿರುವ ಇವರುಗಳು ವಿಶ್ವ ಬಂಡವಾಳದ ಕಿರಿಯ ಪಾಲುದಾರರಾಗಲು ಹವಣಿಸುತ್ತಿದ್ದಾರೆ ಮಾತ್ರವಲ್ಲ ಹೂಡಿಕೆದಾರರಿಗೆ ಸರ್ಕಾರದಿಂದ ಬಾರೀ ಪ್ರಮಾಣದ ರಿಯಾಯ್ತಿಗಳನ್ನು ನೀಡುವ ಮೂಲಕ ಹೂಡಿಕೆದಾರರಿಂದ ವ್ಯಯಕ್ತಿಕವಾಗಿ ದೊಡ್ಡ ಮೊತ್ತದ "ಕಿಕ್‌ಬ್ಯಾಕ್ಸ್" ಪಡೆಯುವ ಕನಸು ಕಾಣುತ್ತಿದ್ದಾರೆ.

ಭಾರತೀಯ ಜನತಾ ಪಕ್ಷದ ರಾಜ್ಯ ಸರಕಾರದ ಕೆಲವು ಮಂತ್ರಿಗಳು ಮತ್ತು ಶಾಸಕರು ಕೆಟ್ಟ ಕನಸು ಕಾಣುತ್ತಿದ್ದರೂ, ಹೂಡಿಕೆದಾರರು ಕರ್ನಾಟಕದ ರಾಜಕೀಯ ಅಸ್ಥಿರ ಪರಿಸ್ಥಿತಿಯನ್ನು ಗಮನಿಸಿ ಬಂಡವಾಳ ಹೂಡಲು ಹಿಂಜರಿಯುತ್ತಿರುವುದು ಸ್ಪಷ್ಟವಾಗಿದೆ. 2010ರ ಜಿಮ್‌ನಲ್ಲಿ ರಾಜ್ಯಕ್ಕೆ 4ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆಯನ್ನು ನಿರೀಕ್ಷಿಸಲಾಗಿತ್ತು. ಸಮಾವೇಶದಲ್ಲಿ 398 ಕಂಪನಿಗಳು ಭಾಗವಹಿಸಿದ್ದವು. ಅವುಗಳಲ್ಲಿ 315 ಕಂಪನಿಗಳು ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಮಾಡಿದ್ದವು. ಆದರೆ ಕಳೆದ ಎರಡು ವರ್ಷಗಳಲ್ಲಿ ರಾಜ್ಯಕ್ಕೆ ಬಂದಿರುವ ಕಂಪನಿಗಳು 38 ಮಾತ್ರ. ಇನ್ನುಳಿದ 277 ಕಂಪನಿಗಳು ಬಂಡವಾಳ ಹೂಡಲು ಆಸಕ್ತಿ ತೋರುತ್ತಿಲ್ಲ. ರಾಜ್ಯಕ್ಕೆ ಜಿಮ್ ಮೂಲಕ ಬಂದಿರುವ ಕೈಗಾರಿಕೆಗಳ ಪ್ರಮಾಣ ಕೇವಲ ಶೇ.10 ಮಾತ್ರ. ಹಿಂದಿನ ಸಮಾವೇಶದಲ್ಲಿ ಕಬ್ಬಿಣ ಮತ್ತು ಉಕ್ಕಿನ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು. ಹೀಗಾಗಿ ಅರ್ಸೆಲಾರ್, ಮಿತ್ತಲ್, ಪೋಸ್ಕೋ ಮುಂತಾದ ಕಂಪನಿಗಳು ಬಂಡವಾಳ ಹೂಡಿಕೆಗೆ ಮುಂದಾಗಿದ್ದವು. ಆದರೆ ಅಕ್ರಮ ಗಣಿಗಾರಿಕೆಯ ಪರಿಣಾಮದಿಂದಾಗಿ ಗಣಿ ಉದ್ಯಮವೇ ಸ್ಥಗಿತಗೊಂಡಿರುವುದರಿಂದ ಈ ಕಂಪನಿಗಳು ಬಂಡವಾಳ ಹೂಡಲು ಮುಂದಾಗಲಿಲ್ಲ ಎಂದು ಹೇಳಲಾಗುತ್ತಿದೆ.

ಈ ಬಾರಿಯ ಸಮಾವೇಶದಿಂದ ರೂ. 5ಲಕ್ಷ ಕೋಟಿಗೂ ಹೆಚ್ಚು ಬಂಡವಾಳ ಹರಿದು ಬರಲಿದೆ ಎಂದು ಮಂತ್ರಿ ಮುರುಗೇಶ್ ನಿರಾಣಿ ಹೇಳುತ್ತಿದ್ದಾರೆ. ಜತೆಗೆ 10 ಲಕ್ಷ ಉದ್ಯೋಗಗಳ ಸೃಷ್ಟಿಯಾಗುವ ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ. ರಿಲಯನ್ಸ್ ಸಮೂಹದ ಅಂಬಾನಿ ಸೇರಿದಂತೆ 5000 ಉದ್ಯಮಿಗಳು ಭಾಗವಹಿಸುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ಮೇ 31 ರಂದು "ಇಂಡಿಯನ್ ಎಕ್ಸ್‌ಪ್ರೆಸ್" ಮುಖಪುಟದಲ್ಲಿ ಪ್ರಮುಖ ಸುದ್ದಿಯಾಗಿ ಪ್ರಕಟಿಸಿದ ವರದಿಯನ್ನು ಗಮನಿಸಿದರೆ, ಜೂನ್ 7 ಮತ್ತು 8ರ 2ನೇ ವಿಶ್ವ ಹೂಡಿಕೆದಾರರ ಸಮಾವೇಶವೂ ಸಹ ಯಶಸ್ವಿಯಾಗಲಾರದು. ರಾಜ್ಯದ ಪ್ರಸಕ್ತ ನೆಚ್ಚಲಾರದ ರಾಜಕೀಯ ಪರಿಸ್ಥಿತಿಯಿಂದಾಗಿ ಅನೇಕ ಪ್ರಮುಖ ಹೂಡಿಕೆದಾರರು ಸಮಾವೇಶದಲ್ಲಿ ಭಾಗವಹಿಸದೆ ಇರಲು ನಿರ್ಧರಿಸಿದ್ದಾರೆ ಎಂದು ಆ ವರದಿ ಹೇಳುತ್ತದೆ. ರಾಜ್ಯದ ರಾಜಕೀಯ ಪರಿಸ್ಥಿತಿ ತಿಳಿಯಾಗಬೇಕಾದರೆ ವಿಧಾನಸಭೆಗೆ ಹೊಸದಾಗಿ ಚುನಾವಣೆ ನಡೆಸುವುದೊಂದೆ ದಾರಿಯಾಗಿದೆ. ಆದ್ದರಿಂದ ರಾಜ್ಯದ ಹಿತ ದೃಷ್ಟಿಯಿಂದ ರಾಜ್ಯ ಬಿಜೆಪಿ ಸರ್ಕಾರ ಇನ್ನೂ ಹೆಚ್ಚು ವಿಳಂಬಮಾಡದೆ ರಾಜಿನಾಮೆ ನೀಡುವಂತೆ ಒತ್ತಾಯಿಸಬೇಕಾಗಿದೆ.

ಐತಿಹಾಸಿಕ ಜಯ

ಶಿಮ್ಲಾ ಮಹಾನಗರ ಪಾಲಿಕೆ - ಚೊಚ್ಚಲ ನೇರ ಚುನಾವಣೆ ಮೇಯರ್–ಉಪಮೇಯರ್ ಸ್ಥಾನ ಎರಡೂ ಸಿಪಿಐ(ಎಂ) ಬಗಲಿಗೆ

ಹಿಮಾಚಲ ಪ್ರದೇಶದಲ್ಲಿ ಸಿಪಿಐ(ಎಂ) ಐತಿಹಾಸಿಕ ಜಯವನ್ನು ಸಂಪಾದಿಸಿದೆ. ರಾಜಧಾನಿ ಶಿಮ್ಲಾ ಮಹಾನಗರ ಪಾಲಿಕೆಯ ಮೇಯರ್ ಮತ್ತು ಉಪಮೇಯರ್ ಎರಡೂ ಸ್ಥಾನಗಳನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳುವ ಮೂಲಕ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಿಮಾಚಲ ರಾಜ್ಯದ ರಾಜಕಾರಣದಲ್ಲಿ ಹೊಸ ಇತಿಹಾಸವನ್ನು ಬರೆದಿದೆ. ಅದೂ ಭರ್ಜರಿ ಬಹುಮತದೊಂದಿಗೆ. ಈ ಮೂಲಕ 26 ವರ್ಷಗಳ ಕಾಂಗ್ರೆಸ್‌ನ ಅಧಿಪತ್ಯವನ್ನು ಕೊನೆಗಾಣಿಸುವ ಬಿಜೆಪಿಯ ಕನಸಿಗೆ ನೀರು ಹಾಕುವ ಮೂಲಕ..



ಹಳೆಯ ಪಾಲಿಕೆ

1851ಕ್ಕೆ ಅಸ್ತಿತ್ವಕ್ಕೆ ಬಂದ, ದೇಶದ ಅತ್ಯಂತ ಹಳೆಯ ಎಂದು ಗುರುತಿಸಿಕೊಂಡಿರುವ 25 ಸಂಖ್ಯಾಬಲದ ಶಿಮ್ಲಾ ಮಹಾನಗರ ಪಾಲಿಕೆಯ ಚುನಾವಣೆಯ ಫಲಿತಾಂಶ ಇಲ್ಲಿಯವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್‌ಗೆ ಮರ್ಮಾಘಾತ ನೀಡಿತ್ತು. ಹಿಂದಿನ ಪಾಲಿಕೆಯಲ್ಲಿ 15 ಸ್ಥಾನ ಪಡೆದಿದ್ದ ಕಾಂಗ್ರೆಸ್ ಕೇವಲ 10 ಸ್ಥಾನವನ್ನಷ್ಟೇ ಗೆಲ್ಲಲು ಶಕ್ತವಾಯಿತು. ಇನ್ನು ಬಿಜೆಪಿ 8 ಸ್ಥಾನದಿಂದ 12 ಸ್ಥಾನಕ್ಕೆ ತನ್ನ ಬಲವನ್ನು ವಿಸ್ತರಿಕೊಂಡರೂ ಬಹುಮತ ಗಳಿಸಲು ಆಗಲಿಲ್ಲ. ಒಂದು ಸ್ಥಾನದಿಂದ ಹಿಂದುಳಿಯಿತು. ಕಳೆದ ಬಾರಿ ಎರಡು ಸ್ಥಾನ ಗಳಿಸಿದ್ದ ಸಿಪಿಐ(ಎಂ) ತನ್ನ ಈ ಬಾರಿ ಸಂಖ್ಯಾ ಬಲವನ್ನು ಮೂರಕ್ಕೆ ಹೆಚ್ಚಿಸಿಕೊಂಡಿತು. ಮೇಯರ್ ಉಪಮೇಯರ್ ಎರಡೂ ಸ್ಥಾನಗಳನ್ನು ಗೆದಿರುವ ಸಿಪಿಐ(ಎಂ) ಒಟ್ಟಾರೆ ಐದು ಸ್ಥಾನಗಳನ್ನು ಗೆದ್ದಂತಾಗಿದೆ.

ಚೊಚ್ಚಲ ನೇರ ಚುನಾವಣೆ

ಈ ಬಾರಿ ಮೇಯರ್ ಮತ್ತು ಉಪಮೇಯರ್ ಸ್ಥಾನವನ್ನು ನೇರ ಚುನಾವಣೆ ಮೂಲಕ ಆರಿಸಬೇಕೆಂಬ ಹೊಸ ಪದ್ಧತಿ ಜಾರಿಗೆ ಬಂದಿತ್ತು. ಈ ಎರಡೂ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಿಪಿಐ(ಎಂ) ಭರ್ಜರಿ ಬಹುಮದಿಂದ ಗೆಲುವು ಸಾಧಿಸಿತು. ಪಾಲಿಕೆಯಲ್ಲಿ ಕೇವಲ ಮೂರು ಸ್ಥಾನ ಪಡೆದಿದ್ದ ಸಿಪಿಐ(ಎಂ) ಪಕ್ಷವನ್ನು ಜನ ಕೈಹಿಡಿದು ಅತ್ಯಧಿಕ ಬಹುಮತದಿಂದ ಆರಿಸಿದರು.

ಸಿಪಿಐ(ಎಂ)ನ ಸಂಜಯ್ ಚೌಹಾಣ್ ಮೇಯರ್ ಆಗಿ ಆಯ್ಕೆಯಾದರೆ ಟೀಕೇಂದರ್ ಸಿಂಗ್ ಪನ್ವಾರ್ ಉಪಮೇಯರ್ ಆಗಿ ಚುನಾಯಿತರಾದರು. ಎರಡು ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಗಳು ಸೋಲು ಕಂಡಿವೆ.

ಮೇಯರ್ ಚುನಾವಣೆಯಲ್ಲಿ ಸಂಜಯ್ ಚೌಹಾಣ್ ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯನ್ನು 7,868 ಮತಗಳಿಂದ ಸೋಲಿಸಿದರು. ನಿಕಟಪೂರ್ವ ಮೇಯರ್ ಹಾಗೂ ಕಾಂಗ್ರೆಸ್‌ನ ಅಭ್ಯರ್ಥಿ ಮಧು ಸೂದ್ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟರು.

ಸಂಜಯ್ ಒಟ್ಟು 21,903 ಮತಗಳನ್ನು ಪಡೆದರು. ರಾಜ್ಯದ ಅಧಿಕಾರ ರೂಢ ಪಕ್ಷಾವಾದ ಬಿಜೆಪಿಯ ಅಭ್ಯರ್ಥಿ ಎಸ್.ಎಸ್. ಮನ್ಹಾಸ್ ಗಳಿಸಿದ್ದು 14,035 ಮತಗಳು. ಇನ್ನು ಕಾಂಗ್ರೆಸ್ ಪಾಲಿಗೆ ದಕ್ಕಿದ್ದು 13,278 ಮತಗಳು.

ಇನ್ನು ಉಪಮೇಯರ್ ಸ್ಥಾನಕ್ಕೆ ಟೀಕೇಂದರ್ ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯನ್ನು 4,778 ಮತಗಳಿಂದ ಹಿಂದಿಕ್ಕಿದರು. ಇನ್ನು ಕಾಂಗ್ರೆಸ್‌ನ ಅಭ್ಯರ್ಥಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟರು.

ಐತಿಹಾಸಿಕ ಮಹತ್ವದ ಗೆಲುವು

ನಿಜಕ್ಕೂ ಇದು ಕಮ್ಯುನಿಸ್ಟ್ ಚಳುವಳಿಯ

ಪುಟ 10ಕ್ಕೆ

ಐತಿಹಾಸಿಕ ಜಯ.........

ಪುಟ ೪ರಿಂದ

ಪಾಲಿಗೆ ಮಹತ್ವದ ಗೆಲುವು. ಅದರಲ್ಲೂ ದೇಶದ ಪ್ರತಿಷ್ಠಿತ ಪಾಲಿಕೆಗಳಲ್ಲಿ ಒಂದಾದ ಶಿಮ್ಲಾದ ಮೇಯರ್ ಹಾಗೂ ಉಪಮೇಯರ್ ಎರಡೂ ಸ್ಥಾನಗಳನ್ನು ನೇರ ಜನರಿಂದಲೇ ಆಯ್ಕೆಯಾಗಿ ಈ ಪಟ್ಟಕ್ಕೇರುವ ಮೂಲಕ ಗಿರಿ-ಕಂದರಗಳ ನಾಡಿನಲ್ಲಿ ಕೆಂಪು ಪತಾಕೆ ಬಾನೆತ್ತರಕ್ಕೆ ಹಾರಿತು. ಈ ಗೆಲುವು ದೂರಗಾಮಿ ಪರಿಣಾಮ ಬೀರುವ ಸಂಭವಗಳಿವೆ.

ಪ್ರಚಾರ

ಕಾಂಗ್ರೆಸ್ ಪರ ಕೇಂದ್ರ ಸಚಿವ ವೀರಭದ್ರ ಸಿಂಗ್ ಪ್ರಚಾರ ನಡೆಸಿದ್ದರು. ಬಿಜೆಪಿಯ ಪರ ಹಾಲಿ ಮುಖ್ಯಮಂತ್ರಿ ಪ್ರೇಂ ಕುಮಾರ್ ಧುಮಾಲ್ ಸೇರಿದಂತೆ ಬಹುತೇಕ ಎಲ್ಲ ಸಚಿವರು ಅಭ್ಯರ್ಥಿಗಳ ಪರ ಅಖಾಡಕ್ಕೆ ಇಳಿದಿದ್ದರು. ಸಿಪಿಐ(ಎಂ) ಪರ ಸೀತಾರಾಮ ಯೆಚೂರಿ ರಾಜ್ಯದ ನಾಯಕರ ಜೊತೆ ಪ್ರಚಾರ ನಡೆಸಿದ್ದರು.

ಇನ್ನೊಂದು ಮಹತ್ವದ ಅಂಶ ಏನೆಂದರೆ, ಇನ್ನೇನು ಕೆಲವೇ ತಿಂಗಳಲ್ಲಿ ಹಿಮಾಚಲ ಪ್ರದೇಶದ ವಿಧಾನಸಭಾ ಚುನಾವಣೆಗಳು ಘೋಷಣೆಯಾಗಲಿವೆ. ಶಿಮ್ಲಾ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂರು ವಿಧಾನಸಭೆಗಳು ಬರುತ್ತವೆ. ಶಿಮ್ಲಾ ವಿಧಾನಸಭಾ ಕ್ಷೇತ್ರ ಪೂರ್ತಿಯಾಗಿ ಪಾಲಿಕೆ ವ್ಯಾಪ್ತಿಯಲ್ಲಿದ್ದರೆ ಶಿಮ್ಲಾ ಗ್ರಾಮಾಂತರ ಕ್ಷೇತ್ರ ಮತ್ತು ಕುಸುಮ್ಟಿ ಕ್ಷೇತ್ರಗಳ ಭಾಗಶಃ ಪ್ರದೇಶ ಪಾಲಿಕೆ ಪ್ರದೇಶಕ್ಕೆ ಸೇರಿಕೊಂಡಿದೆ.

ಮೇಯರ್ ಮತ್ತು ಉಪಮೇಯರ್ ಎರಡೂ ಸ್ಥಾನಗಳ ಹೊಣೆಗಾರಿಕೆಯನ್ನು ನೀಡುವ ಮೂಲಕ ಜನ ಸಿಪಿಐ(ಎಂ) ಮೇಲೆ ಹೊಸ ಭರವಸೆಯನ್ನು ಇಟ್ಟಿದ್ದಾರೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲೂ ಈ ಪ್ರದೇಶದಲ್ಲಿ ಇದು ಪುನರಾವರ್ತನೆಯಾಗುವ ಸಾಧ್ಯತೆ ಹೆಚ್ಚಳವಾಗಿದೆ. ಶಿಮ್ಲಾ ಪಾಲಿಕೆಯಲ್ಲಿ 36,194 ಮಹಿಳಾ ಮತದಾರರು. ಪುರುಷ ಮತದಾರರ ಸಂಖ್ಯೆ 43,762. ಒಟ್ಟು ಮತದಾರರ ಪೈಕಿ ಶೇಕಡಾ 64.08ರಷ್ಟು ಮಂದಿ ತಮ್ಮ ಹಕ್ಕನ್ನು ಚಲಾಯಿಸಿದ್ದರು.

ಸ್ಥಳೀಯಾಡಳಿತ ಚುನಾವಣೆಯಲ್ಲೂ ಗಮನಾರ್ಹ ಸಾಧನೆ

ಹಿಮಾಚಲ ಪ್ರದೇಶದಲ್ಲಿ ಸಿಪಿಐ(ಎಂ)ನ ಸಾಧನೆ ಮಹತ್ವದ್ದು. ಆದರೂ ಅನಿರೀಕ್ಷಿತವೇನಲ್ಲ. ಇತ್ತೀಚಿನ ವರ್ಷಗಳಲ್ಲಿ ಜನಪರ ಹೋರಾಟಗಳ ಮೂಲಕ ಇಡೀ ರಾಜ್ಯದಲ್ಲಿ ಸಿಪಿಐ(ಎಂ) ಪಕ್ಷದ ಬಲವರ್ಧನೆ ಆಗಿದೆ. ಇದು ಕಳೆದ 2010 ರ ಡಿಸೆಂಬರ್ ಮತ್ತು 2011 ರ ಜನವರಿಯಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸಹ ಪ್ರತಿಫಲಿಸಿತ್ತು. ನಿಜಕ್ಕೂ ಇದು ಚೇತೋಹಾರಿ ಬೆಳವಣಿಗೆ. ರಾಜ್ಯದ ನಗರಾಡಳಿತ ಮತ್ತು ಮೂರು ಹಂತದ ಪಂಚಾಯತ್ ಚುನಾವಣೆಗಳಲ್ಲಿ ಸಿಪಿಐ(ಎಂ) ಪಕ್ಷ ಉತ್ತಮ ಯಶಸ್ಸು ದಾಖಲಿಸಿತ್ತು.

ನಗರಾಡಳಿತ ಸಂಸ್ಥೆಗಳಿಗೆ ಮಾತ್ರ ಪಕ್ಷದ ಚಿಹ್ನೆಯನ್ನು ಬಳಸಲು ಅನುಮತಿ ನೀಡಲಾಗಿತ್ತು. ಉಳಿದಂತೆ ಗ್ರಾಮ ಪಂಚಾಯತ್, ಬ್ಲಾಕ್ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ನಡೆದ ಚುನಾವಣೆಯಲ್ಲಿ ಚುನಾವಣಾ ಆಯೋಗ ನೀಡಿದ ಚಿಹ್ನೆಯನ್ನು ಬಳಸಲು ವಿವಿಧ ರಾಜಕೀಯ ಪಕ್ಷಗಳಿಗೆ ಅನುಮತಿ ನೀಡಲಾಗಿತ್ತು.

ಈ ಬಾರಿ ವಿಶೇಷವಾಗಿ ಜಿಲ್ಲಾ ಪಂಚಾಯತ್ ಚುನಾವಣೆಗಳಿಗೆ ಸಿಪಿಐ(ಎಂ) ತನ್ನ ಗಮನವನ್ನು ಕೇಂದ್ರೀಕರಿಸಿತ್ತು. ಇದರ ಜೊತೆಗೆ ಕೆಲವು ನಗರಾಡಳಿತ ಸಂಸ್ಥೆಗಳಿಗೂ ಪಕ್ಷ ಸ್ಪರ್ಧೆ ನಡೆಸಿತು.

ಫಲಿತಾಂಶ ಹೊರಬಿದ್ದ ತಕ್ಷಣ ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ತಮಗೆ ಶೇಕಡಾ 75ರ ಭರ್ಜರಿ ಜನಾದೇಶ ದೊರಕಿದೆ ಎಂದು ಘೋಷಿಸಿಕೊಂಡವು. ಆದರೆ, ವಾಸ್ತವಾಂಶ ಬೇರೆಯೇ ಆಗಿತ್ತು. ನಿಜವಾಗಿ ಯಾವೊಂದು ಪ್ರಮುಖ ಪಕ್ಷವೂ ರಾಜ್ಯದ ಒಂದೇ ಒಂದು ಜಿಲ್ಲಾ ಪಂಚಾಯತ್‌ನ ಅಧ್ಯಕ್ಷ- ಉಪಾಧ್ಯಕ್ಷ ಸ್ಥಾನವನ್ನು ಆರಿಸಲು ಸಾಧ್ಯವಾಗುವ ಪರಿಸ್ಥಿಯಲ್ಲಿರಲಿಲ್ಲ.

ಫಲಿತಾಂಶದ ವಿವರ

ಸಿಪಿಐ(ಎಂ)ಪಕ್ಷದ ಅಂದಾಜಿನ ಪ್ರಕಾರ, ಎಡಪಕ್ಷಗಳು, ಕಾಂಗ್ರೆಸ್, ಬಿಜೆಪಿಗಳಿಗೆ ಸೇರದ ಅಭ್ಯರ್ಥಿಗಳು ಒಟ್ಟು ಸ್ಥಾನದ ಶೇ 50ರಷ್ಟು ಕ್ಷೇತ್ರಗಳಲ್ಲಿ ಜಯಗಳಿಸಿದ್ದರು.

ಆಡಳಿತಾರೂಢ ಬಿಜೆಪಿಗೆ ಈ ಚುನಾವಣಾ ಫಲಿತಾಂಶ ಒಂದು ಗಂಭೀರ ಹಿನ್ನಡೆಯಾಗಿತ್ತು. ಸ್ವತಃ ಮುಖ್ಯಮಂತ್ರಿಯ ಸ್ವಂತ ಜಿಲ್ಲೆಯಲ್ಲೂ ಬಿಜೆಪಿಗೆ ಹಿಂದೆಂದೂ ಕಂಡರಿಯದ ಕಳಪೆ ಫಲಿತಾಂಶ ಸಿಕ್ಕಿತ್ತು. ನಗರಾಡಳಿತ ಸಂಸ್ಥೆಗಳ ಚುನಾವಣೆಯಲ್ಲೂ ಸ್ವತಂತ್ರ ಅಭ್ಯರ್ಥಿಗಳು ಗಣನೀಯ ಸಂಖ್ಯೆಯಲ್ಲಿ ಜಯ ಸಾಧಿಸಿದರು. ಸಿಪಿಐ(ಎಂ) ಗಮನಾರ್ಹ ಸಾಧನೆಯನ್ನು ತೋರಿತು. ಸಿಪಿಐ(ಎಂ) ಮತ್ತು ಅದರ ಬೆಂಬಲಿತ ಅಭ್ಯರ್ಥಿಗಳು 15 ಜಿಲ್ಲಾ ಪಂಚಾಯತ್ ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದರು. 25ಕ್ಕೂ ಹೆಚ್ಚು ಬ್ಲಾಕ್‌ಗಳಲ್ಲಿ ಮತ್ತು 75ಕ್ಕೂ ಹೆಚ್ಚು ಪಂಚಾಯತ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಲ್ಲಿ ಜಯಭೇರಿ ಬಾರಿಸಿದ್ದರು. ಸಹಜವಾಗಿಯೇ ಎಡಪಕ್ಷಗಳ ಒಟ್ಟು ಸಾಧನೆ ಇದಕ್ಕಿಂತಲೂ ಹೆಚ್ಚಾಗಿತ್ತು.

ಹಿಮಾಚಲ ಪ್ರದೇಶದ ರಾಜಕೀಯ ಚಿತ್ರಣದಲ್ಲಿ ಸಿಪಿಐ(ಎಂ) ಪಕ್ಷ ಮೂರನೇ ಸ್ಥಾನ ಅಲಂಕರಿಸಿದೆ ಎಂಬುದನ್ನು ಈ ಎಲ್ಲ ಚುನಾವಣಾ ಫಲಿತಾಂಶಗಳು ತೋರಿಸಿಕೊಟ್ಟಿವೆ. ರಾಜ್ಯದಲ್ಲಿ ಒಟ್ಟು ಸಿಪಿಐ(ಎಂ)ಗೆ 1.5 ಲಕ್ಷಕ್ಕೂ ಹೆಚ್ಚಿನ ಮತಗಳು ಲಭಿಸಿದವು.

ಯಶಸ್ಸಿನ ಹೆಜ್ಜೆಯ ಹಿಂದೆ ಹೋರಾಟದ ಹೆಜ್ಜೆ ಗುರುತುಗಳು

ಈ ಚುನಾವಣೆಯ ಫಲಿತಾಂಶವನ್ನು ವಿಶ್ಲೇಷಿಸಿದರೆ ಮತ್ತೊಂದು ಪ್ರಮುಖ ಅಂಶವನ್ನು ಗಮನಕ್ಕೆ ಬರುತ್ತದೆ. ನವ ಉದಾರೀಕರಣ ನೀತಿಗಳ ವಿರುದ್ಧ, ಭೂಮಿಯ ಹೋರಾಟ, ಅರಣ್ಯದ ಹಕ್ಕಿಗಾಗಿ ನಡೆದ ಹೋರಾಟ ಮತ್ತು ಜನ ವಿರೋಧಿ ಸ್ವರೂಪದ ಜಲವಿದ್ಯುತ್ ಯೋಜನೆಗಳ ವಿರುದ್ಧದ ಹೋರಾಟ ಈ ವಿವಿಧ ಫಲಿತಾಂಶದಲ್ಲಿ ಪ್ರತಿಫಲನಗೊಂಡಿದೆ. ಅರಣ್ಯ ಮಾಫಿಯಾ ಮತ್ತು ಬಲಾಢ್ಯ ಸಿಮೆಂಟ್ ಕಾರ್ಖಾನೆಗಳ ಲಾಬಿ ವಿರುದ್ಧದ ಹೋರಾಟಕ್ಕೆ ಜಯಸಿಕ್ಕಿದೆ. ಕಂಪೆನಿ ಪರ ಮತ್ತು ಜನವಿರೋಧಿ ಆಡಳಿತದ ಪರ ನಿಂತವರು ಸ್ಪಷ್ಟವಾಗಿ ಧೂಳೀಪಟವಾಗಿದ್ದಾರೆ. ಈ ಮೇಲಿನ ಬಹುತೇಕ ಎಲ್ಲ ಜನಪರ ಹೋರಾಟಕ್ಕೂ ಸಿಪಿಐ(ಎಂ) ನೇತೃತ್ವ ನೀಡಿತ್ತು. ಜನರ ಬೇಕು-ಬೇಡಗಳಿಗೆ ಧ್ವನಿ ನೀಡಿತ್ತು.

ಕಿನ್ನೌರ್ ಜಿಲ್ಲೆಯ ಕಶಂಕ್ ಹೈಡ್ರೋ ಪ್ರಾಜೆಕ್ಟ್ ವಿರುದ್ಧ ನಡೆದ ಹೋರಾಟ ಒಂದು ಜ್ವಲಂತ ಉದಾಹರಣೆಯಾಗಿದೆ. ಎಚ್‌ಸಿಸಿ ಕಂಪೆನಿ ವಿರುದ್ಧ ಹೋರಾಟಕ್ಕೆ ನೇತೃತ್ವ ನೀಡಿದ ಸಿಪಿಐ(ಎಂ) ನಾಯಕರ ಪಡೆ ಜನಾದೇಶ ಪಡೆದುಕೊಂಡು ಚುನಾಯಿತವಾಗಿತ್ತು. ಎಚ್‌ಸಿಸಿ ಕಂಪೆನಿ ಪರ ನಿಂತ ಪ್ರಮುಖ ಪಕ್ಷಗಳು ಸೋತು ಹೋಗಿದ್ದರು.

ಇದೇ ರೀತಿ, ಲಾಫಾರ್ಜ್ ಸಿಮೆಂಟ್ ಕಂಪೆನಿ ಪರ ನಿಂತ ಸ್ಥಳೀಯ ಸಂಘಟನೆಯೊಂದರ ನಾಯಕರು ಚುನಾವಣೆಯಲ್ಲಿ ಸೋತು ತಮ್ಮ ಜನವಿರೋಧಿ ನೀತಿಗಳ ಫಲ ಅನುಭವಿಸಿದ್ದರು.

ಆನಂದ್‌ಪುರ ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಸಿಪಿಐ(ಎಂ)ನ ಅಭ್ಯರ್ಥಿ ರೀನಾ ಅಭೂತಪೂರ್ವ ಜಯ ದಾಖಲಿಸಿದ್ದರು. ಎದುರಾಳಿ ಪಕ್ಷದ ಅಭ್ಯರ್ಥಿಗಿಂತ 3,000ಕ್ಕೂ ಹೆಚ್ಚಿನ ಮತಗಳ ಅಂತರದಲ್ಲಿ ರೀನಾ ಆಯ್ಕೆಯಾದರು. ಮಂಗನ ಉಪಟಳ ಹಾಗೂ ಇತರ ವನ್ಯಜೀವಿಗಳಿಂದ ರೈತರಿಗೆ ಆಗುತ್ತಿರುವ ಕಿರುಕುಳ ಹಾಗೂ ರೈತರ ಸಮಸ್ಯೆಗಳ ಬಗ್ಗೆ ಈ ಪ್ರದೇಶದಲ್ಲಿ ಸಿಪಿಐ(ಎಂ) ಹೋರಾಟ ನಡೆಸಿತ್ತು. ಒಟ್ಟಿನಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ಜನವಿರೋಧಿ ನೀತಿಗಳಿಂದಾಗಿ ಮೂಲೆಗುಂಪಾಗಿದ್ದರು. ಹೈಡ್ರೋ ಪ್ರಾಜೆಕ್ಟ್‌ಗಳು ಮತ್ತು ಸಿಮೆಂಟ್ ಕಾರ್ಖಾನೆಗಳ ಪರ ನಿಂತ ಈ ರಾಜಕೀಯ ನಾಯಕರು ಹೀನಾಯವಾಗಿ ಸೋತಿದ್ದರು.

ಅಭಿವೃದ್ಧಿ ಪ್ರಶ್ನೆಗಳ ನಿರ್ಲಕ್ಷ್ಯ ಮತ್ತು ಜನರ ಹಕ್ಕುಗಳ ಮೇಲಿನ ದಾಳಿ ಪ್ರಮುಖ ಪಂಚಾಯತ್ ಚುನಾವಣಾ ವಿಷಯಗಳಾಗಿದ್ದವು. ನೀರಾವರಿ ಯೋಜನೆಗಳ, ಸಿಮೆಂಟ್ ಕಾರ್ಖಾನೆಗಳ ಸಂತ್ರಸ್ತರಿಗೆ ಪುನರ್ವಸತಿ ಹಾಗೂ ಸೂಕ್ತ ಪರಿಹಾರ ನೀಡಬೇಕೆಂಬ ನೆಲೆಯಲ್ಲಿ ನಡೆದ ಆಂದೋಲನ ಚುನಾವಣೆಯಲ್ಲಿ ಪ್ರಭಾವ ಬೀರಿದ್ದವು. ರಾಜ್ಯದಲ್ಲಿ ಜಲವಿದ್ಯುತ್ ಸ್ಥಾವರಗಳಿಗೆ ಉತ್ತಮ ಅವಕಾಶ ಇದೆ. ಒಂದು ಅಂದಾಜಿನ ಪ್ರಕಾರ ಸಾಮರ್ಥ್ಯವನ್ನು ಸಮರ್ಪಕವಾಗಿ ಬಳಸಿದರೆ 23 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಬಹುದು. ಆದರೆ, ಸರ್ಕಾರ 30... ಮೆಗಾವ್ಯಾಟ್ ವಿದ್ಯುತ್ ಮಾತ್ರ ಉತ್ಪಾದ... ಮಾಡುತ್ತಿತ್ತು. ಇದೇ ವೇಳೆ, ವಿವಿಧ ರಾಜ್ಯ... ಸರ್ಕಾರಗಳು ಫಲವತ್ತಾದ ನೀರಿನ ಝರಿಗಳು... ನದಿ ಕಣಿವೆಗಳನ್ನು ಖಾಸಗಿಯವರಿಗೆ ಮಾರಾಟ... ಮಾಡಿ ಜನರ ಸಾಂಪ್ರದಾಯಿಕ ನೀರಿ... ಹಕ್ಕುಗಳಿಗೆ ವಂಚನೆ ಮಾಡಿವೆ. ಇದು ಜನರ... ಹಕ್ಕುಗಳಿಗೆ ಹೋರಾಟ ನಡೆಸುವ... ಸಿಪಿಐ(ಎಂ)ನಂತಹ ಶಕ್ತಿಗಳಿಗೆ ಮಧ್ಯಪ್ರವೇಶ... ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಜನರ... ಹಕ್ಕುಗಳಿಗಾಗಿ ನಡೆಸಿದ ಸಿಪಿಐ(ಎಂ)ನ... ಹೋರಾಟ ವ್ಯಾಪಕ ಪ್ರಶಂಸೆಗೆ ಪಾತ್ರವಾಗಿದ್ದ...

ಉದಾರೀಕರಣ ನೀತಿಗಳ ದುಷ್ಫಲವಾಗಿ... ಕೃಷಿಯಂತೂ ಉತ್ಪಾದನೆ ಇಲ್ಲದ... ಕ್ಷೇತ್ರವಾಯಿತು. ಇದರಿಂದ ಜನ ಹಳ್ಳಿಯಿಂದ... ನಗರಕ್ಕೆ ವಲಸೆ ಬರಲಾರಂಭಿಸಿದರು. ಸೇಬಿನ... ವಲಯದಲ್ಲಿ ಗುಪ್ತಾ ಆಗ್ರೋ ಪ್ಯಾಕೇಜ್... ಇಂಡಸ್ಟ್ರಿಯ ಹಾರಾಟದ ವಿಷಯ... ಪ್ರಮುಖವಾಗಿ ಚರ್ಚಿತವಾಯಿತು. ಈ... ಪ್ರದೇಶದಲ್ಲಿ ಬಿಜೆಪಿ ಮೂಲೆಗುಂಪಾಯಿತು.

ರಾಜ್ಯದ 10 ಜಿಲ್ಲೆಗಳಲ್ಲಿ ವನ್ಯಜೀವಿಗಳ... ಹಾವಳಿ, ಮಂಗನ ಉಪಟಳ ಮತ್ತು ಕ್ರೂರ... ಪ್ರಾಣಿಗಳ ಕಿರುಕುಳದ ವಿಷಯ... ಚುನಾವಣೆಯಲ್ಲಿ ಪ್ರಮುಖ ವಿಷಯವಾಗಿತ್ತು. ಇದರಿಂದಾಗಿ ಈ 10 ಜಿಲ್ಲೆಗಳಲ್ಲಿ ಸುಮಾರು... ಎರಡು ಸಾವಿರ ಕೋಟಿ ರೂಪಾಯಿ ಮೌಲ್ಯದ... ಬೆಳೆ ನಾಶವಾಗಿತ್ತು ಎಂಬುದು ತಜ್ಞರ ಅಂದಾಜು. ಹಿಮಾಚಲ ರೈತ ಸಂಘ, ಜ್ಞಾನ ವಿಜ್ಞಾನ ಸಮಿತಿ... ನೇತೃತ್ವದ ಪ್ರಬಲ ಹೋರಾಟ ರೈತರಿಗೆ... ನೆರವಾಯಿತು. ಖೇತ್ ಬಚಾವೋ ಸಂಘರ್ಷ... ಸಮಿತಿ (ಕೃಷಿ ಭೂಮಿ ರಕ್ಷಿಸಿ ಹೋರಾಟ... ಸಮಿತಿ) ರೂಪಿಸಿ ರೈತರನ್ನು ಹೋರಾಟದ... ಕಣಕ್ಕೆ ಇಳಿಸಲಾಗಿತ್ತು. ಸರ್ಕಾರದ ವಿರುದ್ಧ... ಅಣಿನೆರೆಸಿತು. ಇದರ ಫಲವಾಗಿ ರೈತ ಸಂಘ... ಹಾಗೂ ಬಿಜಿವಿಎಸ್‌ನ ಪ್ರಮುಖ ನಾಯಕರು... ದೊಡ್ಡ ಸಂಖ್ಯೆಯಲ್ಲಿ ಜನಪ್ರತಿನಿಧಿಗಳಾಗಿ... ಚುನಾಯಿತರಾಗಿದ್ದರು.

ಇವೆಲ್ಲದರ ಮಧ್ಯೆ, ಚುನಾವಣೆಯಲ್ಲಿ ಗೆಲ್ಲಲು... ಪ್ರಮುಖ ಪಕ್ಷಗಳು ಎಲ್ಲ ರೀತಿಯ ಕುಟಿಲ... ತಂತ್ರ, ಅಕ್ರಮಗಳನ್ನು ಬಳಸಿದ್ದವು. ಚುನಾವಣೆ... ಸಂದರ್ಭದಲ್ಲಿ ಅಪಾರ ಪ್ರಮಾಣದ ಹಣವನ್ನು... ವ್ಯಯಿಸಲಾಗಿತ್ತು. ನಾಮಪತ್ರ ಸಲ್ಲಿಸಿದ ತಕ್ಷಣ... ಭೋಜನ ಕೂಟಗಳು, ಪಾರ್ಟಿಗಳನ್ನು... ಆಯೋಜಿಸಿ ಮದ್ಯದ ಹೊಳೆಯನ್ನು... ಹರಿಸಲಾಗಿತ್ತು. ಸಿಪಿಐ(ಎಂ)ಪಕ್ಷದ ಯಾವುದೇ... ಜನಪ್ರತಿನಿಧಿಗಳು ಗುತ್ತಿಗೆ ಕಾಮಗಾರಿಯಲ್ಲಿ... ತೊಡಗಿಸಿಕೊಳ್ಳಬಾರದು ಎಂಬ ಸ್ಪಷ್ಟ... ನಿರ್ದೇಶನವನ್ನು ನೀಡಿ ಸಿಪಿಐ(ಎಂ) ಬೇರೆ... ಪಕ್ಷಗಳಿಗೂ ತನಗೂ ಭಿನ್ನತೆ ಏನೆಂದು... ತೋರಿತ್ತು.

ಈ ಎಲ್ಲ ಭಿನ್ನತೆ, ಜನಪರ ಹೋರಾಟಕ್ಕೆ... ಮೇಯರ್ ಚುನಾವಣಾ ಗೆಲುವಿನ ರೂಪದಲ್ಲಿ... ಜನತೆ ಮಾನ್ಯತೆ ಕೊಟ್ಟಂತೆ ಆಗಿದೆ.

–ಸಿಮ್ಟಿಸಿ...

ಶಾಲೆಗಳಿಗೆ ಶಿಕ್ಷಕರೇಕೆ? ಭಗವದ್ ಗೀತೆಯ ಪಠಣ, ಆರೆಸ್ಸೆಸ್ ಪುಸ್ತಕಗಳ ಓದೋಣ ಸಾಕಲ್ಲವೇ?

"ರಾಜ್ಯದಲ್ಲಿ ಶಿಕ್ಷಣಕ್ಕೆ ಕನಿಷ್ಟ ಮಹತ್ವ ನೀಡುತ್ತಿರುವಂತೆ ತೋರುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಹೆಚ್ಚಿನ ಪ್ರಮಾಣದಲ್ಲಿದ್ದರೂ ಭರ್ತಿಗೆ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವುದನ್ನು ಗಮನಿಸಿದರೆ ನಮಗೆ ಹಾಗೆಯೇ ಅನ್ನಿಸುತ್ತಿದೆ."

"ಪ್ರತಿ ತಿಂಗಳೂ ಗಣನೀಯ ಸಂಖ್ಯೆಯಲ್ಲಿ ಶಿಕ್ಷಕರು ನಿವೃತ್ತರಾಗುತ್ತಾರೆ. ಆ ಜಾಗಕ್ಕೆ ಶಿಕ್ಷಕರನ್ನಲ್ಲದೇ ದೆವ್ವಗಳನ್ನು ತುಂಬಲು ಆಗುತ್ತದೆಯೇ ?" ....

ಇಂತಹ ಛಾಟಿ ಏಟಿನಂತಹ ಹೇಳಿಕೆ ನೋಡಿದ ಕೂಡಲೇ ಇದು ರಾಜ್ಯ ಬಿಜೆಪಿ ಸರ್ಕಾರದ ಧೋರಣೆ ಬಗೆಗೆ ರಾಜ್ಯದ ಉಚ್ಚ ನ್ಯಾಯಾಲಯದ ಛೀ ಮಾರಿ ಎಂಬುದು ನಿಮಗೆ ಗೊತ್ತಾಗುತ್ತದೆ. ಏಕೆಂದರೆ ಈ ಸರ್ಕಾರವು ನ್ಯಾಯಾಲಯಗಳಿಂದ ಛೀಮಾರಿಗೊಳಗಾಗುವ ಪ್ರಸಂಗಗಳು ಬಹುತೇಕ ನಿರಂತರವಾಗಿವೆ. ಅದಕ್ಕೆ ತಡೆಯೇ ಇಲ್ಲ ಎಂಬಂತಾಗಿಡೆ. ಕಾರಣಗಳು ಬೇರೆ ಬೇರೆ ಅಷ್ಟೆ. ಖಾಲಿ ಶಿಕ್ಷಕ ಹುದ್ದೆ ನೇಮಕಾತಿಯಂತಹ ಪ್ರಶ್ನೆಯನ್ನು ಕೈಗೆತ್ತಿಕೊಂಡು ಎಸ್.ಎಫ್.ಐ.ನಂತಹ ವಿದ್ಯಾರ್ಥಿ ಸಂಘಟನೆಗಳು, ಪ್ರಗತಿಪರರು ಹೋರಾಟ ನಡೆಸುತ್ತಿದ್ದರೂ ರಾಜ್ಯ ಸರ್ಕಾರ ಬಿಝೀ ಶಾಲೆಗಳಲ್ಲಿ ಭಗವದ್ ಗೀತೆ ಅಭಿಯಾನ, ಶಾಲೆಗಳಿಗೆ ಆರೆಸ್ಸೆಸ್‌ನ ಮತಾಂಧ ವಿಚಾರಗಳ ಪುಸ್ತಕಗಳ ಪೂರೈಕೆ, ಪಠ್ಯ ಪುಸ್ತಕಗಳ ಕೋಮುವಾದೀಕರಣ, ಕೇಸರೀಕರಣಗಳಲ್ಲೇ ಮುಳುಗಿತ್ತು. ಜೊತೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಶಾಮೀಲಾತಿಯೂ ಸೇರಿದರೆ ಶಿಕ್ಷಕರ ಭರ್ತಿ ಬಗೆಗೆ ಪಾಪ ಗಮನವಾದರೂ ಎಲ್ಲಿಂದ ನೀಡಲು ಸಾಧ್ಯ.

ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯೊಂದರ ಸಂಬಂಧ ನ್ಯಾಯಾಲಯ ಮೇ 29 ರಂದು ಈ ರೀತಿ ಕಿಡಿಕಾರಿದೆ. "ಶಿಕ್ಷಕರ ಭರ್ತಿಗೆ ಶೀಘ್ರ ಕ್ರಮ ತೆಗೆದುಕೊಳ್ಳದೇ ಹೋದರೆ ಶಿಕ್ಷಣ ಸಚಿವರಿಗೆ ಸಮನ್ಸ್ ಜಾರಿಗೊಳಿಸಿ ಖುದ್ದು ಹಾಜರಿಗೆ ಆದೇಶಿಸಬೇಕಾಗುತ್ತದೆ." ಎಂದು ನ್ಯಾಯಾಲಯ ಎಚ್ಚರಿಸಿದೆ ಎಂದರೆ ಪರಿಸ್ಥಿತಿಯ ತೀವ್ರತೆ ಏನಿರಬಹುದು ಅಂತ ನೀವೇ ಊಹಿಸಿ.

ಅಗಣಿತ ಹಗರಣಗಳ ಸರದಾರ ಬಿಜೆಪಿ ನೇತಾರ

ಬಿಜೆಪಿ ಪಕ್ಷದ 'ಪ್ರಶ್ನಾತೀತ' ನಾಯಕರಾದ ಡಾ. ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಮಕ್ಕಳು, ಬಂಧುಗಳ ಮೇಲೆ ಮೊಕದ್ದಮೆಗಳ ಮೇಲೆ ಮೊಕದ್ದಮೆಗಳು ಬೀಳುತ್ತಿವೆ.

ತಮ್ಮ ರಾಜಕೀಯ ಕರ್ಮ ಭೂಮಿಯಾದ ಶಿವಮೊಗ್ಗ ಜಿಲ್ಲೆಯಲ್ಲಿ ಬೇನಾಮಿ ಹೆಸರಿನಲ್ಲಿ ಆಸ್ತಿ ಖರೀದಿಸಿ ಆ ಮೇಲೆ ಅದನ್ನು ತಮ್ಮ ಕಂಪನಿಗೆ ವರ್ಗಾವಣೆ ಮಾಡಿಕೊಂಡ ಹಾಗೂ ಆ ಸಂಬಂಧ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆಂಬ ಆರೋಪದ ಮೇಲೆ ಪ್ರಕರಣವೊಂದು ಅವರ ಕೊರಳಿಗೆ ಸುತ್ತಿಕೊಂಡಿದೆ.

ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕಿನ ಹುಣಸೇಕಟ್ಟೆ ಗ್ರಾಮ ವ್ಯಾಪ್ತಿಯ ಸರ್ವೆ 13 ರಲ್ಲಿ 69 ಎಕರೆ ಕೃಷಿ ಭೂಮಿಯನ್ನು ಎನ್.ಜೆ. ಮಥಾಯ್ಸ್ ಅವರಿಂದ ಆದಿಲಕ್ಷ್ಮಮ್ಮ, ಬಿ.ಎಸ್. ಉಮಾದೇವಿ, ಬಿ.ಕೆ. ರಾಧಾಮಣಿ, ಬಿ.ಕೆ. ಸೋಮಶೇಖರ್ ಎಂಬುವವರು 26.58 ಲಕ್ಷಕ್ಕೆ ಖರೀದಿ ಮಾಡುತ್ತಾರೆ. ಆ ಮೇಲೆ ಜಮೀನು ಧವಳಗಿರಿ ಪ್ರಾಪರ್ಟಿ ಡೆವಲಪರರ್ಸ್'ಗೆ ವರ್ಗಾವಣೆಯಾಗುತ್ತದೆ. 'ಧವಳಗಿರಿ ಪ್ರಾಪರ್ಟಿ ಡೆವಲಪರರ್ಸ್' ಮಾಲೀಕರಾದರೂ ಯಾರು? ಯಡಿಯೂರಪ್ಪನವರ ಪುತ್ರ ರತ್ನರಾದ ಬಿ.ವೈ. ರಾಘವೇಂದ್ರ, ಬಿ.ವೈ. ವಿಜಯೇಂದ್ರ, ಅಳಿಯ ಸೋಹನ್ ಕುಮಾರ್.

ಆನಂತರ ಆ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ ಮಾಡಲು ಮನವಿ ಸಲ್ಲಿಸಲಾಗುತ್ತದೆ. 2008 ಡಿಸೆಂಬರ್ 20 ರಂದು ಸಲ್ಲಿಸಲಾದ ಮನವಿಯನ್ನು ಜಿಲ್ಲಾಡಳಿತ ಅಂದೇ ಪರಿಶೀಲನೆ ಮಾಡಿ ಅಂದೇ ತಹಸೀಲ್ದಾರರಿಗೆ ಕಡತ ರವಾನೆ ಮಾಡುತ್ತದೆ. ಗಾರ್ಮೆಂಟ್ಸ್ ತೆರೆಯಲು ಅನುಮತಿ ಕೋರಿಕೆ ಸಲ್ಲಿಸಿದಾಗಲೂ ಹೀಗೆ ತತ್‌ಕ್ಷಣ ಅನುಮತಿ ದೊರೆಯುತ್ತದೆ. ಈ ಅನುಮತಿಯನ್ನು ತೋರಿಸಿ ಭೂ ಪರಿವರ್ತನಾ ಶುಲ್ಕದಲ್ಲಿ ವಿನಾಯಿತಿ ಕೋರಿಕೆಯನ್ನು 2009 ರಲ್ಲಿ ಸಲ್ಲಿಸಲಾಗುತ್ತದೆ ಮತ್ತು ವಿನಾಯಿತಿ ಪಡೆಯಲಾಗುತ್ತದೆ.



ದೂರು

...ಇದೊಂದು ಯಡಿಯೂರಪ್ಪನವರ ಕುಟುಂಬದ ಬೇನಾಮಿ ಖರೀದಿ. ಮತ್ತು ಈ ವಿಷಯದಲ್ಲಿ ಅಧಿಕಾರ ದುರುಪಯೋಗವಾಗಿದೆ. ಈ ಬಗೆಗೆ ಸಮಗ್ರ ತನಿಖೆಯಾಗಬೇಕೆಂದು ವಿನೋದ್ ಎಂಬುವವರು ಸಲ್ಲಿಸಿರುವ ದೂರಿನ ಆಧಾರದಲ್ಲಿ ತನಿಖೆ ನಡೆಸಲು ಮೇ 28 ರಂದು ಲೋಕಾಯುಕ್ತ ವಿಶೇಷ ನ್ಯಾಯಾಲಯ ವಿಚಾರಣೆಗೆ ದೂರನ್ನು ಸ್ವೀಕರಿಸಿದೆ.

ಜಿಲ್ಲಾ ಮತ್ತು ತಾಲ್ಲೂಕು ಆಡಳಿತ ಯಾಕೆ ಈ ವಿಷಯದಲ್ಲಿ ಅಷ್ಟೊಂದು ತ್ವರಿತ ಗತಿಯಲ್ಲಿ 'ಕಾರ್ಯಾಚರಣೆ' ನಡೆಸಿದೆ ಎಂಬುದನ್ನು ನೋಡಿದರೆ

ಸಾಕು ಬಹುತೇಕ ವಿಚಾರ ಯಾರಿಗಾದರೂ ಅರ್ಥವಾಗುವಾಗಿ ಹೋಗುತ್ತದೆ. ಇರಲಿ ನ್ಯಾಯಾಲಯದ ತೀರ್ಪನ್ನು ಕಾದು ನೋಡೋಣ.

ಆದರೆ ವಿಷಯ ಅಲ್ಲಿಗೆ ಮುಗಿಯುವುದಿಲ್ಲ. ಹುಣಸೇಕಟ್ಟೆಯ ಈ 69 ಎಕರೆ ಜಮೀನಿನ ಪಕ್ಕದ 20 ಎಕರೆ ಅರಣ್ಯ ಭೂಮಿ ಅಕ್ರಮವಾಗಿ ಒತ್ತುವರಿ ಮಾಡಿಕೊಳ್ಳಲಾಗಿದೆ ಎಂಬ ಗಂಭೀರ ಆರೋಪವು ಈ ವಿವಿಧ ದೂರುಗಳ ಜೊತೆಗೆ ದಾಖಲಾಗಿದೆ.

ಆಹಾ !! ಪರಿ ಪರಿಯಾದ ಅಕ್ರಮಗಳು, ಏಕ ಕಾಲಕ್ಕೆ ನಾನಾ ಪ್ರಕಾರದ ಕಾನೂನು ಬಾಹಿರ ಕೆಲಸಗಳು, ನಿರ್ಲಜ್ಜ ನಿಯಮ ಉಲ್ಲಂಘನೆಗಳು, ಅದಕ್ಕೆ ಸಹಕರಿಸುವ ಆಡಳಿತ ಇವೆಲ್ಲವೂ ಸೊಗಸಾಗಿ ಮೇಳೈಸಿವೆ ಎಂದರೆ ಅದು ಬಿಜೆಪಿ ದರ್ಬಾರ್‌ನಲ್ಲಿ ಅಲ್ಲದೇ ಇನ್ನೆಲ್ಲಿ ತಾನೆ ಸಾಧ್ಯ.

ತಮ್ಮ ಮಗ, ಸಂಸದ ಬಿ.ವೈ. ರಾಘವೇಂದ್ರರಿಗೆ. ಯಡಿಯೂರಪ್ಪನವರು ಸುಳ್ಳು ಪ್ರಮಾಣ ಪತ್ರದ ಆಧಾರದ ಮೇಲೆ ಮುಖ್ಯಮಂತ್ರಿಗಳ ವಿವೇಚನಾ ಕೋಟಾದ ಬಿಡಿಎ ಸೈಟ್ನು ದಯಪಾಲಿಸಿದಾಗ ಅದನ್ನು ಕಾನೂನು ಬಾಹಿರ ಅಲ್ಲ ಆದರೆ 'ಅನೈತಿಕ ಅಷ್ಟೆ'ಎಂದು ಹೇಳಿ ಸಮರ್ಥನೆ ಮಾಡಿಕೊಂಡಿದ್ದ ಬಿಜೆಪಿ ಪಕ್ಷದ ಅಖಿಲ ಭಾರತ ಅಧ್ಯಕ್ಷರಾದ ಗಡ್ಕರಿ...



ಆರ್.ರಾಮಕೃಷ್ಣ

ಅದೇ ಬಳ್ಳಾರಿಯಲ್ಲಿ ಜನಾರ್ದನ ರೆಡ್ಡಿಯವರು ಪ್ರದಾನ ಮಾಡಿದ ಚಿನ್ನದ ಖಡ್ಗವನ್ನು ಸ್ವೀಕರಿಸಿ ಈಗಲೂ ಮುಗುಂ ಆಗಿ ಹಾಗೇ ಉಳಿದ ಬ್ಯಾಟಿಂಗ್ ನಿತಿನ್ ಗಡ್ಕರಿಯವರು ಈಗ ಏನನ್ನುತ್ತಾರೋ ಯಾವ ಪದ ಪುಂಜ ಹುಡುಕುತ್ತಾರೋ ಕಾದು ನೋಡಬೇಕಿದೆ.

ಬಾಲಂಗೋಚಿ

ಮತ್ತೆ ಮೇಲೆದ್ದು ಬರುತ್ತಿರುವ 80 'ಡೀ ನೋಟಿಫೈ–ಭೂತ'ಪ್ರಕರಣಗಳು

ರಾಜ್ಯದ ಬಿಜೆಪಿ ಸರ್ಕಾರ ಎಂದರೆ ಅದೇನು ಸುಮ್ಮನೆ ಅಲ್ಲ. ಅಷ್ಟಿಲ್ಲದೇ ಈ ಸರ್ಕಾರ ಕೇವಲ ನಾಲ್ಕು ವರ್ಷಗಳಲ್ಲಿ ಈ ಪರಿ 'ವರ್ಲ್ಡ್ ಫೇಮಸ್' ಆಗೋದಕ್ಕೆ ಆಗ್ತಾ ಇತ್ತಾ ?

ಸಮಾಜ ಪರಿವರ್ತನಾ ಸಂಸ್ಥೆಯ ಹಿರೇಮಠರು ಗೊತ್ತಲ್ಲ. ಅವರು ಯಡಿಯೂರಪ್ಪನವರ ಆಡಳಿತದ ಅವಧಿಯ ಇನ್ನೂ ಒಟ್ಟು 80 ಅಕ್ರಮ ಜಮೀನು ಡೀ ನೋಟಿಫೈ (ಜಮೀನನ್ನು ಕಾನೂನಿಗೆ ವಿರೋಧವಾಗಿ ಅಧಿಸೂಚನೆಯಿಂದ ಕೈ ಬಿಟ್ಟು ಅಕ್ರಮ ಎಸಗಿರುವ ಪ್ರಕರಣಗಳು)

ಪತ್ತೆ ಹಚ್ಚಿರುವುದಾಗಿ ಹಾಗೂ ಅವುಗಳ ಸಂಬಂಧ ಮುಂದೆ ಕಾನೂನು ಕ್ರಮಕ್ಕೆ ಮುಂದಾಗುವುದಾಗಿ ಘೋಷಿಸಿದ್ದಾರೆ. ಇಲ್ಲಿಯವರೆಗೆ ಹಿರೇಮಠರು ಸಾಕಷ್ಟು ದಾಖಲೆ, ಆಧಾರಗಳ ಸಹಿತ ಗಟ್ಟಿ ದೂರುಗಳನ್ನೇ ಕೊಟ್ಟಿರುವುದರಿಂದ ಅದನ್ನು ಬರೀ ಆರೋಪ ಅಂತ ಅಷ್ಟು ಸುಲಭಕ್ಕೆ ತಳ್ಳಿ ಹಾಕಲು ಸಾಧ್ಯವಿಲ್ಲ. ನೋಡೋಣ.

'ದೇಶ ಭಕ್ತರ ಸ್ವಂತ ಪಕ್ಷ'ವಾದ ಬಿಜೆಪಿ ಸರ್ಕಾರದ ಆಡಳಿತದ ಒಳ ಹೂರಣದಲ್ಲಿ ಏನೇನೆಲ್ಲಾ ಇದೆ.

ಅಂಧರುಗಳ ನಾಡಿನಲ್ಲಿ

ಬರೆ ಬುರುಡೆ ಬಿಡುವವರು
ಬೆಳೆಸುವರು ಹೊಟ್ಟೆ
ಮತ್ತಿನ್ನು ಮೈತುಂಬ ಜರತಾರಿ ಬಟ್ಟೆ
ಕೈಕಾಲುಗಳ ಎತ್ತಿಯೂ ಇಡದ ತಿರುಪತಿ
ತಿಮ್ಮಪ್ಪ ಎಂಬುವನೂ ಮಿಲಿಯಾಧಿಪತಿ
– ವಿಡಂಬಾರಿ

'ವಿಠಲ ಮಲೆಕುಡಿಯ ಬಿಡುಗಡೆಗೊಳಿಸಿ'- ಬೃಂದಾ ಕಾರಟ್

ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಎಸ್ ಪ್ರತಿಭಟನೆ

ಆದಿವಾಸಿ ಯುವಕ, ಮಂಗಳೂರು ವಿ.ವಿ.ಯ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿ ವಿಠಲ ಮಲೆಕುಡಿಯ ಮತ್ತು ಅವರ ತಂದೆ ಲಿಂಗಪ್ಪ ಮಲೆಕುಡಿಯರ ಅಕ್ರಮ ಬಂಧನ ವಿರೋಧಿಸಿ ಮತ್ತು ಅವರನ್ನು ಬಿಡುಗಡೆಗೊಳಿಸಿ, ಆದಿವಾಸಿಗಳಿಗೆ ಅರಣ್ಯ ಹಕ್ಕು, ನಾಗರಿಕ ಸೌಲಭ್ಯಗಳನ್ನು ಕಲ್ಪಿಸಲು ಒತ್ತಾಯಿಸಿ ಬೆಂಗಳೂರಿನಲ್ಲಿ ವಿದ್ಯಾರ್ಥಿ ವಿಠಲ ಮಲೆಕುಡಿಯ ಮತ್ತು ಅವರ ತಂದೆಯ ಬಿಡುಗಡೆಗಾಗಿ ಸಂರಕ್ಷಣಾ ಸಮಿತಿ, ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ), ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಪ್ರತಿಭಟನಾ ಧರಣಿಯನ್ನು ನಡೆಸಲಾಯಿತು.

ಪ್ರತಿಭಟನಾ ಧರಣಿಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಪಾಲಿಟ್‌ಬ್ಯೂರೋ ಸದಸ್ಯರಾದ ಕಾಂ. ಬೃಂದಾ ಕಾರಟ್, ಆದಿವಾಸಿ ಬುಡಕಟ್ಟು ಸಮಿತಿಯ ರಾಷ್ಟ್ರೀಯ ಅಧ್ಯಕ್ಷರು, ಸಂಸದರಾದ ಕಾಂ. ಬಾಬುಜಾನ್ ರಿಯಾಂಗ್, ಡಿವೈಎಫ್‌ಐ ನ ರಾಷ್ಟ್ರೀಯ ಉಪಾಧ್ಯಕ್ಷರು, ಸಂಸದರಾದ ಎಂ.ಬಿ. ರಾಜೇಶ್, ಕಿಸಾನ್ ಸಭಾದ ವಿಜೂ ಕೃಷ್ಣನ್‌ರವರು ಭಾಗವಹಿಸಿದ್ದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಕಾಂ. ಬೃಂದಾ ಕಾರಟ್‌ರವರು 'ನಕ್ಸಲರೊಂದಿಗೆ ಅನಗತ್ಯವಾಗಿ ಸಂಪರ್ಕ ಕಲ್ಪಿಸಿ, ಅಮಾಯಕನನ್ನು ಅಕ್ರಮವಾಗಿ ಬಂಧಿಸಿ ಇಟ್ಟಿರುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಅಲ್ಲದೆ ವಿಠಲನ ತಂದೆ ಲಿಂಗಪ್ಪ ಮಲೆಕುಡಿಯರವರ ಮೇಲೆ ಪೊಲೀಸ್ ದೈಹಿಕ ಹಲ್ಲೆ ನಡೆಸಿ ಕ್ರೌರ್ಯ ಮೆರೆದಿದ್ದಾರೆ. ಕುಲದೀಪ್ ನಯ್ಯರ್ ಬರೆದಿರುವ 'ಭಗತ್‌ಸಿಂಗ್' ಪುಸ್ತಕ, ಚಹಪುಡಿ, ಸಕ್ಕರೆ



ಯನ್ನು ನಕ್ಸಲ್ ಸಂಪರ್ಕಕ್ಕಿರುವ ಸಾಕ್ಷ್ಯಾಧಾರಗಳೆಂದು ಹೇಳುತ್ತಿರುವುದು ಅವಮಾನಕರ ಸಂಗತಿ ಎಂದು ಹೇಳಿದರು. ಆದಿವಾಸಿಗಳ ಬದುಕುವ ಹಕ್ಕಿನ ಮೇಲೆ ಸರ್ಕಾರ ದಾಳಿ ಮಾಡುವ ಬದಲು ಅಗತ್ಯ ಅಭಿವೃದ್ಧಿ ಕಾರ್ಯಗಳಿಗೆ ಮುಂದಾದಲ್ಲಿ ನಕ್ಸಲ್ ಸಮಸ್ಯೆ ನಿಗ್ರಹವಾಗುತ್ತದೆ. ದುಸ್ಸಾಹಸವಾದಿ ನಕ್ಸಲ್ ಚಳುವಳಿಯಿಂದ ಜನತೆ ದೂರವಾಗಲು ಅವರಿಗೆ ಸೌಲಭ್ಯಗಳನ್ನು ಕಲ್ಪಿಸಬೇಕು. ವಿಠಲ ಮಲೆಕುಡಿಯ ಮತ್ತು ಅವರ ತಂದೆಯವರನ್ನು ತಕ್ಷಣ ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಭೇಟಿ: ಕಾಂ. ಬೃಂದಾ ಕಾರಟ್‌ರವರು, ಕಾಂ. ಬಾಬುಜಾನ್ ರಿಯಾಂಗ್, ಮತ್ತು ಕಾಂ. ರಾಜೇಶ್, ವಿಜೂಕೃಷ್ಣನ್‌ರವರು ವಿದ್ಯಾರ್ಥಿ ವಿಠಲ ಮಲಕುಡಿಯ ಮತ್ತು ಅವರ ತಂದೆಯವರ ಬಿಡುಗಡೆ ಸಂರಕ್ಷಣಾ ಸಮಿತಿಯ ಅಧ್ಯಕ್ಷರಾದ ಜಿ.ಕೆ.ಗೋವಿಂದರಾವ್, ದಸಂಸ(ಅಂಬೇಡ್ಕರ್ ವಾದ)ದ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಜಿ.ಎನ್.ನಾಗರಾಜ್,ಜಿ.ಸಿ.ಬಯ್ಯಾರೆಡ್ಡಿ, ಸಂರಕ್ಷಣಾ ಸಮಿತಿ ರಾಜ್ಯ ಕಾರ್ಯದರ್ಶಿ ಪಿ.ರಾಜಶೇಖರ್ ಮೂರ್ತಿಯವರು, ಸರ್ದಾರ್ ಅಹ್ಮದ್ ಖುರೇಶಿ, ಬೆಳ್ತಂಗಡಿಯ ಕಾಂ. ಶಿವಕುಮಾರ್, ವಿಠಲನ ತಾಯಿ ಇದ್ದ ನಿಯೋಗ ಮುಖ್ಯಮಂತ್ರಿ ಸದಾನಂದಗೌಡರನ್ನು ಭೇಟಿ ಮಾಡಿ ಮಾತುಕತೆ ನಡೆಸಿತು. ಕೈಗೊಳ ಹಾಕಿದ ಪ್ರಕರಣ ಒಳಗೊಂಡು, ಉಳಿದಂತೆ ತಕ್ಷಣ ಈ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ನಿಯೋಗಕ್ಕೆ ಭರವಸೆ ನೀಡಿದರು.

ನನ್ನ ಮಗ ನಕ್ಸಲ್ ಅಲ್ಲ:

ನನ್ನ ಮಗ ನಕ್ಸಲ್ ಅಲ್ಲ, ಅವನು ಮಂಗಳೂರಿನಲ್ಲಿ ಓದುತ್ತಿದ್ದಾನೆ. ಪೊಲೀಸರು ಮನೆಗೆ ಬಂದು ನನ್ನ ಗಂಡನಿಗೆ ಹೊಡೆದು ಕಾಲು ಮುರಿದರು. ಆ ಸುದ್ದಿ ತಿಳಿದು ಆಸ್ಪತ್ರೆಗೆ ಕರೆದೊಯ್ಯಲು ಬಂದವನನ್ನು ಏಕಾಏಕಿಯಾಗಿ ಪೊಲೀಸರು ಅರೆಸ್ಟ್ ಮಾಡಿ ಜೈಲಿಗೆ ತಳ್ಳಿದ್ದಾರೆ. ನನ್ನ ಇನ್ನೊಬ್ಬ ಮಗ ಭಯಭೀತನಾಗಿ ಕಿರುಕುಳ ತಾಳದೆ ನಾಪತ್ತೆಯಾಗಿದ್ದಾನೆ. ನಾವು ಬಡವರು ಒಂದೊತ್ತು ಗಂಜಿ ಸಿಗದೆ ಪರದಾಡುತ್ತಿದ್ದೇವೆ. ಅಮಾಯಕರಾದ ನಮಗೆ ಯಾಕೆ ಈ ಶಿಕ್ಷೆ? ಎಂದು ವಿಠಲನ ತಾಯಿ ಹೊನ್ನಮ್ಮ ಮಲೆಕುಡಿಯ ತಮ್ಮ ನೋವನ್ನು ತೋಡಿಕೊಂಡರು.

ಪ್ರತಿಭಟನೆಯಲ್ಲಿ ಜೆಎಂಎಸ್ ನ ರಾಜ್ಯಾಧ್ಯಕ್ಷೆ ಗೌರಮ್ಮ ಡಿವೈಎಫ್‌ಐ ರಾಜ್ಯಾಧ್ಯಕ್ಷರಾದ ಎನ್.ಎಲ್.ಭರತ್‌ರಾಜ್, ಲೇಖಕ, ರವಿಕೃಷ್ಣಾ ರೆಡ್ಡಿ, ಡಿವೈಎಫ್‌ಐ ರಾಜ್ಯ ಉಪಾಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಟಿಪ್ಪು ಸುಲ್ತಾನ್ ರಂಗದ ಸರ್ಕಾರ್ ಮಹಮ್ಮದ್ ಖುರೇಶಿ, ಸಮುದಾಯದ ಸುರೇಂದ್ರರಾವ್,



ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಅನಂತನಾಯಕ್, ಸಿಪಿಐ(ಎಂ) ನ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ವಿಮಲ, ಇತರರು ಭಾಗವಹಿಸಿದ್ದರು.

ವಿಠಲ ಮಲೆಕುಡಿಯ ಮತ್ತು ಅವರ ತಂದೆಯವರ ಬಿಡುಗಡೆಗಾಗಿ ಮತ್ತು ಆದಿವಾಸಿಗಳ ನಾಗರಿಕ ಹಕ್ಕುಗಳಿಗಾಗಿ ಮತ್ತು ದುಸ್ಸಾಹಸವಾದಿ ನಕ್ಸಲ್ ಚಳುವಳಿ ಹತ್ತಿಕ್ಕಲು ವಿವಿಧ ರೀತಿಯ ಹೋರಾಟ ರೂಪಿಸಲು ತೀರ್ಮಾನಿಸಲಾಗಿದೆ. ಸಂಕಷ್ಟದಲ್ಲಿರುವ ಮಲೆಕುಡಿಯ ಕುಟುಂಬಕ್ಕೆ ನೆರವಾಗಲು ಮತ್ತು ನ್ಯಾಯಾಂಗ ಹೋರಾಟವನ್ನು ಮುಂದುವರೆಸಲಾಗುತ್ತಿದೆ. ಆರ್ಥಿಕ ಧನ ಸಹಾಯಕ್ಕಾಗಿ ಕೋರಲಾಗಿದೆ.

● ಅನಂತನಾಯಕ್. ಎನ್

ರಾಜಕೀಯ ಪಿತೂರಿ...

ಪುಟ 5 ರಿಂದ

ಟಿ.ಪಿ. ಚಂದ್ರಶೇಖರನ್ ಅವರ ಕೊಲೆ ಖಾಸಗಿ ಲಾಭದ ಸಂಬಂಧ ನಡೆದಿರುವುದು, ಅದಕ್ಕೆ ರಾಜಕೀಯ ಸಂಬಂಧ ಇಲ್ಲ ಎಂದು ಹೇಳಿಕೆ ನೀಡಿದಾಗ ವಡಗರ ಕ್ಷೇತ್ರದ ಸಂಸದ ಹಾಗೂ ಕೇಂದ್ರ ದ ಗೃಹಖಾತೆಯ ರಾಜ್ಯದ ಸಚಿವ ಮಲ್ಲಪಲ್ಲಿ ರಾಮಚಂದ್ರ ಕೂಡಲೇ ಹೇಳಿಕೆಯನ್ನು ತಿದ್ದಿ ಅದು 'ರಾಜಕೀಯ ಕೊಲೆ' ಎಂದು ಹೇಳಿದ್ದು ಈ ಸಂಬಂಧದ ಪಿತೂರಿಗೆ ಸಾಕ್ಷಿಯಾಗಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಹೇಳಿದೆ. ಪಕ್ಷದ ಮೇಲೆ ದಾಳಿ ನಡೆಸಿ ಪಕ್ಷವನ್ನು ಹಾಳುಗೆಡವಲು ನಡೆದಿರುವ ಆಳವಾದ ಸಂಚಿನ ಬಗೆಗೆ ಸಿಪಿಐ(ಎಂ) ಪಕ್ಷದ ಸದಸ್ಯರು ಕಟ್ಟೆಚ್ಚರ ವಹಿಸಬೇಕೆಂದು ಅದು ಕರೆ ನೀಡಿದೆ.

2008 ರಲ್ಲಿ ಪ್ರಾದೇಶಿಕ ಸಮಿತಿ ಸದಸ್ಯರಾಗಿದ್ದ ಟಿ.ಪಿ. ಚಂದ್ರಶೇಖರ್ ಮತ್ತು ಕೆಲ ಪಕ್ಷದ ಸದಸ್ಯರು ಪಕ್ಷದಿಂದ ಹೊರ ಹೋಗಿದ್ದರು. ಓಂಚಿಯಮ್ ಪ್ರದೇಶದ ಎರಮಲ ಮತ್ತು ಅಜಿಂಯೋರ್ ಪಂಚಾಯತ್‌ಗಳ ಅಧ್ಯಕ್ಷ ಸ್ಥಾನಗಳನ್ನು ಕ್ರಮವಾಗಿ ಸಿಪಿಐ(ಎಂ) ಮತ್ತು ಜನತಾದಳ ಎರಡೂವರೆ ವರ್ಷ ನಿರ್ವಹಿಸಿ ಅನಂತರ ಪರಸ್ಪರ ಸ್ಥಾನಗಳನ್ನು ಬಿಟ್ಟುಕೊಡಬೇಕೆಂಬುದು ಎಲ್‌ಡಿಎಫ್‌ನ ಪಕ್ಷದ ತೀರ್ಮಾನವಾಗಿತ್ತು. ಆದರೆ ಪಕ್ಷದಿಂದ ಹೊರ ಹೋದ ಗುಂಪು ಪಕ್ಷದ ತೀರ್ಮಾನ ಮತ್ತು ಎಲ್‌ಡಿಎಫ್ ತೀರ್ಮಾನಕ್ಕೆ ವಿರೋಧ ತೋರಿ ಕಮ್ಯುನಿಸ್ಟ್ ಮೌಲ್ಯಗಳಿಗೆ ವಿರುದ್ಧವಾಗಿ ಅಧಿಕಾರ ಸ್ಥಾನದ ವ್ಯಾಮೋಹವನ್ನು ಪ್ರದರ್ಶಿಸಿತು. ಆ ನಂತರವೂ ಚಂದ್ರಶೇಖರ್ ಅವರಿಗೆ ತಮ್ಮ ತಪ್ಪನ್ನು ತಿದ್ದಿಕೊಂಡು ಪಕ್ಷದಲ್ಲಿ ಮುಂದುವರಿಯುವ ಅವಕಾಶ ನೀಡಲಾಗಿತ್ತು. ಆ ನಂತರ ಆ ಗುಂಪು ಯುಡಿಎಫ್ ಬೆಂಬಲದೊಂದಿಗೆ 'ರೆವಲ್ಯೂಷನರಿ ಮಾರ್ಕ್ಸಿಸ್ಟ್ ಪಾರ್ಟಿ' ಎಂಬ ಪಕ್ಷವನ್ನು ಆರಂಭಿಸಿತ್ತು. 2011 ರಲ್ಲಿ ಚಂದ್ರಶೇಖರ್ ಇದೇ ಪ್ರಶ್ನೆಯ ಮೇಲೆ ಪಕ್ಷದಿಂದ ದೂರವಾದರು. ತಮ್ಮ ತಪ್ಪಿನ ಅರಿವಾದ ಹಲವರು ಪಕ್ಷಕ್ಕೆ ಮತ್ತೆ ಮರಳಿ ಬಂದರು. ಎಂ.ಆರ್.ಪಿ. ಪಕ್ಷವು ಯುಡಿಎಫ್ ಜೊತೆ ಗುರುತಿಸಿಕೊಂಡಲ್ಲಿ ಮಾತ್ರವೇ ಕೆಲವೆಡೆ ಗೆಲುವು ಸಾಧಿಸಿತು.

ಇಂತಹ ಸನ್ನಿವೇಶವನ್ನು ಬಳಸಿಕೊಂಡು ಸಿಪಿಐ(ಎಂ) ಪಕ್ಷದಲ್ಲಿ ಒಡಕು ಮೂಡಿಸಲು ಗಂಭೀರವಾದ ಪಿತೂರಿಯನ್ನು ಯುಡಿಎಫ್ ನಡೆಸಿದೆ ಎಂದು ರಾಜ್ಯ ಸಮಿತಿ ಹೇಳಿದೆ. ●

ಜನಶಕ್ತಿ
ಕನ್ನಡ ವಾರಪತ್ರಿಕೆ


ಖಾಸಗಿಯವರ ಗರಿಷ್ಟ ಲಾಭಕ್ಕೆ ಮತ್ತೊಂದು ಸರ್ಕಾರಿ 'ವಾಹನ'-ಎಸ್‌ಪಿವಿ



ವೇದರಾಜ ಎನ್.ಕೆ.

ಮೂಲರಚನೆಗಳು, ಖನಿಜ ಸಂಪನ್ಮೂಲಗಳು ಮತ್ತು ತೈಲ' ಹಾಗೂ ನೈಸರ್ಗಿಕ ಅನಿಲ ಶೋಧನೆಯ ಕ್ಷೇತ್ರಗಳಲ್ಲಿ ಹೂಡಿಕೆಗಳನ್ನು ತ್ವರಿತಗೊಳಿಸಲೆಂದು 'ವಿಶೇಷೋದ್ದೇಶ ವಾಹನ' (ಎಸ್‌ಪಿವಿ) ಎಂಬ ವ್ಯವಸ್ಥೆಯನ್ನು ರಚಿಸಬೇಕು ಎಂದು ಪ್ರಧಾನ ಮಂತ್ರಿಗಳು ಮತ್ತು ಅವರ ಕಚೇರಿ ಪ್ರಸ್ತಾವ ಇಟ್ಟಿದ್ದಾರಂತೆ. ಜಿಡಿಪಿ ಬೆಳವಣಿಗೆ ದರ ಗಮನಾರ್ಹವಾಗಿ ಇಳಿದಿರುವುದು, ವಿದೇಶಿ ಸಾಂಸ್ಥಿಕ ಹೂಡಿಕೆಗಳು ಹೊರಕ್ಕೆ ಹರಿದು ಹೋಗುತ್ತಿರುವುದು, ಇದರಿಂದಾಗಿ ಮುಂದುವರೆಯುತ್ತಿರುವ ಶೇರು ಮಾರುಕಟ್ಟೆ ಕುಸಿತ ಹಾಗೂ ರೂಪಾಯಿಯ ಮೌಲ್ಯದ ಕುಸಿತ ತಡೆಯಲಿಕ್ಕಾಗಿ ಇಂತಹ ಒಂದು ವ್ಯವಸ್ಥೆಯನ್ನು ರಚಿಸುವುದು ಅಗತ್ಯ ಎಂದು ಅವರ ವಾದ.

ನಮ್ಮ ಆಳರಸರು ಅಪ್ಪಿಕೊಂಡಿರುವ ನವ-ಉದಾರವಾದ ಸಾರ್ವಜನಿಕ ಖರ್ಚಿನಲ್ಲಿ, ಅಂದರೆ ತೆರಿಗೆ, ಸುಂಕ ಇತ್ಯಾದಿ ರೂಪಗಳಲ್ಲಿ ಜನಗಳಿಂದ ವಸೂಲಿ ಮಾಡಿದ ಹಣದಲ್ಲಿ ಖಾಸಗಿಯವರ ಲಾಭವನ್ನು ಗರಿಷ್ಟಗೊಳಿಸಲು ಹೊಸ-ಹೊಸ ದಾರಿಗಳನ್ನು ಸೃಷ್ಟಿಸುತ್ತದೆ, ಪಿಪಿಪಿ ಅಂದರೆ ಸಾರ್ವಜನಿಕ-ಖಾಸಗಿ-ಪಾಲುದಾರಿಕೆ, ಇಂತಹ ಒಂದು ಸಾಧನ ಎಂಬುದನ್ನು ಹಿಂದಿನ ಒಂದು ಸಂಚಿಕೆಯಲ್ಲಿ ನಾವು ಪರಿಶೀಲಿಸಿದ್ದೇವೆ. ಈ ಎಸ್‌ಪಿವಿ ಎಂಬುದು ಇದೇ ಉದ್ದೇಶ ಸಾಧನೆಗಾಗಿ ರೂಪಿಸಿರುವ ಇನ್ನೊಂದು ಸಾಧನ. ವಿದೇಶಿ ಹೂಡಿಕೆ ಕಡಿಮೆಯಾಗಲು ಅದಕ್ಕಿರುವ ಹತ್ತಾರು ಅಡಚಣೆಗಳು ಕಾರಣ, ಆ ಅಡಚಣೆಗಳನ್ನು ತೆಗೆದರೆ ಅದು ರಭಸದಿಂದ ಹರಿದು ಬರುತ್ತದೆ ಎಂಬುದು ಈ ಪ್ರಸ್ತಾವದ ಹಿಂದಿರುವ ತರ್ಕ.



ಉದಾಹರಣೆಗೆ, ವಿದ್ಯುತ್ ವಲಯದಲ್ಲಿ ವಿದೇಶಿ ಹೂಡಿಕೆ ಬರಲು ಸರಕಾರೀ ಕೇಂದ್ರ/ರಾಜ್ಯ/ಸ್ಥಳೀಯ ಮಟ್ಟಗಳ ಇಲಾಖೆಗಳು, ಮಂತ್ರಾಲಯಗಳು ಇತ್ಯಾದಿಗಳಿಂದ 'ಕ್ಲಿಯರೆನ್ಸ್'ಗಳು ಅಂದರೆ ಅನುಮತಿಗಳನ್ನು ಪಡೆಯಬೇಕಂತೆ. ಇದನ್ನೆಲ್ಲ ತಪ್ಪಿಸಲು ಈ ಹೊಸ 'ವಾಹನ'ವಂತೆ. ಇದು ಈ 'ಕ್ಲಿಯರೆನ್ಸ್' ಪಡೆಯುವ ಜವಾಬ್ದಾರಿಯನ್ನು ಖಾಸಗಿಯವರಿಂದ ಸರಕಾರದ ಹೆಗಲ ಮೇಲೆ ವರ್ಗಾಯಿಸಿ, ಹೂಡಿಕೆದಾರರಲ್ಲಿ ಭಾರತದ ಬಗ್ಗೆ ಬಂದಿರುವ 'ನಕಾರಾತ್ಮಕ' ಭಾವನೆಯನ್ನು ಹೋಗಲಾಡಿಸುತ್ತದಂತೆ.

ಅಂದರೆ ಈ ಎಸ್‌ಪಿವಿ ಸಮಸ್ತ ಮೂಲರಚನೆ ವಲಯದಲ್ಲಿ ಸಾರ್ವಜನಿಕ ಖರ್ಚಿನಿಂದ ಸಿದ್ಧ ಪ್ರಾಜೆಕ್ಟುಗಳನ್ನು ನಿರ್ಮಿಸಿ ಅವನ್ನು ಕಾರ್ಪೊರೇಟ್‌ಗಳನ್ನು ವಹಿಸಿಕೊಂಡು ಲಾಭ ಗಳಿಸಲು ಅವಕಾಶ ಮಾಡಿಕೊಡುವ ಸಾಧನ. ಹೀಗೆ ಈ ಎಸ್‌ಪಿವಿ ಎಂಬುದು ಖಾಸಗಿಯವರ ಲಾಭವನ್ನು ಗರಿಷ್ಟಗೊಳಿಸುವ ಇನ್ನೊಂದು ದಾರಿ ಮಾತ್ರವಲ್ಲ, ಪಿಪಿಪಿಗಿಂತಲೂ 'ಮೇಲ್ಮಟ್ಟ'ದ ಸಾಧನ. ಪಿಪಿಪಿ ಎಂಬುದು ಚುನಾಯಿತ ಸರಕಾರದ. ನೇತೃತ್ವದಲ್ಲಿ ಯೋಜನಾಬದ್ಧ ಅಭಿವೃದ್ಧಿಯನ್ನು ಕೈಬಿಡಬೇಕೆಂಬ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಒಂದು 'ಅಮೋಘ' ಸಲಹೆಯಾದರೆ, ಪಿಪಿಪಿ ಅದನ್ನು ಇನ್ನೊಂದು ಹಂತಕ್ಕೊಯ್ಯುವ ಹುನ್ನಾರ(ಬಾಕ್ಸ್ ನೋಡಿ).

ಆದರೆ ವಿದೇಶಿ ಹೂಡಿಕೆ ಇಳಿಮುಖವಾಗಲು ಮಹಾ ಅರ್ಥಶಾಸ್ತ್ರಜ್ಞರಾದ ಪ್ರಧಾನ ಮಂತ್ರಿಗಳು ಮತ್ತು ಅವರ ಕಚೇರಿ ಕೊಡುವ ಕಾರಣಗಳೇ ಪ್ರಶ್ನಾರ್ಹ ಎಂಬುದನ್ನು ನಾವು ಈ ಪತ್ರಿಕೆಯ ವಿವಿಧ ವಿಶ್ಲೇಷಣೆಗಳಲ್ಲಿ ಈಗಾಗಲೇ ಗಮನಿಸಿದ್ದೇವೆ. ಆಂತರಿಕ ಬೇಡಿಕೆಯನ್ನು ಹೆಚ್ಚಿಸದಿದ್ದರೆ, ಖಾಸಗಿ ಹೂಡಿಕೆಗಳ ದರವನ್ನು ಹೆಚ್ಚಿಸಲು ಸಾಧ್ಯವಿಲ್ಲ, ಆಂತರಿಕ ಬೇಡಿಕೆ ಹೆಚ್ಚಬೇಕಾದರೆ, ಜನಸಾಮಾನ್ಯರ ಕೈಗಳಲ್ಲಿ ಕೊಳ್ಳುವ ಸಾಮರ್ಥ್ಯ ಬರಬೇಕು, ಅದು ಸರಕಾರ ಈಗ ಅನುಸರಿಸುತ್ತಿರುವ ನವ-ಉದಾರವಾದಿ ನೀತಿಗಳಿಂದ ಸಾಧ್ಯವಿಲ್ಲ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಈ ಎಸ್‌ಪಿವಿ ಕೂಡ ಅಂತಹುದೇ ದೇಶಕ್ಕೆ, 'ಆಮ್ ಆದ್ಮಿ'ಗೆ ಯಾವುದೇ ಪ್ರಯೋಜನ ತರದ, ಆದರೆ ಖಾಸಗಿಯವರ ಲಾಭವನ್ನು ಗರಿಷ್ಟಗೊಳಿಸುವ ಉದ್ದೇಶ ಸಾಧಿಸಬಲ್ಲ ಇನ್ನೊಂದು 'ವಾಹನ' ಎಂಬುದು ಕೂಡ ಸ್ಪಷ್ಟ.

ಇಂತಹ ದೋಷಪೂರ್ಣ ನಿಲುವಿಗೆ ಅಂಟಿಕೊಂಡಿರುವ ಯುಪಿಎ-2 ಪ್ರಧಾನಿಗಳು ಆರ್ಥಿಕ ನೀತಿಗಳ ಮೇಲೆ ತಮಗೆ ಸಲಹೆ ನೀಡಲು ಒಂದು ಪರಿಣತರ ಸಮಿತಿಯನ್ನು ರಚಿಸುವ ಬಗ್ಗೆ ಯೋಚಿಸುತ್ತಿದ್ದಾರಂತೆ. ಇವರೆಲ್ಲ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ತತ್ವಗಳನ್ನು ರಕ್ತಗತ ಮಾಡಿಕೊಂಡವರೇ ಎಂದು ಬೇರೆ ಹೇಳಬೇಕಾಗಿಲ್ಲ.

★

ಅಂಬಾನಿಯ ಮಾತಿಗೆ ಪ್ರಧಾನಿಗಳೇಕೆ ಕಿವಿಗೊಡಬೇಕು?

ಇದು ಸಿಪಿಐ(ಎಂ) ರಾಜ್ಯಸಭಾ ಸದಸ್ಯರಾದ ತಪನ್ ಸೆನ್, ಸಿಐಟಿಯು ಪ್ರಧಾನ ಕಾರ್ಯದರ್ಶಿ, ಪ್ರಧಾನ ಮಂತ್ರಿಗಳನ್ನು ಕೇಳಿರುವ ನೇರ ಪ್ರಶ್ನೆ. ಅವರು ಮಾತ್ರವಲ್ಲ, ಸ್ವತಃ ಯುಪಿಎ-2 ಸರಕಾರದ ಪೆಟ್ರೋಲಿಯಂ ಮಂತ್ರಾಲಯ ಮತ್ತು ವಿದ್ಯುತ್ ಉತ್ಪಾದಕರ ಸಂಘ(ಎಪಿಪಿ) ಕೂಡ ಕೇಳುತ್ತಿರುವ ಪ್ರಶ್ನೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಕೃಷ್ಣ-ಗೋದಾವರಿ ಮುಖಜ ಪ್ರದೇಶದಲ್ಲಿ ಕೆಜಿ-ಡಿ6 ಎಂದು ಹೆಸರಿಸಿದ ಅನಿಲ ನಿಕ್ಷೇಪಗಳ ಶೋಧನೆಗೆ ಪರವಾನಗೆ ಪಡೆದ ಮುಕೇಶ್ ಅಂಬಾನಿಯವರ ರಿಲಯಂಸ್ ಇಂಡಸ್ಟ್ರೀಸ್ ಲಿಮಿಟೆಡ್(ಆರ್‌ಐಎಲ್) ಈ ಕುರಿತ ಐದು ವರ್ಷಗಳ ಒಪ್ಪಂದವನ್ನು ಉಲ್ಲಂಘಿಸಿ ಮಧ್ಯಂತರ ಬೆಲೆಯೇರಿಕೆಗೆ ಒತ್ತಾಯಿಸಿರುವುದರ ಹುನ್ನಾರದ ಬಗ್ಗೆ ತಪನ್ ಸೆನ್ ಆರಂಭದಿಂದಲೇ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆಯುತ್ತಾ ಬಂದಿದ್ದಾರೆ ಎಂಬುದನ್ನು ಈ ಅಂಕಣದಲ್ಲಿ ನೀವು ಓದಿರುವಿರಿ. ಮಾರ್ಚ್ 21 ರ ಪತ್ರದಲ್ಲಿ ಅಂಬಾನಿ ಬಯಸಿದಂತೆ ದರ ಏರಿಕೆ ಮಾಡಿದರೆ ಏಳುವ ಪ್ರಶ್ನೆಗಳ ಬಗ್ಗೆ ವಿವರವಾಗಿ ಚರ್ಚಿಸಿದ್ದರು. ಅದನ್ನನುಸರಿಸಿ ಮಾರ್ಚ್ 31ರಂದು ಇನ್ನೊಂದು ಪತ್ರವನ್ನೂ ಬರೆದಿದ್ದರು. ಇವೆರಡಕ್ಕೂ ಪ್ರಧಾನ ಮಂತ್ರಿಗಳಿಂದಾಗಲೀ, ಅವರ ಕಚೇರಿಯಿಂದಾಗಲೀ ಯಾವುದೇ ಸ್ಪಂದನವಿರಲಿಲ್ಲ. ಮತ್ತೆ ಮೇ 9ರಂದು ತಪನ್ ಸೆನ್ ಇನ್ನೊಂದು ಪತ್ರ ಬರೆದರು. ಕೊನೆಗೂ ಪ್ರಧಾನ ಮಂತ್ರಿಗಳ ಕಚೇರಿಯಿಂದ ಇದಕ್ಕೆ ಉತ್ತರ ಬಂತು. ಆದರೆ ಅದರಲ್ಲಿ ಹೇಳಿದ್ದಾದರೂ ಏನು? ಆರ್‌ಐಎಲ್ ನಿಂದ ಪತ್ರ ಬಂದಿದೆ, ಅದರ ಬಗ್ಗೆ ಕಾನೂನಿನ ಅಭಿಪ್ರಾಯ ಪಡೆದು ಅಧಿಕಾರಿಕ ಮಂತ್ರಿಗಳ ಗುಂಪು(ಇಜಿಒಎಂ)ನ ಮುಂದಿಡಿ ಎಂದು ಹೇಳಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯಕ್ಕೆ ಕಳಿಸಲಾಗಿದೆ ಎಂದು. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಈಗಾಗಲೇ ಪೆಟ್ರೋಲಿಯಂ ಮಂತ್ರಾಲಯ ತಿರಸ್ಕರಿಸಿರುವ ಬೇಡಿಕೆಯನ್ನು ಕುರಿತಂತೆ ಈಗ ಮತ್ತೆ ಕಾನೂನಿನ ಅಭಿಪ್ರಾಯ ತಿಳಿಯಲು ಈ ಪ್ರಶ್ನೆಯಲ್ಲಿರುವ ಸಾರ್ವಜನಿಕ ಹಿತಾಸಕ್ತಿಯಾದರೂ ಏನು ಎಂಬ ಗಹನವಾದ ಪ್ರಶ್ನೆಗೆ ಪ್ರಧಾನ ಮಂತ್ರಿಗಳ ಕಚೇರಿಯಿಂದ ಈಗಲೂ ಮೌನವ್ರತವೇ ಏಕೆ?

ವಾಸ್ತವವಾಗಿ, ಈ ರೀತಿಯ ಮಧ್ಯಪ್ರವೇಶ ಮತ್ತು ನಂತರದ ಘಟನೆಗಳು ಒಂದು ಗಂಭೀರ ಕರ್ತವ್ಯಲೋಪವಾಗುತ್ತದೆ ಎಂದು ತಪನ್ ಸೆನ್ ಮೇ 16ರಂದು ಮತ್ತೆ ಪ್ರಧಾನಿಗಳಿಗೆ ಪತ್ರದಲ್ಲಿ ನೆನಪಿಸಿದ್ದಾರೆ. ಪ್ರಸಕ್ತ ಬೆಲೆನಿಗದಿಯ ಕಾಲಾವಧಿ ಇನ್ನೂ ಮುಗಿಯುವ ಮೊದಲೇ ಕಾನೂನುಬಾಹಿರ ಗಳಿಕೆಗಾಗಿ ಖಾಸಗೀ ಕಂಪನಿ ಈ ಹತಾಶ ಪ್ರಯತ್ನ ರಾಷ್ಟ್ರೀಯ ಖಜಾನೆಗೆ ಮತ್ತು ಲಕ್ಷಾಂತರ ವಿದ್ಯುತ್ ಹಾಗೂ ರಸಗೊಬ್ಬರ ಬಳಕೆದಾರರಿಗೆ ನಷ್ಟ ಮಾಡುವಂತದ್ದು ಎಂದೂ ಅವರು ಅರ್ಥಶಾಸ್ತ್ರಜ್ಞ ಪ್ರಧಾನಿಗಳಿಗೆ ನೆನಪಿಸಬೇಕಾಗಿ ಬಂದಿದೆ.

ಈಗಾಗಲೇ ಇಜಿಒಎಂ 2010ರಲ್ಲಿ ಸಲ್ಲಿಸಿದ್ದ ಇಂತಹುದೇ ಆರ್‌ಐಎಲ್ ಕೋರಿಕೆಯನ್ನು ತಿರಸ್ಕರಿಸಿತ್ತು. ಈಗ ಮತ್ತೆ ಅಂತಹ ಕೋರಿಕೆ ಬಂದಾಗ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಇಲಾಖೆ ಅದನ್ನು ಮತ್ತೆ ತಿರಸ್ಕರಿಸಿದೆ. ಇದೇ ಮಾರ್ಚ್ ತಿಂಗಳಲ್ಲಿ ಐದುವರ್ಷಗಳ

ಪುಟ 15ಕ್ಕೆ

ಇಲ್ಲೂ ಪಿಪಿಪಿ!

ಸರಕಾರ ಹೋಟೇಲ್ ಮುಂತಾದ ವಲಯಗಳಿಂದ(ಅಲ್ಲಿ ಲಾಭ ಗಳಿಸುತ್ತಿದ್ದರೂ) ಜಾಗ ಖಾಲಿ ಮಾಡಿ, ಶಿಕ್ಷಣ, ಆರೋಗ್ಯ ಮುಂತಾದ ಕಾರ್ಯಗಳಿಗೆ ಗಮನ ಕೇಂದ್ರೀಕರಿಸಬೇಕು ಎಂದು ಹೇಳಲಾಗುತ್ತದೆ. ಆಮೇಲೆ ಸರಕಾರದ ಬಳಿ ಸಾಕಷ್ಟು ಸಂಪನ್ಮೂಲಗಳು ಇಲ್ಲವಾದ್ದರಿಂದ ಇವೆರೆಡನ್ನೂ ಖಾಸಗೀಕರಿಸುವ ಅಗತ್ಯವಿದೆ, ಸರಕಾರ ನೈರ್ಮಲ್ಯ ಮತ್ತು ನೀರು ಪೂರೈಕೆಗಷ್ಟೇ ತನ್ನನ್ನು ಸೀಮಿತಗೊಳಿಸಿಕೊಳ್ಳಬೇಕು ಎಂದು ಹೇಳಲಾಗುತ್ತದೆ. ಈಗ, ಈ ವಲಯದಲ್ಲೂ ಪಿಪಿಪಿ ತಂದು 'ಬಳಕೆದಾರ ಶುಲ್ಕ'ಗಳನ್ನು ವಸೂಲು ಮಾಡಬೇಕು ಎನ್ನುತ್ತದೆ. ಹೀಗೇ ಈ ಕತೆ ಮುಂದುವರೆಯುತ್ತದೆ. ಅಂತಿಮವಾಗಿ ಸರಕಾರಕ್ಕೆ ಸಾಮಾಜಿಕವಾಗಿ ಅಗತ್ಯವಾದ ಪ್ರಾಜೆಕ್ಟುಗಳನ್ನು ಅನುಸರಿಸಲಾಗಲೀ, ಜನತೆಯ ಇಚ್ಛಾಶಕ್ತಿಯನ್ನು ಅಭಿವ್ಯಕ್ತಗೊಳಿಸಲು ಕೂಡ ಅವಕಾಶವೇ ಉಳಿಯುವುದಿಲ್ಲ.

–'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯದಿಂದ

ಜಗದಗಲ

ಶರತ್‌ಚಂದ್ರ

ನೇಪಾಳದಲ್ಲಿ ಮತ್ತೆ ಸಂವೈಧಾನಿಕ ಬಿಕ್ಕಟ್ಟು

ಸಂವಿಧಾನ ರಚನೆಯ ಗಡುವು ಮುಗಿಯುವ ಎರಡು ವಾರಗಳ ಮೊದಲು ನೇಪಾಳದ ರಾಜಕೀಯ ಪಕ್ಷಗಳು ಕೊನೆಗೂ ಹೊಸ ಸಂವಿಧಾನದ ಮುಖ್ಯ ಲಕ್ಷಣಗಳ ಬಗ್ಗೆ ಒಮ್ಮತಕ್ಕೆ ಬಂದಿವೆ ಎಂಬ ಈ ಹಿಂದಿನ ವರದಿಯ ಬೆನ್ನಲ್ಲೇ ನೇಪಾಳ ಮತ್ತೆ ಸಂವೈಧಾನಿಕ ಬಿಕ್ಕಟ್ಟು ಎದುರಿಸುತ್ತಿದೆ. ನಾಲ್ಕು ಪಕ್ಷಗಳ ಪ್ರತಿನಿಧಿಗಳ ನಡುವೆ ಬರಲಾದ ಒಪ್ಪಂದವನ್ನೂ ಆಯಾ ಪಕ್ಷಗಳ ಇಡೀ ನಾಯಕತ್ವ ಒಪ್ಪದೆ ಹೋದವು. ಮೇ 27ರ ಒಳಗೆ ಎಲ್ಲರಿಗೂ ಒಪ್ಪಿಗೆಯಾಗುವ ಒಂದು ಸಂವಿಧಾನ ರಚಿಸುವುದು ಅಸಾಧ್ಯ ಎಂಬುದು ಸ್ಪಷ್ಟವಾದಾಗ, ಮುಂದಿನ ವ್ಯವಸ್ಥೆ ಏನು ಎಂಬ ಬಗ್ಗೆ ಚರ್ಚೆ ನಡೆದು ಆ ಬಗೆಗೂ ಸಹಮತ ಬರಲು ಸಾಧ್ಯವಾಗದೆ ಹೋಯಿತು. ಸಂವೈಧಾನಿಕ ಸಭೆಯ ಅವಧಿಯನ್ನು ಮೂರು ತಿಂಗಳ ಕಾಲ ವಿಸ್ತರಿಸುವುದು, ತುರ್ತು ಪರಿಸ್ಥಿತಿ ಘೋಷಿಸುವುದು, ಸರ್ವಪಕ್ಷೀಯ ರಾಷ್ಟ್ರೀಯ ಸರ್ಕಾರ ರಚಿಸುವುದು, ಸಂವೈಧಾನಿಕ ಸಭೆ ವಿಸರ್ಜಿಸಿ ಪುನಃ ಚುನಾವಣೆ ನಡೆಸುವುದು – ಕೆಲವು ಹಂಗಾಮಿ ವ್ಯವಸ್ಥೆ ಬಗ್ಗೆ ಬಂದ ಸೂಚನೆಗಳು.



ಈ ನಡುವೆ ಸುಪ್ರೀಂ ಕೋರ್ಟು ಮೂರು ತಿಂಗಳ ಅವಧಿ ವಿಸ್ತರಣೆಯ ಪ್ರಸ್ತಾವವನ್ನು ತಳ್ಳಿಹಾಕಿತು. ಇದರಿಂದಾಗಿ ಮೇ 27ರಂದು ಪಾರ್ಲಿಮೆಂಟು ಮತ್ತು ಸಂವೈಧಾನಿಕ ಸಭೆ ವಿಸರ್ಜನೆಯಾಗಿದೆ. ಬಾಬುರಾಂ ಭಟ್ಟಾರಾಯ್ ಅವರ ಮಾವೋವಾದಿ-ಮಾಧೇಸಿ ಸರ್ಕಾರ ಮರು ಚುನಾವಣೆಯ ಘೋಷಣೆ ಮಾಡಿದೆ. ಹಾಗೆ ಮಾಡಲು ಈ ಸರ್ಕಾರಕ್ಕೆ ಅಧಿಕಾರ ಇಲ್ಲ. ಈಗಿನ ಸರ್ಕಾರ ರಾಜೀನಾಮೆ ಕೊಟ್ಟು ಸರ್ವಪಕ್ಷೀಯ ಸರ್ಕಾರ ರಚಿಸಬೇಕು ಅಥವಾ ಅಧ್ಯಕ್ಷರು ಅಧಿಕಾರ ವಹಿಸಿಕೊಳ್ಳಬೇಕು ಎಂದು ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಪಕ್ಷಗಳು ವಾದಿಸಿವೆ. ಇದನ್ನು ಮಾವೋವಾದಿಗಳು ನಿರಾಕರಿಸಿದ್ದಾರೆ. ಈಗಿನ ಸರ್ಕಾರ ಹಂಗಾಮಿ ಸರ್ಕಾರವಾಗಿ ಮಾತ್ರ ಮುಂದುವರೆಯ ಬಹುದು. ಯಾವುದೇ ಪ್ರಮುಖ ನಿರ್ಧಾರವನ್ನು ತೆಗೆದುಕೊಳ್ಳುವಂತಿ[ಲ್ಲ]. ಆದ್ದರಿಂದ ರಾಜಕೀಯ ಸಹಮತ ರೂಪಿಸ[ಲು] ಪ್ರಯತ್ನಿಸಬೇಕು ಎಂದು ಅಧ್ಯಕ್ಷ ರಾಂ ಬರಾ[ನ್] ಹೇಳಿದ್ದಾರೆ. ಇದನ್ನು ಸರ್ಕಾರ ಟೀಕಿಸಿದೆ.

ದೇಶದಲ್ಲಿ 11 ರಾಜ್ಯಗಳಿರುವ ಫೆಡರ[ಲ್] ವ್ಯವಸ್ಥೆಗೆ ಸಹಮತ ರೂಪಿತವಾಗಿದ್ದರೂ, ಈ ರಾಜ್ಯಗಳ ರಚನೆಗೆ ಯಾವುದು ಆಧಾರವಾಗಿರಬೇಕು ಎಂಬುದು ಪ್ರಮು[ಖ] ವಿವಾದದ ವಿಷಯವಾಗಿದೆ. ರಾಜ್ಯಗಳು ಬಹು- ಬುಡಕಟ್ಟುಗಳ ಘಟಕವಾಗಿರಬೇಕು ಎಂದು ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಪಕ್ಷಗಳು ಬಯಸಿ[ದರೆ] ಮಾವೋವಾದಿ-ಮಾಧೇಸಿ ಪಕ್ಷಗಳು ರಾ[ಜ್ಯಗಳು] ಏಕ-ಬುಡಕಟ್ಟು ಆಧಾರಿತವಾಗಿರಬೇಕೆಂದು ಪಟ್ಟು ಹಿಡಿದಿವೆ. ಯಾವುದೇ ರಾಜಕೀಯ ಶಕ್ತಿ ಬಿಕ್ಕ[ಟ್ಟಿನ] ಪರಿಹಾರದತ್ತ ಮುಖ ಮಾಡದೆ ಸಂವೈಧಾನಿ[ಕ] ಬಿಕ್ಕಟ್ಟು ಇನ್ನಷ್ಟು ಕಗ್ಗಂಟಾಗುತ್ತಾ ನಡೆದಿದೆ. ರಾಜಕೀಯ ಸಹಮತ ರೂಪಿತವಾಗದಿದ್ದ[ರೆ] ನೇಪಾಳದಲ್ಲಿ ಭದ್ರ ಪ್ರಜಾಪ್ರಭುತ್ವ ವ್ಯವಸ್ಥೆ ಕಟ್ಟು[ವ] ಬಗೆಗಿನ ಜನತೆಯ ಜನಾದೇಶ ಪಾಲಿಸಿದಂ[ತೆ] ಜನಾಂದೋಲನದ ಆಶಯ ಈಡೇರಿಸಿದಂ[ತೆ] ಆಗುವುದಿಲ್ಲ. ನೇಪಾಳದಲ್ಲಿ ಪ್ರಜಾಪ್ರಭುತ್ವ ವ್ಯವ[ಸ್ಥೆ] ಕಟ್ಟುವ ಚಾರಿತ್ರಿಕ ಅವಕಾಶ ಪೋ[ಲು] ಮಾಡಿದಂತೆ ಆಗುತ್ತದೆ.

...ಬೀಡಿ ಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ

ಪುಟ 6 ರಿಂದ

ಉಡುಪಿ ಜಿಲ್ಲೆಯಲ್ಲಿ ಆರಂಭಗೊಂಡಿದ್ದು, ಧರಣಿ ಸತ್ಯಾಗ್ರಹವು ಉಡುಪಿ ತಾಲೂಕು ಕಚೇರಿ ಎದುರು ನಡೆಯುತ್ತಿದೆ.

ಬೀಡಿ ಕಾರ್ಮಿಕರ ಫೆಡರೇಶನ್ನಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮೇಶ್ ಮೆಂಡನ್, ಕೋಶಾಧಿಕಾರಿ ದೋಗು ಸುವರ್ಣ ಮತ್ತಿತರರು ಉಪಸ್ಥಿತರಿದ್ದರು.

ಬಂಟ್ವಾಳ: ಬಂಟ್ವಾಳ ತಾಲೂಕಿನ ಬಿ.ಸಿ.ರೋಡ್ ಭಾರತ್ ಬೀಡಿ ಕಂಪೆನಿ ಎದುರು ಸಿಐಟಿಯು ಬಂಟ್ವಾಳ ಫಿರ್ಕಾ ಬೀಡಿ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಮೇ 28 ರಂದು ಬೀಡಿ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವನ್ನು ಸಂಘದ ನೇತಾರರಾದ ಸಂಜೀವ ಬಂಗೇರ, ಉದಯ ಕುಮಾರ್, ವಿಟ್ಲ ಫಿರ್ಕಾ ಬೀಡಿ ಕಾರ್ಮಿಕ ಸಂಘದ ಅಧ್ಯಕ್ಷ ರಾಮಣ್ಣ ವಿಟ್ಲ ಮತ್ತಿತರರು ವಹಿಸಿದ್ದರು.

ಬೀಡಿ ಗುತ್ತಿಗೆದಾರರಿಂದಲೂ ಧರಣಿ:

ಕನಿಷ್ಠ ಕೂಲಿಗಾಗಿ ಒತ್ತಾಯಿಸಿ ಕಳೆದ ಐದು ದಿನಗಳಿಂದ ಬೀಡಿ ಕಾರ್ಮಿಕರು ಕರಾವಳಿಯಾದ್ಯಂತ ಕೆಲಸ ಸ್ಥಗಿತಗೊಳಿಸಿ ಮುಷ್ಕರ ನಡೆಸುತ್ತಿದ್ದರೆ, ಕಮೀಷನ್‌ಗೆ ಒತ್ತಾಯಿಸಿ ಕೆಲಸ ಸ್ಥಗಿತಗೊಳಿಸಿರುವ ಬೀಡಿ ಗುತ್ತಿಗೆದಾರರು ಮೇ 29 ರಂದು ಮಂಗಳೂರಿನ ಭಾರತ್ ಬೀಡಿ ಕಂಪೆನಿ ಎದುರು ಧರಣಿ ನಡೆಸಿದರು.

ಮುಂದುವರಿದಿದೆ ಬೀಡಿ ಕಾರ್ಮಿಕರ ಸಮರ:

ರಾಜ್ಯಾದ್ಯಂತ ಸುಮಾರು 10 ಲಕ್ಷ ಮಂದಿ ಬೀಡಿ ಕಾರ್ಮಿಕರಿದ್ದಾರೆ. ಇವರಲ್ಲಿ ಮುಕ್ಕಾಲು ಭಾಗ ಕಾರ್ಮಿಕರು ಕರಾವಳಿ ಜಿಲ್ಲೆಗಳಲ್ಲಿಯೇ ಇದ್ದಾರೆ. ಇಷ್ಟೊಂದು ದೊಡ್ಡ ವಿಭಾಗದ ಶ್ರಮಿಕ ವರ್ಗದ ಕುರಿತು ಸರಕಾರದ ಉಪಸಮಿತಿಯೇ ಕೈಗೊಂಡಿರುವ ತೀರ್ಮಾನವನ್ನು ರಾಜ್ಯಪತ್ರದಲ್ಲಿ ಪ್ರಕಟಣೆ ಮಾಡದೆ ಮಾಲಕರ ಮೋಸಕ್ಕೆ ಸರಕಾರವೇ ಪ್ರೇರಣೆ ನೀಡುತ್ತಿದೆ. ಮಾಲಕರು ಹಾಗೂ ಸರ್ಕಾರ ಶೀಘ್ರಾತಿಶೀಘ್ರ ಒಪ್ಪಿಕೊಂಡ ಕನಿಷ್ಠ ಕೂಲಿ ತೀರ್ಮಾನ ವನ್ನು ಅನುಷ್ಠಾನ ಕೈಗೊಳ್ಳದೇ ಹೋದರೆ, ಬೀಡಿ ಕಾರ್ಮಿಕರ ಸಮರ ಇನ್ನಷ್ಟು ತೀವ್ರತೆಗೆ ತಲುಪುವ ಎಲ್ಲಾ ಲಕ್ಷಣಗಳೂ ಕಂಡು ಬರುತ್ತಿವೆ. ಮೊಳಗುವ ಎಚ್ಚರಿಕೆ ಗಂಟೆಗೆ ಸರಕಾರವೂ ಮಾಲಕರೂ ಕಿವುಡಾಗದೇ ಇರಲಿ.

ಈಜಿಪ್ಟ್ ಚುನಾವಣೆಗಳು – ಅತ್ತ ದರಿ ಇತ್ತ ಪುಲಿ

ಈಜಿಪ್ಟ್ ಅಧ್ಯಕ್ಷೀಯ ಚುನಾವಣೆಗಳು ನಡೆದಿದ್ದು ಮೊದಲ ಸುತ್ತಿನಲ್ಲಿ ಯಾವ ಅಭ್ಯರ್ಥಿಗೂ ಶೇ50ಕ್ಕಿಂತ ಹೆಚ್ಚು ಮತ ಬರದೆ, ಎರಡನೇ ಸುತ್ತಿನ ಚುನಾವಣೆ ನಡೆಯುವುದು ಅನಿವಾರ್ಯವಾಗಿದೆ. ಮುಸ್ಲಿಂ ಬ್ರದರ್‌ಹುಡ್‌ನ ಮುಹಮ್ಮದ್ ಮುರ್ಸಿ (ಶೇ. 24.8) ಮತ್ತು ಸ್ವತಂತ್ರ (ಆದರೆ ಹಿಂದಿನ ಮುಬಾರಕ್ ಸರ್ವಾಧಿಕಾರಿ ಆಡಳಿತದಲ್ಲಿ ಪ್ರಧಾನಿಯಾಗಿದ್ದ) ಅಭ್ಯರ್ಥಿ ಅಹ್ಮದ್ ಶಫಿಕ್ (ಶೇ.23.7) ಮೊದಲ ಸುತ್ತಿನಲ್ಲಿ ಅತಿ ಹೆಚ್ಚು ಮತಪಡೆದಿದ್ದಾರೆ. ಜೂನ್ 16-17 ರಂದು ನಡೆಯಲಿರುವ ಎರಡನೇ ಸುತ್ತಿನಲ್ಲಿ ಈ ಎರಡು ಅಭ್ಯರ್ಥಿಗಳ ನಡುವೆ ಮಾತ್ರ ಸ್ಪರ್ಧೆ ಇರುತ್ತದೆ. ಆದರೆ ಈ ಎರಡು ಅಭ್ಯರ್ಥಿಗಳು ಒಟ್ಟಾಗಿ ಮೊದಲ ಸುತ್ತಿನಲ್ಲಿ ಶೇ. 50 ರಷ್ಟು ಸಹ ಮತ ಗಳಿಸಿಲ್ಲ. ಅವರ ಮಧ್ಯೆ ಶೇ.1 ರಷ್ಟು ಮಾತ್ರ ವ್ಯತ್ಯಾಸ ಇದೆ.

ಇನ್ನೊಂದು ವಿಪರ್ಯಾಸವೆಂದರೆ ಈ ಎರಡೂ ಅಭ್ಯರ್ಥಿಗಳೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರಲ್ಲ. 'ತಹ್ರೀರ್ ಚೌಕ'ದ ಜನತಾ ದಂಗೆಯ ಮೂಲಕ ಪ್ರಜಾಪ್ರಭುತ್ವ ಬಯಸಿದ ಜನತೆಯ ಆಶಯ ಈಡೇರಿಸುವವರಲ್ಲ. ಅಹ್ಮದ್ ಶಫಿಕ್ ಮುಬಾರಕ್ ಅವರ 'ಮಿಲಿಟರಿ ಫ್ಯಾಸಿಸ್ಟ್' ಆಡಳಿತ ವಾಪಸು ಸ್ಥಾಪಿಸ ಬಯಸಿದರೆ, ಮುಹಮ್ಮದ್ ಮುರ್ಸಿ 'ಇಸ್ಲಾಮಿಕ್ ಮೂಲಭೂತವಾದಿ' ಆಡಳಿತ ಸ್ಥಾಪಿ[ಸಲು] ಬಯಸುತ್ತಾರೆ. ಆದ್ದರಿಂದ ಪ್ರಜಾಪ್ರಭು[ತ್ವ] ಬಯಸಿದ ಜನತೆಗೆ 'ಅತ್ತ ದರಿ ಇತ್ತ ಪುಲಿ' ಎಂಬಂತಹ ಪರಿಸ್ಥಿತಿ ಉಂಟಾಗಿ, ಎರಡನೇ ಸುತ್ತಿನಲ್ಲಿ ಆಯ್ಕೆ ಇಲ್ಲದಂತಾಗಿದೆ.

ಜಾತ್ಯತೀತ ಪ್ರಜಾಪ್ರಭುತ್ವವಾದಿ ಮತದಾರರು ಬಹುಮತದಲ್ಲಿ ಇದ್ದರೂ, ಅವರಿಗೆ ಗಟ್ಟಿಯಾ[ದ] ಅಭ್ಯರ್ಥಿ ಸಿಗದೆ ಅವರ ಮತಗಳು ಹರಿದು ಹಂಚಿಹೋಗಿ ಎರಡನೇ ಸುತ್ತಿನಲ್ಲಿ ಯಾವುದೇ ಜಾತ್ಯತೀತ ಪ್ರಜಾಪ್ರಭುತ್ವವಾದಿ ಅಭ್ಯರ್ಥಿಯ ಅವಕಾಶ ಇಲ್ಲದ ಪರಿಸ್ಥಿತಿ ಉಂಟಾಗಿದೆ. ನಾಸ್ಸೆರೈಟ್ ಡಿಗ್ನಿಟಿ ಪಾರ್ಟಿಯ ಹಮ್ದೀನ್ ಸಬಾಹಿ ಶೇ.20.5 ಮತ ಪಡೆದು ಮೂರನೇ ಸ್ಥಾನದಲ್ಲಿದ್ದರು.

'ತಹ್ರೀರ್ ಚೌಕ'ದ ಜನತಾ ದಂಗೆಯ ಯು[ವ] ಪ್ರಜಾಪ್ರಭುತ್ವವಾದಿ ಹೋರಾಟಗಾರರ ಕೆಚ್ಚು ಸ್ಥೈರ್ಯ ವ್ಯರ್ಥವಾಗಿ, ನಿಜವಾದ ಪ್ರಜಾಪ್ರಭು[ತ್ವ] ವ್ಯವಸ್ಥೆ ಸ್ಥಾಪಿತವಾಗುವ ಸಾಧ್ಯ[ತೆ] ಕಡಿಮೆಯಾಗುತ್ತಾ ನಡೆದಿದೆ. ಎರಡನೇ ಸುತ್ತಿನ[ಲ್ಲಿ] ಯಾರೇ ಆಯ್ಕೆಯಾದರೂ ತಮ್ಮ ಪ್ರಜಾಪ್ರಭುತ್ವ ವಿರೋಧಿ ಮುಖ ತೋರಿಸಲಾರಂಭಿಸಿ[ದ] ಕೂಡಲೇ ಇನ್ನೊಂದು ಸುತ್ತಿನ ದಂಗೆ, ಅಲ್ಲೋ[ಲ] ಕಲ್ಲೋಲ ಅನಿವಾರ್ಯ ಎಂಬಂತೆ ಕಾಣುತ್ತಿದೆ.

...ಯುಪಿಎ ದರ್ಬಾರ್......

ಪುಟ 13 ರಿಂದ

ಒಪ್ಪಂದದ ಅವಧಿ ಮುಗಿಯುವ ವರೆಗೆ ಈ ಹಿಂದೆ ಇಜಿಒಎಂ ಅಂತಿಮಗೊಳಿಸಿದ ದರವನ್ನೇ ಆರ್‌ಐಎಲ್ ಪಾಲಿಸಬೇಕು ಎಂದು ಸಂಸತ್ತಿಗೂ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಲಾಗಿತ್ತು. ಇಷ್ಟೆಲ್ಲಾ ಇರುವಾಗ ಪ್ರಧಾನ ಮಂತ್ರಿಗಳ ಕಚೇರಿ ಕಾನೂನು ಅಭಿಪ್ರಾಯ ಪಡೆಯುವ ಮೂಲಕ ಇವನ್ನೆಲ್ಲ ಬದಿಗೊತ್ತಿದರೆ ಅದು ಕೂಡ ಕರ್ತವ್ಯಲೋಪವಾಗುತ್ತದೆ ಎಂದೂ ತಪನ್ ಸೇನ್ ಪ್ರಧಾನ ಮಂತ್ರಿಗಳಿಗೆ ಪತ್ರದಲ್ಲಿ ನೆನಪಿಸಿದ್ದಾರೆ.

ಕಾನೂನು ಅಭಿಪ್ರಾಯ ಪಡೆಯುವ ನೆಪದಲ್ಲಿ ಕೋಟ್ಯಂತರ ಭಾರತೀಯರ ವಿರುದ್ಧ ರಿಲಯನ್ಸ್ ಇಂಡಸ್ಟ್ರೀಸ್‌ಗೆ ಅನುಕೂಲ ಮಾಡಿಕೊಡಲು ಮುಂದಾಗುವ ಬದಲು ಕೆಜಿಡಿ6 ರಲ್ಲಿ ಅನಿಲ ಉತ್ಪಾದನೆಯ ನಿಜವಾದ ಖರ್ಚನ್ನು ಲೆಕ್ಕ ಹಾಕುವಂತೆ ದರ ಆಯೋಗ(ಟ್ಯಾರಿಫ್ ಕಮಿಶನ್)ಕ್ಕೆ ಹೇಳಬೇಕು. ಅದೇ ವೇಳೆಗೆ ಆರ್‌ಐಎಲ್ ನ ಕೋರಿಕೆಯನ್ನು ಪರೀಕ್ಷಣೆಗಾಗಿ ಮಹಾಲೆಕ್ಕ ಪರಿಶೋಧಕ(ಸಿಎಜಿ)ಗೆ ಕಳಿಸಬೇಕು ಎಂದು ತಪನ್ ಸೇನ್ ಅಭಿಪ್ರಾಯ ಪಟ್ಟಿದ್ದಾರೆ.

ಪೆಟ್ರೋಲಿಯಂ ಮಂತ್ರಾಲಯ ತೀರಾ ಇತ್ತೀಚೆಗೆ, ಮಾರ್ಚ್ ೯ ತಿಂಗಳಲ್ಲೂ ಬೆಲೆ ಪರಿಷ್ಕರಣೆಗೆ ಕಾರಣಗಳೇನೂ ಇಲ್ಲ, ಹಾಗೆ ಪರಿಷ್ಕರಣೆ ಮಾಡಿದರೆ, ರಾಷ್ಟ್ರೀಯ ಖಜಾನೆಯ ಮೇಲೆ ಮತ್ತು ಬಳಕೆದಾರರ ಮೇಲೆ 800 ಕೋಟಿ ಡಾಲರುಗಳು , ಅಂದರೆ ಸುಮಾರು 45 ಸಾವಿರ ಕೋಟಿ ರೂ.ಗಳ ಹೊರೆ ಬೀಳುತ್ತದೆ ಎಂದಿದೆ. ವಿದ್ಯುತ್ ಉತ್ಪಾದಕರ ಸಂಘ(ಎಪಿಪಿ) ಕೂಡ ಆರ್‌ಐ ಎಲ್ ಕೋರಿಕೆಯನ್ನು ಒಪ್ಪುವ ಅಗತ್ಯವಿಲ್ಲ, ಹಾಗೇನಾದರೂ ಒಪಿದರೆ ವಿದ್ಯುತ್ ಉತ್ಪಾದನಾ ವೆಚ್ಚ ಪ್ರತ ಒಂದು ಡಾಲರ್ ಹೆಚ್ಚಳಕರಕ ಯೂನಿಟ್ಟಿಗೆ 50 ಪೈಸಯೆಯಂತೆ ಹೆಚ್ಚುತ್ತದೆ, ಇದರಿಂದ ವಿದ್ಯುತ್ ವಲಯಕ್ಕೆ ಈ ಇಂಧನವನನು ಖರೀದಿಸಲಾಗಸ ಸ್ಥಿತಿ ಉಂಟಾಗುತ್ತದೆ ಎಂದು ಎಚ್ಚರಿಸಿದೆ.

ಆದರೂ ಮಹಾಪ್ರಾಮಾಣಿಕರು ಎಂದು ಕಾಂಗ್ರೆಸ್ ಹೇಳಿಕೊಳ್ಳುವ ಪ್ರಧಾನ ಮಂತ್ರಿಗಳು ಆರ್‌ಐಎಲ್ ಕೋರಿಕೆಯನುಲ್ನೇರವಾಗಿ ತಿರಸ್ಕರಿಸುತ್ತಿಲ್ಲವೇಕೆ?

★

ಹಣದುಬ್ಬರ: ಯುಪಿಎ–1 ರ ಐದು ವರ್ಷಗಳ ದಾಖಲೆಯನ್ನು ಮೂರೇ ವರ್ಷಗಳಲ್ಲಿ ಮೀರಿಸಿದ ಯುಪಿಎ–2

ಯುಪಿಎ–1 ಸರಕಾರದ ಒಟ್ಟು ಅಧಿಕಾರಾವಧಿಯಲ್ಲಿ ಸಗಟು ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ 28 ಶೇ. ಆದರೆ ಯುಪಿಎ–2 ಸರಕಾರ ಈ ಮೂರು ವರ್ಷಗಳಲ್ಲೇ 29.5ಶೇ. ತಲುಪಿ ಈ ದಾಖಲೆಯನ್ನು ಮೀರಿಸಿದೆ. ನಿಜ, ಇದು ಯುಪಿಎ–2 ಸರಕಾರದ 'ರಿಪೋರ್ಟ್ ಕಾರ್ಡ್'ನಲ್ಲಿ ತಿಳಿಸಿರುವ ಮಾಹಿತಿ ಅಲ್ಲ. ಎನ್‌ಎಸ್‌ಎಸ್‌ಒ ಸರ್ವೆಯ ಅಂಕಿ–ಅಂಶಗಳನ್ನು ಆಧರಿಸಿದ ವಿಶ್ಲೇಷಣೆಯಿಂದ ಕಂಡು ಬಂದಿರುವ ಸಂಗತಿ. ಇನ್ನೂ ಗಮನಾರ್ಹ ಸಂಗತಿಯೆಂದರೆ ಮೇ 2004ರಿಂದ ಮೇ2009ರ ಅವಧಿಯಲ್ಲಿ, ಅಂದರೆ ಯುಪಿಎ–1 ಸರಕಾರದ ಅವಧಿಯಲ್ಲಿ ವಿಪರೀತ ಬೆಲೆಯೇರಿಕೆಯಾದದ್ದು ಪ್ರಾಥಮಿಕ ಆಹಾರ ಸಾಮಗ್ರಿಗದ್ದೇ.. ಮೇ2009 ರಿಂದ ಮೇ2012 ರ ನಡುವಿನ ಯುಪಿಎ–2 ಸರಕಾರದ ಈ ಮೂರುವರ್ಷಗಳಲ್ಲಿ ಈ ಪ್ರವೃತ್ತಿಯನ್ನು 'ಕಾಯ್ದು'ಕೊಂಡು ಅದನ್ನು .ಇನ್ನಷ್ಟು 'ಉತ್ತಮಪಡಿಸಿ'ಕೊಳ್ಳಲಾಗಿದೆ. ಈ ಮೂರು ವರ್ಷಗಳಲ್ಲೇ ಅದು 45.6 ಶೇ. ದಾಟಿದೆ! ಕಳೆದ ಎಂಟು ವರ್ಷಗಳಲ್ಲಿ ಪ್ರಾಥಮಿಕ ಸರಕುಗಳ ಬೆಲೆಗಳಲ್ಲಿ 119ಶೇ. ಹೆಚ್ಚಳವಾಗಿದೆ– ಇದೀಗ 'ಆಮ್ ಆದ್ಮಿ'ಯ ಮಂತ್ರ ಜಪಿಸುವ ಸರಕಾರದ ದಾಖಲೆ.

ಭಾ – ಜಪ !

ಎಲ್ಲಾ ಸಮಸ್ಯೆಗಳಿಗೂ
ಭಾ – 'ಜಪ'ವೇ ಪರಿಹಾರ
ಎಂಬುದು ನಾಲ್ಕು ವರ್ಷದ
ಹಿಂದಿನ ಪ್ರಚಾರ !
ಇಂದಿನ ಎಲ್ಲಾ ಸಮಸ್ಯೆಗೂ
ಭಾ – 'ಜಪ'ವೇ ಕಾರಣ
ಎಂಬುದು ಜನರ ಉದ್ಗಾರ !
ಆಯ್ತು ಇವರಿಗೆ ಪಾಠ ಕಲಿಸೋಣ
ಎಂಬುದು ಮತದಾರರ ನಿರ್ಧಾರ !
ಅಷ್ಟರೊಳಗೆ ದುಡುಕೊಳ್ಳೋಣ
ಎಂಬುದು ಭಾ – 'ಜಪ'ದ ಲೆಕ್ಕಾಚಾರ!
ಈ ಹಗ್ಗ ಜಗ್ಗಾಟದಲ್ಲಿ ನಾನು
ನುಜ್ಜು ಗುಜ್ಜಾದೆನಯ್ಯಾ . . .
ಹರ ಹರ ಶ್ರೀ ಯಡಿಯೂರೇಶ್ವರಾ !

– ಹುರುಕಡ್ಲಿ ಶಿವಕುಮಾರ

...ಪೆಟ್ರೋಲ್ ಬೆಲೆಯೇರಿಕೆಯ ತರ್ಕಗಳು

ಪುಟ 7 ರಿಂದ

ಪ್ರಮಾಣದಲ್ಲಿ ಏರಿಸುವುದರೊಂದಿಗೆ ಈ ಪ್ರಕ್ರಿಯೆ ಆರಂಭವಾಗಿದೆ. ಇದರಿಂದ ಈಗಾಗಲೇ ಏರುತ್ತಿರುವ ಬೆಲೆಗಳೊಂದಿಗೆ ಇದು ಇನ್ನಷ್ಟು ಹಣದುಬ್ಬರದ ಸುರುಳಿಯನ್ನು ಬಿಚ್ಚಬಹುದು ಎಂಬುದರ ಬಗ್ಗೆ ಸರಕಾರಕ್ಕೆ ಏನೇನೂ ಕಾಳಜಿಯೇ ಇದ್ದಂತಿಲ್ಲ. ಕೋಟ್ಯಂತರ ದ್ವಿಚಕ್ರ ವಾಹನಗಳು ಪೆಟ್ರೋಲಿನಲ್ಲಿಯೇ ನಡೆಯಬೇಕು ತಾನೇ?

ಬಜೆಟ್ ಮೇಲೆ ಚರ್ಚೆಗಳ ಸಾರಾಂಶವನ್ನು ಕೊಡುತ್ತ ಹಣಕಾಸು ಮಸೂದೆಯನ್ನು ಅಂಗೀಕಾರಕ್ಕೆ ಮಂಡಿಸುವಾಗ ಹಣಕಾಸು ಮಂತ್ರಿಗಳು ಕೆಟ್ಟ ಆರ್ಥಿಕ ಸಂದರ್ಭವನ್ನು ಎದುರಿಸಲು 'ಮಿತವ್ಯಯ'ದ ಸ್ಫೂರ್ತಿದಾಯಕ ಕರೆಯನ್ನು ನೀಡಿದರು. ಬೆಳವಣಿಗೆ ದರ ಇಳಿಯುತ್ತಿದೆ, ರೂಪಾಯಿ ಬೆಲೆ ಗಿರಕಿ ಹೊಡೆಯುತ್ತಿದೆ, ಏರ್ ಇಂಡಿಯಾ ನೆಲ ಕಚ್ಚಿದೆ, ಬೆಲೆಗಳು ನಾಗಾಲೋಟ ಹೂಡಿವೆ ಇತ್ಯಾದಿ, ಇತ್ಯಾದಿ– ನಿಜಕ್ಕೂ ಮಂಕು ಕವಿದ ವಾತಾವರಣ. ಇದಕ್ಕಿರುವ ಪರಿಹಾರ ಒಂದೇ– ಹಸಿದವರು ಹಸಿದಿರಬೇಕು, ಶ್ರೀಮಂತರ ಹೊಲಸು, ದುಂದು ವೆಚ್ಚಗಳು ಅಬಾಧಿತವಾಗಿ ಏರುತ್ತಲೇ ಇರಬೇಕು!

'ಮಿತವ್ಯಯ'ದ ಆಗಮನ

ಎಲ್ಲ ಅಭಿವೃದ್ಧಿ ಹೊಂದಿರುವ ದೇಶಗಳು, ನಿರ್ದಿಷ್ಟವಾಗಿ, ಯುರೋಪಿಯನ್ ಒಕ್ಕೂಟದ ದೇಶಗಳು, ಪ್ರಸಕ್ತ ಹಿಂಜರಿತದ ಕಿಡಿ ಹೊತ್ತಿಸಿದ ಹಣಕಾಸು ಕಾರ್ಪೊರೇಟುಗಳನ್ನೇ ಪಾರು ಮಾಡಲೆಂದು ಅಗಾಧ ಪ್ರಮಾಣದ ಪ್ಯಾಕೇಜುಗಳನ್ನು ಕೊಡಮಾಡಿ ಅದರಿಂದಾದ ಭಾರೀ ಸಾಲಗಳನ್ನು ಎದುರಿಸಲು ಜನಗಳ ಮೇಲೆ 'ಮಿತವ್ಯಯ'ದ ಕ್ರಮಗಳನ್ನು ಹೇರಿದವು. ಕಾರ್ಪೊರೇಟ್ ದೀವಾಳಿಗಳನ್ನು ಸಾರ್ವಭೌಮ ದೀವಾಳಿಗಳಾಗಿ ಪರಿವರ್ತಿಸಲಾಯಿತು. ಇತ್ತ ಜನಸಾಮಾನ್ಯರ ಮೇಲೆ 'ಮಿತವ್ಯಯ'ದ ಕ್ರಮಗಳನ್ನು ಭರದಿಂದ ಜಾರಿಗೊಳಿಸುತ್ತಿದ್ದರೆ, ಅತ್ತ ಖಾಸಗಿ ಬ್ಯಾಂಕುಗಳ ಮಾಲಕರು ಸರಕಾರಗಳ ಹಣದಲ್ಲಿ ಪಡೆದ ಪಾರು ಯೋಜನೆಗಳ ಮೂಲಕ ಬಿಲಿಯಗಟ್ಟಲೆ ಬೋನಸುಗಳನ್ನು ಪಡೆಯುತ್ತಿದ್ದಾರೆ. ಈ ರೀತಿ ಹೊರೆಗಳ ವರ್ಗಾವಣೆಯನ್ನು ಅನುಭವಿಸಿರುವ ಜನಗಳು ಚುನಾವಣೆಗಳಲ್ಲಿ ರೊಚ್ಚಿಗೆದ್ದು ಹೊರೆ ಹೇರಿದವರನ್ನು ತಿರಸ್ಕರಿಸುವಂತಾಗಿದೆ, ಪ್ರಸಕ್ತ ಬಿಕ್ಕಟ್ಟು ಯುರೋಪಿಯನ್ ಒಕ್ಕೂಟ ವಿಘಟನೆಯ ಬೆದರಿಕೆಯನ್ನು ಎದುರಿಸುವಂತಾಗಿದೆ.

'ಮಿತವ್ಯಯ'ವನ್ನು ಹೇರುವ ಈ ವಿಚಾರ ಈಗ ಭಾರತವನ್ನು ಪ್ರವೇಶಿಸುವ ಮೊದಲು, ಇದುವರೆಗೆ ಯುರೋಪಿನಲ್ಲಿ ಒಂಭತ್ತು ಆಳುವ ಸರಕಾರಗಳನ್ನು ಚುನಾವಣೆಗಳಲ್ಲಿ ಬಲಿ ತೆಗೆದುಕೊಂಡು ಬಂದಿದೆ. ಹೀಗೆ ಇತ್ತೀಚಿನ ಬಲಿಯೆಂದರೆ ಫ್ರಾನ್ಸಿನ ನಿಕೊಲಾಸ್ ಸಾರ್ಕೋಝಿ. ಬಹುಶಃ ಮುಂದಿನ ಸರತಿ ಜರ್ಮನಿಯ ಎಂಜೆಲಾ ಮರ್ಕೆಲ್ ಅವರದ್ದು. ಈ ಯುಪಿಎ–2 ಸರಕಾರ ಮತ್ತು ಮನಮೋಹನ್ ಸಿಂಗ್ ತಮ್ಮ ಆರ್ಥಿಕ ಧೋರಣೆಗಳ ಪ್ರಸಕ್ತ ದಿಕ್ಕನ್ನು ಬದಲಿಸದೇ ಇದ್ದಲ್ಲಿ ಅವರಿಗೂ ಇದೇ ಗತಿ ಬರಬಹುದು.

ಈಗ ಅನುಸರಿಸುತ್ತಿರುವ ಆರ್ಥಿಕ ದಿಕ್ಕಿನ ಬದಲು, ತೆರಿಗೆ ರಿಯಾಯ್ತಿ ಕೊಡುವ ಮೊತ್ತವನ್ನು ಬಿಟ್ಟುಕೊಡದೆ ಸಂಗ್ರಹಿಸಿ, ಅದನ್ನು ಭಾಗಶಃ ಹಣಕಾಸು ಕೊರತೆಯನ್ನು ನೀಗಿಸಲು ಮತ್ತು ಭಾಗಶಃ ಸಾರ್ವಜನಿಕ ಹೂಡಿಕೆಗಳಿಗೆ ಹಣಕಾಸು ಒದಗಿಸಲು ಬಳಸಿದರೆ ಒಂದು ತಾಳಿಕೆಯ ಆರೋಗ್ಯಕರ ಬೆಳವಣಿಗೆಯ ದಿಕ್ಕು ಸಾಧ್ಯವಿದೆ. ಇಂತಹ ಹೂಡಿಕೆಗಳು ಬಹು ಅಗತ್ಯವಾದ ಮೂಲರಚನೆಗಳನ್ನು ಕಟ್ಟಲು ಅವಕಾಶ ಒದಗಿಸುತ್ತಲೇ, ಸಾಕಷ್ಟು ಪ್ರಮಾಣದಲ್ಲಿ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ನಿರ್ಮಿಸ ಬಲ್ಲವು. ಇದರಿಂದ ಜನಗಳು ತಮ್ಮ ಆದಾಯಗಳನ್ನು ಖರ್ಚು ಮಾಡುತ್ತಿರುವಂತೆ ಒಟ್ಟಾರೆಯಾಗಿ ಆಂತರಿಕ ಬೇಡಿಕೆಗಳು ಏರಿ ಒಂದು ಆರೋಗ್ಯಕರ ಬೆಳವಣಿಗೆಯ ಚಕ್ರಕ್ಕೆ ಚಾಲನೆ ಸಿಗುತ್ತದೆ. ಹೂಡಿಕೆ ಜನತೆಯಲ್ಲಿ ಇರಲಿ, ಕೇವಲ ಶ್ರೀಮಂತರಲ್ಲಿ ಅಲ್ಲ. 'ಆಮ್ ಆದ್ಮಿ'ಯ ಹೆಸರು ಹೇಳಿ ಬದುಕಿರುವ ಈ ಸರಕಾರ ಜನತೆಯ ಮತ್ತು ದೇಶದ ಹಿತಗಳನ್ನು ಬಲಿಗೊಟ್ಟು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಕಾರ್ಪೊರೇಟ್ ಭಾರತವನ್ನು ತುಷ್ಟೀಕರಿಸಲಿಕ್ಕಾಗಿ ಜನಾದೇಶಕ್ಕೆ ವಿಶ್ವಾಸಘಾತ ಬಗೆಯಲು ಬಿಡಬಾರದು.

- 2010–11ರಲ್ಲಿ ಒಎನ್‌ಜಿಸಿ 18,924 ಕೋಟಿ ರೂ.ಗಳ ಲಾಭ ಗಳಿಸಿತು, ಇಂಡಿಯನ್ ಆಯಿಲ್ ಗಳಿಸಿದ ಲಾಭ 7,745 ಕೋಟಿ ರೂ.ಗಳು, ಭಾರತ್ ಪೆಟ್ರೋಲಿಯಂ 15,547 ಕೋಟಿ ರೂ.ಗಳು ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ 1,539 ಕೋಟಿ ರೂ.ಗಳು. ಎಲ್ಲಿದೆ ನಷ್ಟ ? 'ಅಂಡರ್ ರಿಕವರಿ'ಯ ರಾಗ ಹಾಡುತ್ತಾ ಯುಪಿಎ–2 ಸರಕಾರ ಯಾರನ್ನು ಮರುಳು ಮಾಡುತ್ತಿದೆ?
- ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆಗಳು ಮತ್ತು ಸುಂಕಗಳು ಕೇಂದ್ರ ಸರಕಾರಕ್ಕೆ 2010–11ರಲ್ಲಿ ರೂ.11,36,497 ಕೋಟಿ ರೂ.ಗಳ ಆದಾಯವನ್ನು ತಂದಿವೆ. ಆದರೆ ಕೇಂದ್ರ ಸರಕಾರ ತೈಲ ಕಂಪನಿಗಳಿಗೆ ನೀಡಿದ ಸಬ್ಸಿಡಿಗಳ ಮೊತ್ತ ಆಯಿಲ್ ಬಾಂಡ್(ಸಾಲಪತ್ರ)ಗಳೂ ಸೇರಿದಂತೆ ರೂ.43,926 ಕೋಟಿ. ಅಂದರೆ ಎಲ್ಲ ಸಬ್ಸಿಡಿಗಳನ್ನು ಕೊಟ್ಟ ನಂತರವೂ ಕೇಂದ್ರದ ಬಳಿ ರೂ.92,571 ಕೋಟಿ ರೂ.ಗಳ ಅಗಾಧ ಮೊತ್ತ ಉಳಿಯುತ್ತದೆ. ಯಾರು ಯಾರಿಗೆ ಸಬ್ಸಿಡಿ ಕೊಡುತ್ತಿದ್ದಾರೆ, ಮಾನ್ಯ ಪ್ರಧಾನ ಮಂತ್ರಿಗಳೇ ? ಯಾರು ಸೊಂಟಪಟ್ಟಿ ಬಿಗಿದುಕೊಳ್ಳಬೇಕಾಗಿದೆ?
- ಹಣಕಾಸು ಕೊರತೆ ಈಗ ರೂ. 5,21,980 ಕೋಟಿ ರೂ. ಇದು ನಮ್ಮ ಒಟ್ಟು ರಾಷ್ಟ್ರೀಯ ಉತ್ಪನ್ನದ. 5.9ಶೇ. ಇದೇ ವರ್ಷದ ಬಜೆಟ್ ದಸ್ತಾವೇಜಿನ ಪ್ರಕಾರ ಸರಕಾರ ಬಿಟ್ಟುಕೊಟ್ಟ ತೆರಿಗೆ ಆದಾಯದ ಮೊತ್ತ ರೂ. 5,29,432 ಕೋಟಿ. ಅರ್ಥಾತ್, ಸುಮಾರು ಎಂಟು ಸಾವಿರ ಕೋಟಿ ರೂ.ಗಳಷ್ಟು ಹೆಚ್ಚು ! ವಿದೇಶಿ ಹೂಡಿಕೆದಾರರ ಭೀತಿಗೆ ಯಾರು ಕಾರಣ?

ಪೆಟ್ರೋಲ್ ದರ ಏರಿಕೆ ವಿರುದ್ಧ ದೇಶಾದ್ಯಂತ ವ್ಯಾಪಕ ಪ್ರತಿಭಟನೆ, ಬೀದಿಗೆ ಬಂದ ಜನರ ಆಕ್ರೋಶ





ಕೇಂದ್ರದ ಕಾಂಗ್ರೆಸ್ ನೇತೃತ್ವದ ಸರ್ಕಾರ ದಿಡೀರನೆ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 8 ರೂ ಹೆಚ್ಚಳ ಮಾಡುತ್ತಿದ್ದಂತೆ ಸಿಪಿಐ(ಎಂ) ಸೇರಿದಂತೆ ಎಲ್ಲ ಎಡಪಕ್ಷಗಳು ಮೇ 31 ರಂದು ದೇಶಾದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಿದ್ದವು. ಇದಕ್ಕೆ ಸ್ಪಂದಿಸಿದ ಜನತೆ ತಮ್ಮ ಆಕ್ರೋಶವನ್ನು ಪ್ರತಿಭಟಿಸುವ ಮೂಲಕ ವ್ಯಕ್ತಪಡಿಸಿದರು.

ರಾಜ್ಯದಲ್ಲೂ ಸಿಪಿಐಎಂ ನೇತ್ರತ್ವದಲ್ಲಿ ವ್ಯಾಪಕ ಪ್ರತಿಭಟನೆ, ರಸ್ತೆ ತಡೆ, ರೈಲು ತಡೆ, ಕೇಂದ್ರ ಸರ್ಕಾರದ ಕಛೇರಿಗಳ ಮುತ್ತಿಗೆ ನಡೆಸಿ ಬಂದ್ ವಾತಾವರಣವನ್ನು ಮೂಡಿಸಲಾಗಿತ್ತು. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲೂ ಸಿಪಿಐಎಂ ನೇತೃತ್ವದಲ್ಲಿ ಜನರು ಸ್ವಯಂ ಪ್ರೇರಿತರಾಗಿ ಅಂಗಡಿ, ವ್ಯಾಪಾರ ವಹಿವಾಟುಗಳನ್ನು ಬಂದ್ ಮಾಡಿ, ವಾಹನ ಸಂಚಾರವನ್ನು ಸ್ತಗಿತಗೊಳಿಸಿದ್ದರು. ಮಂಗಳೂರಿನಲ್ಲಿ ಪ್ರತಿಭಟನೆ ನಡೆಡಸಿದ ಸಿಪಿಐಎಂ ಕಾರ್ಯಕರ್ತರು ಮಂಗಳೂರು ರೈಲ್ವೆ ನಿಲ್ದಾಣದಲ್ಲಿ ರೈಲು ತಡೆ ನಡೆಸಿದರು. ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ತೋರಣಗಲ್ ಪ್ರದೇಶಗಳೂ ಸಂಪೂರ್ಣ ಬಂದ್ ಆಗಿದ್ದು ಬಳ್ಳಾರಿ ನಗರದಲ್ಲಿ ಪಕ್ಷ ಕಾರ್ಯಕರ್ತರು ರಸ್ತೆ ತಡೆ ನಡೆಸಿದರು, ಹೊಸಪೇಟೆಯಲ್ಲಿ ಸುಮಾರು 300 ಕ್ಕೂ ಹೆಚ್ಚು ಜನ ಮೆರವಣಿಗೆ ನಡೆಸಿ ಪ್ರತಿಭಟಿಸಿದರು, ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಅಂಕೋಲ, ಕಾರವಾರಗಳು ಸಂಪೂರ್ಣ ಬಂದಾಗಿದ್ದವು, ಕೊಡಗು ಜಿಲ್ಲೆಯೂ ಪೂರ್ಣ ಬಂದಾಗಿತ್ತು. ಹುಬ್ಬಳ್ಳಿ-ದಾರವಾಡಗಳಲ್ಲಿ ಸಿಐಟಿಯು ಮತ್ತು ಎಐಟಿಯುಸಿ ನೇತೃತ್ವದಲ್ಲಿ ಪ್ರತಭಟನೆ ನಡೆಸಲಾಯಿತು. ಶಿವಮೊಗ್ಗದಲ್ಲಿ ಸಿಪಿಐಎಂ ಮತ್ತು ಜೆಡಿಎಸ್‌ನಿಂದ ಪ್ರತಿಭಟನೆ ನಡೆಸಿವೆ. ಮೈಸೂರಿನಲ್ಲಿ ಸಿಪಿಐಎಂ ಮತ್ತು ಸಿಪಿಐ ಜಂಟಿಯಾಗಿ ಬೃಹತ್ ಬೈಕ್ ರ್‍ಯಾಲಿಯನ್ನು ನಡೆಸಲಾಗಿದೆ. ತುಮಕೂರಿನಲ್ಲೂ ಜಂಟಿಯಾಗಿ ಪ್ರತಿಭಟಿಸಿ ಬಿಎಸ್‌ಎನ್‌ಎಲ್ ಕಛೇರಿಗೆ ಮುತ್ತಿಗೆ ಹಾಕಲಾಯಿತು. ಇದೇ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ತಡೆಯಲೆತ್ನಿಸಿದ ಪೋಲೀಸರೊಂದಿಗೆ ಘರ್ಷಣೆ ನಡೆದು ಕೆಲವರಿಗೆ ಗಾಯಗಳಾಗಿವೆ. ಹಾಸನದಲ್ಲಿ ಪ್ರತಿಭಟನೆ ನಡೆಸಿದ ಪಕ್ಷದ ಕಾರ್ಯಕರ್ತರು ಹಳೆ ಬಸ್ ನಿಲ್ದಾಣದ ರಸ್ತೆಯಲ್ಲಿ ಕೆಲಕಾಲ ವಾಹನಗಳನ್ನು ತಡೆದು ನಂತರ ಪ್ರದಾನ ಅಂಚೆ ಕಛೇರಿಗೆ ಮುತ್ತಿಗೆ ಹಾಕಲಾಯಿತು. ರಾಯಚೂರಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತಿಕೃತಿಯನ್ನು ಧಹಿಸಲಾಯಿತು.











ಸಿಂಧನೂರು, ಲಿಂಗಸೂರುಗಳಲ್ಲಿ ಜಂಟಿಯಾಗಿ ಬಸ್ ನಿಲ್ದಾಣದ ಬಳಿ ಪ್ರತಿಭಟನೆ ನಡೆಸಲಾಯಿತು. ಬೆಂಗಳೂರಿನ ಟೌನ್‌ಹಾಲ್ ಮುಂಬಾಗದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಆಶ್ರಯದಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಬೆಂಗಳೂರಿನ ವಿವಿಧ ಭಾಗಗಳಾದ ಕೆ.ಆರ್.ಪುರಂ, ಆನೇಕಲ್, ಚಂದಾಪುರ, ಗಾರೆಬಾವಿಪಾಳ್ಯ ಮತ್ತು ಯಲಹಂಕ ಸೇರಿದಂತೆ 10 ಕಡೆಗಳಲ್ಲಿ ಸಿಪಿಐಎಂ ನೇತೃತ್ವದಲ್ಲಿ ರಸ್ತೆ ತಡೆ ನಡೆಸಲಾಗಿದೆ. ಒಟ್ಟಾರೆಯಾಗಿ ರಾಜ್ಯದಾದ್ಯಂತ ಎಡಪಕ್ಷಗಳ ಪ್ರತಿಭಟನಾ ಕರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಜನರ ಆಕ್ರೋಶದ ಮಟ್ಟವನ್ನು ಸೂಚಿಸುತ್ತಿದೆ. ಜೊತೆಗೆ ಪ್ರತಿ ದಿನ ಬೆಲೆ ಏರಿಗೆಯ ಬಿಸಿಗೆ ತುತ್ತಾಗಿರುವ ಜನ ಸಾಮಾನ್ಯರು ಮತ್ತೊಮೆ ಏರಿಕೆಯಾಗಿರುವ ಪೆಟ್ರೋಲ್ ದರವನ್ನು ಸಹಿಸಿಕೊಳ್ಳಲಾಗಿದ್ದಾರೆ. ಮತ್ತೊಂದು ಕಡೆ ದೇಶದಲ್ಲೇ ಅತ್ಯಂತ ಹೆಚ್ಚು ಪೆಟ್ರೋಲ್ ಬೆಲೆಗೆ ಕಾರಣವಾದ ರಾಜ್ಯದ ಬಿಜೆಪಿ ಸರ್ಕಾರ ತನ್ನ ಪಾಲಿನ ತೆರಿಗೆಯನ್ನು ಕಡಿತಗೊಳಿಸುವ ಬದಲು ಪ್ರತಿಭಟನೆಯ ಸೋಗನ್ನಾಡುತ್ತಿದ್ದು ರಾಜ್ಯದ ಜನತೆಗೆ ಮೋಸ ಮಾಡಲು ಹೊರಟಿದ್ದು ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ ಎಂದು ಜನ ಸಾಮಾನ್ಯರು ದೇಶವ್ಯಾಪ್ತಿ ಮಾತನಾಡಿಕೊಳ್ಳುತ್ತಿದ್ದಾರೆ.

ದೆಹಲಿಯಲ್ಲಿ ಎಡಪಕ್ಷಗಳ ನೇತೃತ್ವದಲ್ಲಿ ಇಂಡಿಯಾ ಗೇಟ್ ಬಳಿ ರಸ್ತೆ ತಡೆ ನಡೆಸಿದ ಪ್ರತಿಭಟನಾಕಾರರನ್ನು ಪೋಲೀಸರು ಬಂಧಿಸಿದರು ಪ್ರತಿಭಟನೆಯ ನೇತೃತ್ವವಹಿಸಿದ್ದ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಪ್ರಕಾಶ್‌ಕಾರಟ್, ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚ್ಚೂರಿ, ಸಿಪಿಐನ ಮುಖಂಡರಾದ ಎ.ಬಿ.ಬರ್ದನ್, ಡಿ.ರಾಜ, ಎಐಎಫ್‌ಬಿ ಮುಖಂಡರಾದ ದರ್ಮೇಂದ್ರ ವರ್ಮರವರು ಬಂದನಕ್ಕೊಳಗಾದರು. ಹರಿಯಾಣದಲ್ಲೂ ಪ್ರತಿಭಟನೆಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ. ಪಂಜಾಬ್ ಮತ್ತು ಚಂಡಿಗಡದಲ್ಲಿ ಎಲ್ಲ ಎಡಪಕ್ಷಗಳು ಜಂಟಿಯಾಗಿ ಪ್ರತಿಬಟನಾ ದಿನವನ್ನು ಆಚರಿಸಲಾಗಿದೆ. ಶ್ರೀನಗರ, ಆಂಧ್ರ ಪ್ರದೇಶ್, ಪಶ್ಚಿಮ ಬಂಗಾಳ, ಕೇರಳ, ಮಹರಾಷ್ಟ್ರ, ತಮಿಳುನಾಡುಗಳಲ್ಲಿ ಜನರು ಎಡಪಕ್ಷಗಳ ನೇತೃತ್ವದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ●

ಎಚ್.ಆರ್.ನವೀನ್‌ಕುಮಾರ್



JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12, 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor : S.Y.GURUSHANTH